ಟಿ. ಪಿ. ಕೈಲಾಸಂ

ಸತ್ತವನ ಸಂತಾಪ

ಕಾವ್ಯಾಲಯ : ಪ್ರಕಾಶಕರು : ಜಯನಗರ
ಮೈಸೂರು 570 014

ಕನ್ನಡ ಕಾವ್ಯಮಾಲೆ

ಸತ್ತವನ ಸಂತಾಪ

ಅಥವಾ

ತ್ರಿಶಂಕುನರಕ

ಟಿ. ಪಿ. ಕೈಲಾಸಂ

ಕಾವ್ಯಾಲಯ : ಪ್ರಕಾಶಕರು : ಜಯನಗರ

ಮೈಸೂರು ೫೭೦ ೦೧೪

SATTAVANA SANTAAPA—A play in Kannada by T. P. Kailasam,
Published by Chidambaram Kudali Krishanamurthy,
Kavyalaya Publishers, Jayanagar, Mysore 14; Phone: 0821-567042;
e-mail: ckkkavyalaya@yahoo.com; New Edition 2002

ಹಕ್ಕುಗಳನ್ನು ಕಾದಿರಿಸಿದ
© All Rights Reserved by Publishers

ಆಕರ :
https://archive.org/details/unset0000unse_m6g9/page/n1/mode/2up
ಓಸಿಆರ್ ಪರಿವರ್ತನೆ : ವಿಶು [https://vishwakoshaagaara.blogspot.com/]

ಬೆಲೆ ರೂ. **25**

ಮುದ್ರಣ :
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು ೫೭೦ ೦೧೪

ಪಾತ್ರಗಳು

ನರಸಿಂಹಯ್ಯ-	ನಾಯಕ
ಶ್ಯಾನುಭೋಗ -	ಉಪನಾಯಕ
ಲಕ್ಷಮ್ಮ-	ನಾಯಕಿ (ನರಸಿಂಹಯ್ಯನ ಪತ್ನಿ)
ಕೆಂಪಮ್ಮ-	ಉಪನಾಯಕಿ (ಶ್ಯಾನುಭೋಗನ ಪತ್ನಿ)
ಧರಣಯ್ಯ-	ಊರಿನ ಧನಿಕರು
ಸದಾಶಿವಯ್ಯ-	”
ವೆಂಕಟರಮಣ ಶೆಟ್ರು-	”
ಬುಡನ್ ಸಾಹೇಬ್ -	”
ಪೋಲೀಸ್ ಆಫೀಸರ್ -	ಇನ್ಸ್‌ಪೆಕ್ಟರು
ಇಬ್ಬರು ಪಥಿಕರು -	ದಾರಿಹೋಕರು
ದನ ಕಾಯುವವರು -	ಇತರರು

ದೃಶ್ಯ ೧

[ನರಸಿಂಹಯ್ಯನ ಮನೆ ಹಜಾರ]

[Found entered: husband walking up and down the room, helped poorly by unsteady feet… wife alternately cowed and, defiant at writing desk.]

ನಾಯಕಿ : ಇದೇನ್ ಗೆಂಜ್‌ಗಾರಿಕೇ ಅಂದ್ರೆ !… ಹೀಗೆ ಐದು-ಹತ್ತು-ಹದಿನೈದೂ ಅಂತ, ನನ್ ಕೈ-ಯಿಂದ ದಿನಬಿಟ್ ದಿನ ನಮ್ಮಪ್ಪನಿಗೆ ತಿರುಪಕ್ಕೆ ಬರಸೋಕ್ ಬದಲಾಗೀ "ನಿಮ್ಮ ಅಳಿಯನೂ, ನಿಮ್ಮ ಮೊಮ್ಮಕ್ಕಳೂ, ಅವರನ್ನೋಡ್ಕೊಳ್ಳೋ ದೇವೇರಿ, ದುಡಿದೂ ದುಡಿದೂ ಹೆಣದ ಹಾಗೆ ಬಿದ್ದುಕೊಂಡಿ-ರೋ ನಿಮ್ಮ ಮಗಳೂನೂವೆ ನಿಮ್ಮ ಮನೆಗೆ ಮನೆ ಸಾಮಾನ್ಸಹಿತ ಬಂದು ಸೇರಿ, ಸಾಯೋವರ್ಗೂ ಅಲ್ಲೇ ನಾವೆಲ್ಲೂ ಇರೋಕೆ ರೈಲ್ ಛಾರ್ಜ್ನ ಕಳ್ಸೀಂ"ತ ನೀವೇ ಬರಿಯೋದು ಉತ್ತಮಾ ಅಲ್ವೇ?

ನಾಯಕ : ಲೇ!… ಯಾರಹತ್ತಿರಲೇ ನಿನ್ನ ತೌರ್ಮನೆಧೋರಣೇ? ನೀನ್ ಬರಿಯೋದೇನೂ… ನಾನು ಬರಿಯೋದೇನೂ?… ನಿನ್ನ ಈಗಲೇ ವದ್ದು ಹೊರಗೆ ಹಾಕಿದ್ರೇ ಹತ್ತ್‌ಜನ ನೋಡಿ, ಹಲ್‌ಹಲ್ ಕಿರಿ-ದೂ… ಪಟ್ಣಪಟ್ಣವೇ ಪಕ್ಕೆಗಳು ಹಿಡ್ಕೊಂಡು, ಪಕಪಕ ಪಕಾಂತ ನಕ್ಕು ಪೇಪರುಗಳಿಗೆ ಬೇರೆ ಬರ್ದು, ಅದನ್ನೋದ್ಕೋವ್ರು ಉಗದ ಉಗಳ್ನಲ್ಲಿ ಮುಳ್ಗಿ ಮೈಮುಖಾ ವೊರಸ್ಕೊಳ್ತಾ ಮಾನದಾನಕ್ಕೆ ನನ್ನ ಕಾಲಿ-ಗೆ ಬಿದ್ದು, ನನ್ನ ಹೆಬ್ಬೆಟ್ಟುಗಳ್ನ ಕಣ್ಗೆ ಒತ್ಕೊಳ್ಬೇಕಾದ ನಿಮ್ಮಪ್ಪನಿಗೆ, ನಾನೇ… ಕಡ್ಡೀ ಮಸೀಲದ್ದ್ಕೊಂಡು ಕಾಗದದ್ಮೇಲಿಟ್ಟೋಡ್ಸೋದು?… ನಾನು? ನರ… **ಸಿಮ್ಹಯ್ಯ!**… never!… (ಆರ್ಭಟಿಸುತ್ತಾ) **ಬರಿ… ಇಪ್ಪತ್ತೈದು ರೂಪಾಯಿ!**… (ಲೇಖಣಿಯನ್ನು ಹಿಡಿದ ಅರ್ಧಾಂಗಿಯ ಚಾರುಹಸ್ತವು ಚಲಿಸದಿರಲು, ಥಟ್ಟನೆ ಧ್ವನಿಯನ್ನು ಸಂಚಿಸಿ, ವಿನಯಮುದ್ರೆಯನ್ನು ಅವಲಂಬಿಸಿ) at least ೧೫… ನಿನಗೊತ್ತಿ-ಲ್ಲಾ… Circumstancesಊ… ದಮ್ಮಯ್ಯ… ಕಣೇ…

ನಾಯಕಿ : (ಮೇಜಿನಿಂದೆದ್ದು) ಹಾಗಾದ್ರೆ, ನಾನೇನು ಬರ್ಯೋದಿಲ್ಲಾ! ನೀವ್ಹೋ post-postಗೂ ಚಾಕರೀಗೆ ಅರ್ಜಿ ಬರೀತಾಲೂ... delivery... deliveryಗೂ ಬರ್ತರ್‌ಫ್ ಆರ್ಡರ್ನ ಸ್ವೀಕರಿಸ್ತಾಲೂ ಇರೋ ಸಂತೋಷ್ದಲ್ಲಿ ಮುಳುಗ್ತಾಲೂ ತೇಲ್ತಾಲೂ ಇಧೀರಿ... ನಾನಿದುವರಿವಿಗೂ ಮಕ್ಕಳ ಮ್ಯೆಗ್‌ಬಂದು... ಡಾಕ್ಟರ್ ಬರಕೊಟ್ಟ ಔಷಧಕ್ಕೆ ಅಂತಲ್ದೆ ಬೇರೆ ಯಾವುದಕ್ಕೂ ಬರೀಲಿಲ್ಲ... ನಮ್ಮಪ್ಪನಿಗೆ.... ದುಡ್ಡುಕಳ್ಸೋಕೆ! ಈಗ ಕೂಸಿನ ಮ್ಯೆಗೇನೂ ಭಯವಿಲ್ಲ. (Pointing to R. Cradle)... ಮಗುವೂ ಓಡಿಯಾಡ್ತಿಧಾನೆ... ಅವರ ಕ್ಷೇಮಾನ್ನೂ, ನಮ್ಮಪ್ಪ ಇದುವರ್ಗೂ ಕಳಿಸಿದ್‌ದುಡ್ಡಿಗೆ ನಾವು, ಅಂದ್ರೆ ನಾನು, ಕೃತಜ್ಞರಾಗಿರೋದ್ನೂ ತಿಳ್ಸೋಕೆ ಬರಿಯೋಕೆ ಪ್ರಾರಂಭಿಸಿದ್ದು... ಕಾಗದಾನ... (with set teeth).... ಇನ್ನು ಅಪ್ಪನಿಗೆ ಬರಿಯೋದಿಲ್ಲ... (ಲೇಖಣಿಯನ್ನು ಮೇಜಿನಲ್ಲಿ ನಾಟಿಕೊಳ್ಳುವಂತೆ ಕುಕ್ಕಿ... ಥಟ್ಟನೆ ಎದ್ದು ನಿಂತು) ಇನ್ನು ಮುಂದಿನ ಕ್ರಮ **ನೀವು** ನಿರ್ಧರಿಸಿದ್ದು! ಇನ್ನು ಮುಂದೆ ನೀವು, ನೀವಾಯ್ತು... ನನ್ನ ಮಕ್ಕಳು ನಾನು... ನಾವಾಯ್ತು !

[ಮೂಗನ್ನು ಸೂರಿಗೆ ಎತ್ತಿ ವಿಮುಖಳಾಗುವಳು]

ನಾಯಕ : ಆಯ್ತೋ ಇಲ್ಲವೋ!?.... ಆಗ್ಹೋಯ್ತೋ ಇಲ್ವೋ?! ಆಗೇೕ... ಹೋಯ್ತೋ ಇಲ್ವೋ?... ಖಾತ್ರಿ ತಾನೇ... ನೀನೂ ನಿನ್ನ ಮಕ್ಕೂ ನೀವಾಯ್ತೋ ಇಲ್ವೋ?... ಇನ್ನೇನೂ (ತೋಳುಗಳನ್ನು ಜೋಲಾಡಿಸುತ್ತಾ) ನಿಸ್ಸೂರಾಯ್ತು!... ವ್ಯಕ್ತಿಗೆ... ವಿವಾಹಿತನಾದ ವ್ಯಕ್ತೀಗೇ, ತನ್ನ ಕೈ ಹಿಡಿದ ಕಾಂತೇನೂ, ತನಗೆ ಹಡ್ದ ಕುವರರೂ ತಾವ್ತಾವೇ ಆದ್ಮಲೆ ತನಗೇನಿಧೆ ಬಾಕೀ...? ತಾನು ಬ್ರಹ್ಮಚಾರಿಯಾಗಿ ಹುಟ್ಟಿ, ತನಗೆ ಸಂಸಾರದ ಜವಾಬ್ದಾರೀ ಬೇಡಾ... ಬೇಡಾಂತ, ತಾನ್ ಕಾಶೀಯಾತ್ರೆಗೆ... ಜ್ಞಾಪಕ ಇಧ್ಯೇ?... ನಮ್ಮ ಮದ್ವೇದಿನಾ... ಕಾಶೀ ಯಾತ್ರೇಗೇಂತ ಹೊರ್ಟಾಗ, ತನ್ನ ಕೈಕಾಲು ಹಿಡಿದು ನಿಲ್ಸಿ, “ಕನ್ನಿಕಾದಾನ ಕೊಡ್‌ತ್ತೇನೇಂ”ತ... ಸಂಸಾರಸಾಗರದಲ್ಲಿ ಮುಳ್ಸೋಕೆ... ನನ್ನ ಕುತ್ತಿಗ್ಗೆ ನಿಮ್ಮಪ್ಪ ಕಟ್ಟಿದ ಕಲ್ಲು, ತಾನ್‌ತಾನಾಗೇ ಸಡಲಿಸ್ಕೊಂಡು ತನ್ನ ಕುತ್ಗೆಭಾರಾ ತಪ್ಪಿದ್ಮೇಲೇ... ತನಗೇನಿಟ್ಟಿಧೇ?... ನಡಿಯೋದೇ ವಾರಣಾಸೀಗೇ... ನಿನಗೆ ತಾಳೀಕಟ್ಟಿದ ದಿನ ಹೊರಟಿದ್ದ ಕಾಶಿಗೆ ಈಗ, ಈವತ್ತು, ಈದಿನ, ಈಘಳ್ಗೆ, ಈಕ್ಷಣ—ಹೊರ್ಟೆ. (ಹೊಸಲನ್ನು ಸಮೀಪಿಸಿ ಈಚೆಗೆ ಊರಿದ ವಾಮಪಾದ, ಆಚೆಗೆ ಎತ್ತಿ ಚಾಚಿದ ದಕ್ಷಿಣ ಪಾದದೊಂದಿಗೆ ತಾಂಡವಮೂರ್ತಿಯನ್ನು ಅನುಕರಿಸಿ, ಅರ್ಧಾಂಗಿಯನ್ನು ದುರುಗುಟ್ಟಿ ದೃಷ್ಟಿಸಿ, ಆರ್ಭಟಿಸಿ) ಇಕೋ ನೋಡು... ಕಾಲು ಹಾಕ್ದೆ... (makes a vigorous hopstep to-

wards the door) ನೀನು ಬಡುಕೊಳ್ಳೋದೇನಾದ್ರೂ ಇದ್ರೇ, **ಬಡ್ಕೋ** ಭೇಗ!

ನಾಯಕಿ : (ಗೋಡೆಯನ್ನು ಕುರಿತು ಗದ್ಗದ ಸ್ವರದಿಂದ) ನಂದೊಂದ್ ಕೋರಿಕೆ ಇಧೆ... ಇಷ್ಟುದೂರ ಯಾತ್ರೇಗೇಂ...ತ ಹೊರಟೇ ಬಿಟ್ಟಮೇಲೆ... ಪುನಃ ಯಾವಾಗ ಕಾಣೋದೋ ಏನೋ ಕಾಣೆ... ಕೊನೇ ಕೋರಿಕೇನೋ ಏನೋ... ಭಯವಾಗುತ್ತೆ...!

ನಾಯಕ : (ಈಕೆಯ ಸ್ವರವು ಗದ್ಗದ, ಅತಿ ಗದ್ಗದವಾಗುವ ಕ್ರಮೇಣ, ಹೊಸಲಿನಿಂದ ಹೊರಚಾಚಿದ ಅವಯವದ ಜಾನುವನ್ನು ಮಡಿಸಿ ಅವಯವವನ್ನು ಒಳತಂದು, ಪಾದವನ್ನು ನೆಲಕ್ಕೆ ಘಟ್ಟಿಸಿ, ಬಾಹುಯುಗ್ಮವನ್ನು ವಕ್ಷಸ್ಥಳದ ಮೇಲೆ ಬಿಗಿದು, ಕಟ್ಟಿ, ಸಹಧರ್ಮಿಣಿಯನ್ನು ರೌದ್ರದಿಂದೀಕ್ಷಿಸುತ್ತಾ, ಕೆಣಕಿದ ಕೇಸರಿಯ ಅಡಗು ಗರ್ಜನೆಯಂತೆ ಹೂಂಕರಿಸುತ್ತಾ) ಗೊತ್ತು!ಕೋನೇಗೆ ಕುಗ್ಗ್ತೀಯಾ ಅಂತ!! ಗೊತ್ತು... (ವದನವನ್ನು ಸೂರಿಗೆತ್ತಿ... ನಿಮೀಲಿತ ನಯನನಾಗಿ, ತಾತ್ಸಾರದಿಂದ) ಏನದ್ಕೋರ್ಕೆ? ಕಿಲ್ರುಃ!... ಕಿಲ್ರುಃ!...

ನಾಯಕಿ : (ಶೋಕಸ್ನಿಗ್ಧಸ್ವರವನ್ನು ತಾಳಿ) ಎಲ್ಲಾರಹಾಗೂ... ಇದ್ದಿದ್ರೇ ನೀವು... ಹೋಗ್‌ಬಹುದಾಗಿತ್ತು... ಕಾಶೀಗೂ... ರಾಮೇಶ್ವರಕ್ಕೂ... ಆದ್ರೇ...

ನಾಯಕ : ಓಹೋ!... ಎಲ್ಲಾರ ಹಾಗೂ ಅಲ್ವೋ... ನಾನು? ಹೂಂ...!?

ನಾಯಕಿ : ಅದಕ್ಕೆ... ಕಾಶೀಗ್ಹೋಗೋಕಿಂತ... ಅದೇನೋ... ಗೌ... ರೀ... ಶಂ... ಕ... ರ... ವಂತೆ... ಹಿಮವತ್‌ಪರ್ವತದಲ್ಲಿ.

ನಾಯಕ : (ವದನದಲ್ಲಿ ಕಾಳಸರ್ಪವನ್ನು ಕಂಡ ಗುಬ್ಬಿಯಂತೆ, ಗುಡ್ಡುಗಳನ್ನು ಹೊರಳಿಸುತ್ತಾ, ನೆಲಸಮಕ್ಕೆ ಕುಗ್ಗಿ) ಹಯ್ಯಯ್ಯೋ!... ನೀನೇನು ಹೆಂಗ್ಸೇನೇ... ಹೆಬ್ಬುಹುಲೀನೇ!.... ನನ್ನೇೕ! ನಿನ್ನ ಸ್ವಾಮೀನೇ! ನಿನ್ನ ಪ್ರಭೂನೇ!.... "ಪತಿರೇವಿಶ್ವರಪ್ರಭುಃ"ನ!... ಕ್ರಿಮೀನ ಉಜ್ಜಿದ್ಹಾಗೆ ಕಾಲ್ನಿಂದ ಒದ್ದು ಉಜ್ತೀಯಲ್ಲಾ... ಇನ್ನು ನಿನ್ನ ಶಾರ್ದೂಲ ಜಠರಕ್ಕೆ... (Suddenly snatching his

kiddies) ನನ್ನ ಈ ಶಿಶುಗಳನ್ನ ಗ್ರಾಸವಾಗಿ ಬಿಟ್ಟೋಗ್ತೇನೇಂತಿಳ್ಕೊಂಡಿಧೀಯಾ?... ವ್ಯಾಪ್ರ!... never!! ಊಹು! ನಾನಾಯ್ತು ನನ್ನ ಮಕ್ಕಳಾಯ್ತು... ನೀನಾಯ್ತು ಹರ್ದಾರಿಯಾಯ್ತು... ನಿನ್ನ ಹಾಳು ಅಪ್ಪ-ನಾಯ್ತು... ಹೊರ್ಡು ಹೊರ್ಗೆ! (ಕೈಯನ್ನು ಬೀದಿ ಬಾಗಿಲಕಡೆ ಚಾಚುವನು. ಈಕೆಯು ಬಿರುಸಾಗಿ ಹೊ-ಲಸುದಾಟಲುಪಕ್ರಮಿಸುವಳು) ಇಲ್ಬಾರೇ... ಎಲ್ಹೋಗ್ತಿಯೇ... ..ನನ್ನ ಮಾನಾಕಳಿಯೋಕೆ?... ಹೊ-ಗ್ಬೋಗಿ ಏನ್ಮಾಡ್ತೀಯೇ?... ನಿನ್ನ ಹೊಟ್ಟೆಪಾಡ್ಗೇ?...

ನಾಯಕಿ : ಮಾಡೋದೇನು?.... ನಿಮ್ಮ ಜವಾಬ್ದಾರಿ ಇಲ್ಲ. ಮಕ್ಕಳ ಜವಾಬ್ದಾರೀನೂ ಇಲ್ಲ... ಕಸೂತೀ ಕೆಲ್ಸದಲ್ಲೋ... ಇಲ್ಲ, ದೇವರ್ನಾಮ ಹೇಳ್ಕೊಡುತ್ಲೋ... ಇಲ್ಲಾ ಕಾರದಪುಡಿ ಕುಟ್ಟಿಯಾದ್ರೂನೋ... ನನ್ನ ಬದುಕು ನಾನು ಗಿಟ್ಟಿಸ್ಕೋತೇನೆ...

ನಾಯಕ : ಖಾರದಪುಡಿ ಕುಟ್ತೀಯಾ?... ಹಾಗಾದ್ರೇ ಅದಕ್ಕೆ ಬೇಕಾದ್ರೆ first class certificateನ ನಾನ್ supply ಮಾಡ್ತೀನಿ... charge ಇಲ್ದೆ. ಕೆರೇಲಿಬಿದ್ದು... ಖಾಲಿ ಹೊಟ್ಟೇಲಿ ಸತ್ತು... ಖಾರದ-ಪುಡಿ ಕುಟ್ಟೋದ್ಯಾಕೇ... ರಾತ್ರಿ ರಾತ್ರಿ ತಪ್ದೆ ಅವಲಕ್ಕಿ ಮೊಸರು ಮೆಂದೂಮೆಂದೂ ಮೋದ್ಸಿ ಮಸ್ಕೋ certificateನೂ ನಾನೇ ಒದಗಸ್ತೇನೆ... ಇಲ್ನೋಡೂ... ನಿನ್ನ ಕಣ್ಣಿಂದ ಈಗ ಸುರಿಬೇಕಾದ ನೀರು, ನೆರೆಹೊರೆಯೋರು ಕೆರೇನೀರ್ನಿಂದ ನನ್ನ ಶವಾನ ಎತ್ತಿ ತಂದ್ ಎಸೀತಾರಲ್ಲಾ, ಆಗ್ಸುರಿಯುತ್ತೆ... ನಿ-ನ್ಕಣ್ಣಿಂದ! ಹೊರ್ಟೆ... ನಿಜವಾಗಿ ಹೊರ್ಟೆ!

[Exit ರಭಸದಿಂದ]

ನಾಯಕಿ : (ದಿನವೂ ಈ ರೀತಿ ನಡೆಯಲಿದೆಯೆಂಬ ಭಾವನೆಯನ್ನು ತೋರ್ಪಡಿಸುತ್ತ, ಅಡಿಗೆಮ-ನೆಯ ಕಡೆ ಥಟ್ಟನೆ ಹೋಗಿ ಅಟ್ಟದ ಮೇಲಿಟ್ಟಿದ್ದ ಅಡಕನ್ನು ಹೊರತೆಗೆದು ನೋಡಿ ಬರಿದಾಗಿದ್ದುದ-ನ್ನು ಕಾಣುವ ಮೊದಲು "ಎಲ್ಲೀಗೆ ಹೋಗ್ತಾರೆ?... ಕಂಡೇಇಧೆ! ಹಸಿವಾಗೋ ಹೊತ್ತಿಗೆ ಹಾಲಿನಲ್ಲಿ ಹಾಜರು!" ಅನ್ನುತ್ತಿದ್ದವಳು, ಧ್ವನಿ ಬದಲಾಯಿಸಿ) ಸರಿಹೋಯ್ತು! ಬರೀ ಹೊಟ್ಟೆಯಂತೆ! ರಾತ್ರೀ-ಗೆ ಮಕ್ಕಳಿಗೇಂತ ಮಾಡಿಟ್ಟಿದ್ದ ಉಪ್ಪಿಟ್ಟಿನ ಪಾತ್ರೆ ಬರೀದು ಮಾಡಿಟ್ಟಿರೋರಿಗೆ ಬರೀಹೊಟ್ಟೆನೋ? ಸರಿ! ಅದು ಜೀರ್ಣಿಸೋವರಿಗೆ ಇವರ ಆರ್ಭಟ! ಇನ್ನು ಸಾಯಂಕಾಲಕ್ಕೆ ತಿರ್ಗೀ ಬಂದ್ಬೇರ್ತಾರೆ

ಊಟದೊಷ್ಟಿಗೆ! ಒಳ್ಳೇ ಹಣೇಬರಹ ನನ್ದು!

[ಫರದೆ]

ದೃಶ್ಯ ೨

[**ಸ್ಥಾನ** : ರಾಮಪುರದ ದೊಡ್ಡಕೆರೆಯ ಕಟ್ಟೆ]

ನಾಯಕ : (ಗಗನವನ್ನು ಆಗತಾನೇ ಆರೋಹಿಸುತ್ತಿರುವ ಸ್ವರ್ಣಕಿರಣನಾದ ರವಿಯ ಪ್ರಭಾವದಿಂದ ಪ್ರಕಾಶಿಸುವ ಪ್ರಕೃತಿ ಭಾಗ್ಯವನ್ನು ಕೆರೆಯ ಸೋಪಾನದ ಕೊನೇ ಮೆಟ್ಟಲಿನಮೇಲೆ ನಿಂತು ಗಮನಿಸುತ್ತಾ ಚಾಚಿದ ಕೈಗಳಿಂದ ವಿಹಮೇದಿನೀ ಸಂಸರ್ಗ ಚಕ್ರವನ್ನು ಅನುಕರಿಸಿ ಬೀಸುತ್ತಾ) ಕೊನೇ lookಉ! ಕೊನೇದೇನೂ... ತುದೀದೇನೂ... ಯಾವತ್ತು ಸೃಷ್ಟಿ ಆಯ್ತೋ, ಯಾವತ್ತು ಪ್ರಳಯಾ ಬರುತ್ತೋ ತಾವತ್ತೂ... ಇದೇ sunಊ, ಈಗಿಲ್ದಿರೋ ಇದೇ moonಊ, ಇದೇ treesಊ, ಇದೇ wifeಉ, ಲೊಟ್ಟುಲೊಸ್ಕು... (ಭ್ರುಕುಟಿಗಳನ್ನು ರಚಿಸುತ್ತಾ) ಅದ್ಯಾಕೋ? ಆಯಸ್ಸೆಲ್ಲಾ ಗಮನಿಸದ ಐಹಿಕ ಬಾಬತ್ತುಗಳ್ನಾ ಅಂತ್ಯಕಾಲದಲ್ಲಿ ಗಮನಿಸ್ತಾನೆ... ವ್ಯಕ್ತಿ! ಯಾಕೇನೂ... ಬಿಟ್ಟಾಗ್ನಳ್ಳಿಯೋರು, ಮ್ಯೂಸಿಯಿಂ, ಲಾಲ್ಬಾಗ್ಗ್ಳ್ಗೆ ಗ್ತಾಯ್ರೇ ಹೊರ್ತು, ಬೆಂಗಳೂರಿನೋರು "ಬಿದ್ದಿರ್ಲಿ ನಮ್ಮೂರಿನ ಕಡ್ತಾಂ"ತ ತಾತ್ಸರಿಸೋ ಹಾಗೆ (ತಾತ್ಸಾರವನ್ನು ನಟಿಸುತ್ತಾ) ನಮ್ಮ ಸೂರ್ಯ... ನಮ್ಮ ನಕ್ಷತ್ರು.... ನಮ್ಮ ಲಾಲ್ಬಾಗಲ್ಮೇಲ್ಬುಟ್ಟಿ, ನಾನ್ಗೊರಗುಟ್ಟೋವಾಗ, ನಮ್ಮ ಬಿಸಲು ಮಚ್ಚಿನಮೇಲೆ ಹಾಸ್ಕೋಗೋ ನಮ್ಮ ಚಂದ್ರೂಂತ, "possession is nine points of ಪಾಲ್ಮಾರ್ಕೆ!!" ಅಂಬೋನ್ಗೆ ಅಂತ್ಯಕಾಲಬಂತೋ!,... "ಸತ್ತಮೇಲೆ ತಿರ್ಗಿ ಇವುಗಳ್ನ ನೋಡ್ತೇನೋ ಇಲ್ವೋಂಬೋ ಸಂದೇಹದಲ್ಲಿ ನೆಂದು ನಡಗ್ತಾ ಡರಾಯಿಸ್ತಿರೋ ಮನಸ್ಸು cast ಮಾಡ್ತಿರೋದು, ಈ longing… lingering… last lookನ!.

.. ಈಗ ಬಿದ್ದು ಸತ್ತ್ನೋ... ಸತ್ತೇ ಸತ್ತೆ... ಮುಂದೇನಾದ್ರೂ ಇತ್ತೋ... ಉಂಟು... ಇಲ್ದಿದ್ರೋ... ಇಲ್ಲ! ಇಲ್ಲಾ!!... ಹೆದರ್ಕೊಂಡು ಹಿಂಜರಿದ್ನೋ, ಇದ್ದೇ ಇಧೆ... ಹಳೇ lifeಉ; jobs hunt ಮಾಡೋದು... ಜಾಬು ಸಿಕ್ತೋ sackಉ dodge ಮಾಡೋವರಿಗೂ dodge ಮಾಡೋದು; ಬಿತ್ತೋ ಬುರುಡೇಗೇ... ಸುದಾರಿಸ್ಕೊಂಡು... ತಿರ್ಗಿ ಷುರು ಷಿಕಾರಿ; "Respected Sir, Being given to understand a Vacancy".... ಎಟ್ಸೆಟ್ರಾ! ಇನ್ನು ಊರ್ನೋರೋ... ಕುರಿ ತೋಳ ಸಮಾಜ!

ಇತ್ಕಡೆ ಇಲ್ಲ ಅತ್ಕಡೆ: ಸೇರಲೇಬೇಕು. Compromiseಏ ಇಲ್ಲ. ಇನ್ನು ಮನೇಲೋ ನನ್ನ ಮಕ್ಕಳೂ ಕಸ್ಕೊಂಡು ಮುಂಗೋರೆಗಳನ್ನು ಬಿಟ್ಕೊಂಡಿರೋ ಮಾರಿ ನನ್ನ ಮನೆ ಆಕೆ... ಮತ್ತಿನ್ನೇನು option ಇದೆ ಮನುಷ್ಯನಿಗೆ?... ಮೃತ್ಯು... ಲಾಗಾಯತ್ನಿಂದ lay downಆದ Law of life and... ಮೃತ್ಯೂನೇ!!... (ಅತಿನೀಳವಾದ ನಿಟ್ಟುಸಿರನ್ನು ಉಸುರಿ, ಹಸ್ತಗಳನ್ನು ವ್ಯೋಮಕ್ಕೆತ್ತಿ ಜೋಡಿಸಿ, ಲಂಘಿಸುವ ಕ್ಷಣಾಂತ್ಯದಲ್ಲಿ ಥಟ್ಟನೆ ಸ್ತಬ್ಧವಾಗಿ)

ಹೌದೂ!!... ಆಳ?... (smiling)... ಒಳ್ಳೇ ಹುಚ್ಚು ನಾನು! ಅಸುಗಳ್ನ ವದ್ರೋನಿಗೆ ಆಳಬೇಕೇ!... ಮೂಗ್ಮುಳ್ಗೋಷ್ಟು ನೀರಿಗಿಂತ ಬೇಕೇ... **ಮೃತ್ಯು**ವಿನ ಭೇಟೀಗೆ? (ಪೂರ್ವೋಕ್ತಲಂಘಿಸಲುಪಕ್ರಮಿಸಿ ಸ್ತಂಭಿತನಾಗಿ)... ಭಂಡೆಗ್ಳು!!... ಭಂಡೆ ಇದ್ದ ಕಡೆ ಮುಳ್ಗಿ, ಮಂಡೆಗೆ ತಾಕಿ ಬುರ್ಡೆ ಬಿರ್ದು, ರಕ್ತ-ಕಕ್ಕಿ, ಮೂರ್ಛೆ ಆದ ನನ್ನ ಮೊಣಕಾಲಾಳ್ನೀರ್ನಿಂದ ದಡಕ್ಕೆಳದ್ಹಾಕಿದ ಊರ್ನೋರು, ಹಲ್ಲುಕಿರ್ದು ಹಂ-ಗ್ನೋಕೆ ಹೊಣೆಯಾಗೋದೇನ್ನಾನು! ನರಸಿಂಹಯ್ಯ! **ನರಸಿಂಹಯ್ಯ**!... ಎಂದೂ ಇಲ್ಲ... ನಗ್ತಿ-ರ್ಬೇಕ್ನನ್ಹೆಣ... "ನಮ್ಮನ್ನ್ಹೇಸಿ, ನಮ್ಮ ಕೊಂಪೆ ತಪ್ಪಿಸ್ಕೊಂಡು, ನಗ್ತಾಹೋದ್ನಲ್ಲಾ ಭೂಪ್ತೀಂ"ತ ನಾಚಿ-ಗ್ಬಟ್ಕೊಂಡು, ಅಳ್ತಾ, ಜೋಪಾನವಾಗೆತ್ಕೊಂಡ್ಹೋಗಿ ನನ್ನ ಶವಾನ, "ತಾಳೀಕಳಕೊಳ್ಳೋ ನಿನ್ನಾಸೇಲಿ ನಿನ್ನ ಗಂಡನ್ನ ನೀರಿಗಟ್ಟಿದ್ರೂನೂವೆ ನೀನು, ನಮಗೆ ಬೇಕಾಗಿದ್ದೋನ್ನ ಕೊಂದ ನಿನ್ನ, ಖೂನಿ ಕೇಸಿ-ಗೆ ದಸ್ತಗಿರಿ ಮಾಡ್ತೀವೇಂ"ತ, ನನ್ನ ಹೆಣಾನ ಮೆಲ್ಲಗಿಳ್ಸಿ ಈ ಚಂಡೀನ C h a r g e ಮಾಡೋ-ಷ್ಟು ರೌದ್ರಕ್ಕೆ ರಾಮರಾಮ್ಪುರಾನ್ನೇ ರೇಗ್ಸೋ ಹಾಗೆ, ನಗ್ತಿರ್ಬೇಕು ನನ್ನ ಶವ!! ನಗ್ತಿರ್ಬೆಕು!... ಸರಿ. (resignedly) ವಾಮನ ಹಾಕಿದಹಾಗೆ ಹಾಕೋದು, ಹೆಜ್ಜೆಮುಂದ್ಹೆಜ್ಜೆ, ಹುಷಾರಾಗಿ; ಕುತ್ತಿಗೇಗೆ ನೀರುತಾಕಿದ್ಕಡೆ ಹಾಕೋದು, ಹಸನ್ಮುಖನಾಗಿ ಆಸನ ಯೋಗಾಸನ... ಪ್ರಾಣತ್ಯಾಗಾಸನ... (ಪುನಃ ಆ ಜಠರೋದ್ಭವ ಉಸಿರನ್ನು ಉಸಿರುತ್ತಾ ಬಗ್ಗಿ, ಕೈಯಿಂದ ನೀರನ್ನು ಮುಟ್ಟಿ ತೃಪ್ತನಾಗಿ... ...ಪಾದ-ವನ್ನು ನೀಡಿ ನೀರು ಸೋರುತ್ತಲೂ, ಅಗ್ನಿತಪ್ತನಂತೆ ಅವಯವವನ್ನೇ ಹಿಂದೆಳೆದು ವಾರಿಶೈತ್ಯದಿಂದ ದಂತಘರ್ಷಣವನ್ನು ಗೈಯ್ಯುತ್ತಾ) ಇದ್ಯಾಕೋ?... ಒಂದೇ ಮೈಯಿ... ಓಡಾಡ್ತಿರೋದು ಒಂದೇ ರಕ್ತ, ಆ ಪಾದಮಸ್ತಕಾನೂ; ಆದ್ರೂನೂವೆ ಅಂಗೈಗೆ ಅಗ್ನಿಯಾಗಿರೋ ನೀರು, ಅಂಗಾಲಿಗಾನೇಕಲ್ಲು! ಯಾ-ಕೋ ಕಾಣೆ! Scienceನೋರ್ಗೆ ಒಂದು problemಉ!... problem ಬಿಡ್ಸೋಕಲ್ಲಾ ಬಂ-ದದ್ದಾನು, ಪ್ರಾಣಬಿಡೋಕೆ (ದಕ್ಷಿಣ ಪಾದವನ್ನು ನೀರಿಗೆ ಚಾಚಿ ಸ್ಪರ್ಶ ಮಾತ್ರ ಹಿಂದೆ ಸೆಳೆದು).... **ಆದ್ರೂ ಅನ್ಯಾಯಾಂದ್ರೆ**! ಕೊರಿಯುತ್ತೆ ಶನಿಕೊಂಡೆವರ್ಗೆ!... ಯಮನಿಗಿಲ್ಲದ ಅವಸರ ನನಗೇ-

ನೂ ಇಲ್ಲ ಇನ್ನೊಂದು ಅರ್ಧ ಘಂಟೆ ಆಚೆಗೆ attendance ಹಾಕ್ಕೊಂಡ್ರೂನೂವೆ, ನನ್ನ latest and last bossಊ **ಭೀಕರ** ರಾಯನ ಹಾಗಲ್ಲ, ಈ ಯಮ, ಎಷ್ಟಾದ್ರೂನೂವೆ, ಆ ಯಮ-ಧರ್ಮರಾಯ... (ಆಪದೋದ್ಭವವೋ ಎಂಬಂತಹ ಉಸಿರನ್ನು ಉಚ್ಛ್ವಾಸಿಸುತ್ತಾ)... **ಭಿಸಲು ಬ್ಥರ್ಲಿಭಿಸ್ಲು** (ಯಥಾ ಸೌಕರ್ಯಂ ಮೆಟ್ಟಿಲನ್ನು ಅಲಂಕರಿಸುವನು)... ಪ್ರಾಣಭಯಾಂಬೋದು ಮನು-ಷ್ಯನಿಗೆ ತಜ್ಞನ್ಮ; ಇದು ಪರಿಹಾರವಾಗೋದು ಪ್ರಾಣಭೀತಿಗಿಂತ ಜೀವನ ಭೀತಿ ಜಾಸ್ತಿಯಾದ್ರೇನೇ... ನನಗಾಗಿರೋ ಹಾಗೆ... (ನಿಟ್ಟುಸಿರು ಬಿಡುತ್ತಾ) ಹಯ್ಯೋ! ನಮ್ಮಮ್ಮ... ಹಸುಳೆಯಾದ ನನ್ನ... ತೊ-ಟ್ಟಿಲಿಟ್ಟು ತೂಗ್ತಿದ್ದಾಗ, ಅವ್ರ ಶ್ರೀಮಂತ ಸುತನಪಾಡು ಅವಳ ಹಾಗಿನ ಒಬ್ಬ ಸ್ತ್ರೀಯಿಂದಲೇ ಹೀಗೆ ಪರಿಣಮಿಸುತ್ತೇ ಅಂತ ತಿಳಿದಿದ್ಲೇ?... ಒಬ್ಬ ಸ್ತ್ರೀ... ಅದೂನೂ ಎಂಥಾ ಸ್ತ್ರೀ? ಅವಳ ಮಗನ ಕೈ ಹಿಡ್ದು ಅವಳ ಮೊಮ್ಮಕ್ಕಳ್ನ ಹೆತ್ತ ಸ್ತ್ರೀ!... ಇಲ್ಲಾ! ನಾನ್ತಾನೇ ಆಗ್ಲಿ, ನಾನ್ಹುಟ್ಟಿದ್ದೇನು?... ನನ್ನ ಕುಲ-ವೇನು?... ನನ್ನ ವಿದ್ಯವೇನು?... ನನ್ನ ಗೋತ್ರವೇನು?... ವಿಶ್ವಾಮಿತ್ರ ಗೋತ್ರ!... ಚಂಪೂಕವಿ ಹೇಳಿ-ದಹಾಗೆ, "ಗಾಧಿಸ್ಸತ್ಯ ಪರಾಕ್ರಮ"... ಹಯ್ಯಯ್ಯೋ!... ಪರಾಕ್ರಮವಿಲ್ದೆ, ಆತ್ನ weakness ಮಟ್ಟಿ-ಗೂ ವ್ಯಕ್ತಪಡಿಸ್ತಿದೇನಲ್ಲ!... ...ಕೈಹಿಡಿದ ಹೆಂಗಸ್ನ command ಮಾಡೋಕ್ಕೈಲಾಗ್ದೆ ಕೆರೆ ಬೆಚ್ಚಗಾ-ಗಲೀಂತ ಕಾದಿದೇನಲ್ಲ... ಇದು Cowardiceಉ! (ಪ್ರಕೃತಿಯನ್ನು ಸೂಚಿಸುತ್ತಾ) ಇದೇನ್ನಮ್ಮನೇ ನೀರುಮನೇನೇ! ಸೂರ್ಯನೇನು ಒಲೇ ಉರಿಸೋ ಕಟ್ಟಿಗೇನೇ! ಈ ಕೆರೆಯೇನು... ಹಂಡೇನೇ? (ಎದೆಯನ್ನು ಉಬ್ಬಿಸುತ್ತಾ) ಇದು ಹುಚ್ಚು!... ಹೇಡಿತನ! ನಾನು ಗಂಡ್ಸು! (ಮೀಸೆಯನ್ನು ತಿರು-ವುತ್ತಾ) ಪರಮಾತ್ಮ ಹೇಳಿದ್ದಾಗ್ಲೆ 'ಮಮಪ್ರಾಣಾಹಿ ಪಾಂಡವಾಃ'ಂತ ಪಂಚ ಪಾಂಡವರ ಹಾಗಿರೋ ನನ್ನ ಪ್ರಾಣಗಳ್ನ ಕೆರೆ ಕೆಸರು ಮುಕ್ಕಿಯೇ ಕಳಕೊಳ್ಳೋದು... never (ಕೂತಹಾಗೆಯೇ ಸೋಪಾನದ ಒಂದು ಮೆಟ್ಟಿಲನ್ನು ಹತ್ತುವನು)... ಆದ್ರೊಂದು ನಿರ್ಧರ! ಗಂಡನ್ನ ಕಳಕೊಂಡ ಗೋಳಾಟದಲ್ಲಿ ಮುಳಗಸ್ಲೇಬೇಕು ಇವಳ್ನ! ಹ್ಯಾಗೆ ಹೊಂದಿಸೋದು...? ...ಈಗ್ನಾನೂ ಸಾಯ್ದೆ ಇವಳನ್ನೂ ನಾನಿಲ್ಲ-ದ್ದಾಗೆ ಮಾಡೋಕೆ, ಒಂದೇ ದಾರಿ... ಬಟ್ಟೆಗಳನ್ನು ನೀರಿನಲ್ಲೆಸ್ದು, ಯಾರಾದರೂ ಹತ್ರಗಿತ್ರ ಓಡ್ಯಾ-ಡ್ತಿರೋವಾಗ 'ಕಿಟಾರ್' ಅಂತ ಕಿರಿಲ್ಬಿಟ್ಟು ಜನಗ್ಳು ಬರೋಷ್ಟರೊಳ್ಗೆ ಎಲ್ಲಾದರೂ ಅವ್ತುಕೊಳ್ಳೇದೇ best thingoo... (ಹಾಕಿಕೊಂಡಿರುವ ಬನಿಯನ್ನು ಎತ್ತಲುಪಕ್ರಮಿಸಿ ಶೀತವಾತವು ಜಠರ ಪ್ರ-ದೇಶಗಳಿಗೆ ಸೋಕಲು, ಅಂಗಿಯನ್ನಿಳಿಸಿ ಅದರೋಷ್ಠ ದಂತಗಳು ಕಂಪಿಸುತ್ತಾ) ಛ್‌ಛ್... ಛ್ಳಿಛ್ಳಿ! ಮತ್ತಿನ್ನೇನು! ಇರೋ ಎರಡು ಬಟ್ಟೇನ ಭಿರ್ಕಾಯಿಸಿಬಿಟ್ಟು, **ನೀರ್ನಲ್ಲಿ** ಸಾವು ತಪ್ಪಿಸಿಕೊಂಡು, **ಗಾಳಿ**

ಬಾಯಿಗೆ ತುತ್ತಾಗೋದೆ?—ಇನ್ನಾಮೇಲೆ ಬಿಸಿಲು ಬೇರೆ—ಅಲ್ದೆ ಜನಗಳ ಓಡ್ಯಾಟದ ದೃಷ್ಟೀಗೆ ಬೆತ್ತ-ಲೆಯಾಗಿ ಬೀಳದ್ದಾಗ್ಗೆ ಭಾವೀಲಿ ಬೇರೆ ಅವುತುಕೋಬೇಕೋ ಏನೋ ಕತ್ತಲೇ ಕವಿಯೋವರ್ಗೆ!?.... ಪಂಚಭೂತಗ್ಳಲ್ಲಿ ಒಂದು ತಪ್ಪಿದರೆ ಒಂದು, ಪ್ರಾಣೀಮೇಲೆ ನಿಗ ಇಟ್ಟು ಥಲ ಕಟ್ಟಿರೋವಾಗ ನನ್ನ ಪಾಡೇನೂ?... ವಿಶ್ವಾಮಿತ್ರನೇ ಗತಿ.

(ಜನಿವಾರ ಹಿಡಿದು ಆಕಾಶಕ್ಕೆ ತೋರಿಸುವನು).... ಊ ಹೂ! ಬಟ್ಟೆಗಳು ಬಿಡಬಾರ್ದು! (ತನ್ನ ಬಟ್ಟೆಗಳನ್ನುಮೇಲಿನಿಂದ ಕೆಳಗಿನವರೆಗೆ ಈಕ್ಷಿಸಿ) Glasgowಕುಡ್ತ, Manchesterಮಲ್ಲು, North ampton slipperಉ... ಅಲ್ವಾ!? ಹಳ್ಳಿಗಾಡಿನಲ್ಲಿ ಹುಟ್ಟಿಬೆಳ್ದ ಒಬ್ಬ ಹೆಂಗಸಿಗೆ ಹೆದರ್ಕೊಂಡು... map of Englandಏ ಆಗಿ ನನ್ನ ಮೈಮೇಲೆ ಕೂತಿರೋ ಬಟ್ಟೆಗಳನ್ನೇ, ಈ ಬಕಾಸುರೀ ಬಾಯಿಗೆ ಬಲೀ ಇಡೋದು... ಊ ಹೂ! Never let it be said! (ಥಟ್ಟನೆ ಕೆರೆಯಾಚಿನ ಮೇಡಿನ ಕಡೆ ಗಮನಿಸಿ) ಯಾರದೋ? ಓಹೋ! ದನಕಾಯೋ ಹುಡುಗ್ರು! (ತಲೆಯನ್ನು ಕೆದರಿಕೊಳ್ಳುತ್ತಾ) ಏನ್ಮಾಡ್ಲೀ!...ಹಾ!... ಒಂದ್ಕಾಗ್ದ ಬರದು ಬಿಡೋದು. ...ಊರೋಗ್ಗೆಲ್ಲಾ ಎಂಥಾ ಕಾಗ್ದ!... ಓದೂತ್ಲೂ-ನೂವೆ, ಎದೆಗಳು ಬಡಕೊಳ್ತಾ ರಕ್ತಕಣ್ಣೀರು ಕಾರ್ತಾ.... ನನ್ನೀಸ್ಥಿತಿಗೆ ದಬ್ಬಿದ ಇವಳ್ನೂ... ಇವಳಪ್ಪ-ನ್ನೂ ಇದೇ ಮೆಟ್ಟಲಿಗೆಳಕೊಂಡ್ಬಂದು,—ಬಂಡೇತಾಕ್ಲಿ, ತಾಕ್ದಿರ್ಲಿ ಮಂಡೆಗಳಿಗೆ—ದಬ್ಬೇ ಬಿಡೋ-ಷ್ಟರಮಟ್ಟಿಗೆ ರೇಗ್ಸೋ ಕಾಗಾದ ಒಂದು ಬರ್ದಿಟ್ಬಿಟ್ಟು, ದೊಡ್ಡದೊಂದು ಕಲ್ನ, ಕಿಟಾರಂತ್ಕಿರ಼್್ತಾ, ನೀ-ರ್ನಲಾಕೋದು; ಅದು, “ದೊಬ್ಬಕ್ಕಟ್ಟೇರ್” ಅಂತ ಬೀಳೋಶಬ್ದಾನೂ, ನನ್ನ ಕಿರ಼್ಟಾನೂ ಕೇಳ್ತೋ, ದನಕಾಯೋ ಹುಡುಗ್ರು ಓಡಿಬಂದು ಮುಂದೆ ನನ್ನ programme ಪ್ರಕಾರ ಜರ್ಗೋ ಎಟ್ಸೆಟ್ರಾ-ನೆಲ್ಲಾ ಆ ಮರದ ಹಿಂದೆ ಅವುಕೊಂಡು ನೋಡುತಿರಬಹುದು.

[ಮೇಲೆ ಹೇಳಿದಂತೆ ಜಾಗರೂಕತೆಯಿಂದ, ಒಂದೊಂದು ಅಭಿಪ್ರಾಯವನ್ನೂ ವ್ಯವಸ್ಥೆಗೆ ತರುತ್ತ-ಲು, ದನಪಾಲಕರು ಕಿರಲಿಕೊಂಡು ಬರುವಷ್ಟರಲ್ಲಿ, ದೊಡ್ಡ ಮರದ ಹಿಂದೆ ಅವಿತುಕೊಳ್ಳುವನು.]

[ಕಲ್ಲು ಬಿದ್ದ ಶಬ್ದವನ್ನು ಕೇಳುತ್ತಲೇ ‘ಅದ್ಯಾರೋ ಕೆರೇಲಿ ಬಿದ್ದವ್ರೆ ಕಾಣ್ರೋ... ಬರ್ರೋ... ಈಜೋರ್ನ ಇಡ್ತರ್ರೋ... ಅಗ್ಗಾ ತತ್ತರ್ರೋ! ದೊಡ್ಡೋರ್ನ ಕರತರ್ರೊ.’... ಎನ್ನುತ್ತಾ ದನಪಾಲಕರು, ಕೃಷಿಗಾರ-ರು, ಕ್ರಮೇಣ ದಾರಿಹೋಕರು, ಕೊನೆಗೆ ದೊಡ್ಡ ವರ್ತಕರು, ಪೋಲೀಸಿನವರು ಲಾಯ್ರಿಗಳು ಮತ್ತು ಪುರದ ಶ್ಯಾನುಭೋಗರು ಕೆರೆಯ ಕಟ್ಟೆಯಲ್ಲಿ ನೆರೆಯುವರು... ಆಗಾಗ್ಗೆ, ಕೂಟವು ಹೆಚ್ಚುತ್ತ ಮರದ ಮರೆಯನ್ನು ಹೊಂದಿರುವ ನಾಯಕನು “good ಉ!... goodಉ! Very goodಉ!... very

very goodಉ!!" ಎನ್ನುತ್ತ ಹಿಗ್ಗುವನು.]

ಶ್ಯಾನುಭೋಗ : ಇದೇನನಾಹುತ ?

ಗೋವಿಂದರಲ್ಲೊಬ್ಬ : ಆ ದಿಣ್ಣೇಮೇಲೆ ಕುಂತಿದ್ದೇ ಬುದ್ದೀ... ಪದಾ ಆಡ್ತಾ. ...

ಇನ್ನೊಬ್ಬ : ಏ, ನೇಟ್ಗೇಳ್ಲಾ... ಪದಾ ಅಲ್ಲಾ ಬುದ್ಧೀ... ಲಾವ್ಣೀ... ಪಿರ್‍ಯಾಪಟ್ಣದ ಲಾವ್ಣೀ.

ಶ್ಯಾನುಭೋಗ : (ಮಯೂರಧ್ವಜನ ಮಸ್ತಕದ ಮೇಲೆ ಉಜ್ಜಿದ ಗರಗಸದಂತೆ ಗೋಪಾಲನ ತಲೆ-ಮೇಲೆ, ಕೈಯಲ್ಲಿ ಹಿಡಿದ ಕೋಲನ್ನು ಹಿಂದು ಮುಂದಾಗಿ ಉಜ್ಜುತ್ತಾ) ನಿನ್ನ ಲಾವಣಿ ಹಾಗಿರಲಿ! ಇಲ್ಲಾದದ್ದೇನೂ, ಬೊಗ್ಳು ಮುಂಚೆ.

ಗೋವಿಂದ : ನನಗೇನ್‌ಗೊತ್ತು ಬುದ್ಧೀ? ಯಾರೋ ಕಿರ್ಲಿದಂಗೆ ಆಯ್ತು! ಕೆರೇಲಿ ದೊಪ್ಪಂತ ದು-ಮ್ಮುಕದಂಗಿತ್ತು! ಕಿರಲ್ತಾ ಕಟ್ಟೇಗ್ಬಂದೆ... ಈ ಕಾಜ್ಗಾ ಕಂಡ್ಬಂತು ನನ್ಕಣ್ಗೆ ಬುದ್ಧೀ, ಈಟೆ.

[ನಾಯಕನು ಉಬ್ಬುತ್ತಾ, "goodಊ boyಈ... cleverಉ cow boyಈ! ಏನ್ observationಉ! natureನ ನೋಡೀ ನೋಡೀ per programme ಮುಂದುವರಿಸ್ತಿದಾನೆ, ನಾನು ಹಾಕಿದ planನ" ಎಂದು ಉಬ್ಬಿ ಕೂಟಕ್ಕೆ ಕಿವಿಗೊಡುವನು.]

ಉಪನಾಯಕ : ಇಲ್ಕೊಡೋ ಇಲ್ಲಿ!....(ಗೋವಿಂದನ ಕೈಯಿಂದ ಕಾಗದವನ್ನುಕಸಿದುಕೊಂಡು, ಓದ-ಲುದ್ಯುಕ್ತಿಸಿ, ಓದುತ್ತಾ, ಓದುತ್ತಾ ಮುಖದ ಕೋಪದ ಗಂಟು, ಕ್ರಮೇಣಬಿಚ್ಚಿ, ಬೆಚ್ಚಿ, ಶಾಂತಿಯನ್ನು ಹೊಂದಿ ಮತ್ತೆ, ಆಶ್ಚರ್ಯ, ಭೀತಿ, ಕನಿಕರ, ಕೊನೆಗೆ ಕಣ್ಣೀರನ್ನುಕಾಗದ ಮೇಲೆ ಸುರಿಸುತ್ತಾ ತನ್ನಷ್ಟಿಗೆ ತಾನೇ ಗಟ್ಟಿಯಾಗಿ ಗೋಳಾಡುತ್ತಾ)

ಕಡು ಪಾಪಿಗ್ಳು! ನಾವೀಪುರವಾಸಿಗ್ಳು, ಕಡು ಪಾಪಿಗ್ಳು!

[ಬಿಕ್ಕಿಬಿಕ್ಕಿ ಅಳುವನು]

ಪೋಲೀಸು ಆಫೀಸರು : (ಮುಂದಕ್ಕೆ ಬಂದು) ಏನ್ ಸ್ವಾಮೀ ಅದು!

ಉಪನಾಯಕ : **ಏನೂ ಇಲ್ಲ—ಖೂನಿ ಖೂನಿ!**... ದಸ್ತಗಿರಿ ಮಾಡಿ ಬೇಗ!

ಪೋಲೀಸು ಆಫೀಸರು : ಯಾರನ್ನ?

ಉಪನಾಯಕ : ಇಲ್ಲಿರೋರೆಲ್ರನ್ನೂ, ಊರಲ್ಲಿರೋರೆಲ್ರನ್ನೂ, ಕೊನೆಗೆ ನಿಮ್ಮನ್ನೂ ದಸ್ತಗಿರಿ ಮಾಡಿ, ಖೂನಿ ಛಾರ್ಜಿಗೆ!... ನಂಜಾಪುರದ ನರಸಿಂಹಯ್ಯನ ಸಾವು ಗಾನ ಖೂನಿ ಅಲ್ದಿದ್ರೆ... ಖೂನಿಯೇ ಆಗಲಿಲ್ಲ, ನಮ್ಮ ದೇಶ್ದಲ್ಲಿ... (ಕಾಗದವನ್ನು ನೋಡುತ್ತಾ ಹಣೆಯನ್ನು ಹೊಡೆದುಕೊಳ್ಳುತ್ತಾ) ಹಯ್ಯೋ ಪ್ರಾಣೀ!!... ಪರಿಶೋಚನೀಯ ಪ್ರಾಣೀ!! ನೀನು ಬದುಕಿದ್ದಾಗ ನಿನ್ನ ಯೋಗ್ಯತೆ ಗೊತ್ತಿಲ್ಲದಿದ್ರೂ-ನೂವೆ, ನೀನು ಈ ಕೆರೇಲಿ ಸತ್ತಿರೋವಾಗ್ಲಾದ್ರೂ ನಿನ್ನ ಮಹದ್ ಯೋಗ್ಯತೆ ಹೊಳೀಬಾರ್ದೇ ಇಲ್ಲಿ ನೆರ್ದಿರೋ ಹಣವಂತ್ರಿಗೆ... ಇನ್‌ಸ್ಪೆಕ್ಟ್ರೇ! ನಿಮ್ಮಿಂದ ಆಗಬೇಕಾದ ಕೆಲಸಕ್ಕೆ ನೀವು ಹಿಂಜರಿದ್ರೂ-ನೂವೆ... I G ಸಾಹೇಬ್ರು ನಾಡಿದ್ದು ಕ್ಯಾಂಪು ಇಲ್ಲಿ, ಈ ಊರಲ್ಲಿ; ಜ್ಞಾಪಿಸಿದೇನೆ... ರಂಗಣ್ಣೋರೇ, ಸದಾಶಿವಯ್ಯನೋರೇ, ವೆಂಕಟರಮಣ ಶೆಟ್ರೇ, ಧರಣಯ್ಯನೋರೇ, ರಾಮಾಚಾರ್ರೇ, ಕಪ್ಪಣೋರೇ, ಬುಡನ್ ಸಾಹೇಬ್ರೇ! Election ಬರ್ತಾ ಇದೆ, ಹತ್ರ ಹತ್ರ; ದೊಡ್ಡ ಎಲೆಕ್ಷನ್ನೂ ಅಲ್ದೆ, ದೊಡ್ಡ ಸಾ-ಹೇಬ್ರು ಜಮಾಬಂದಿ ಬರೋ ವಾರ... ಆ ಗಲಾಟೆಗ್ಳ ಮಧ್ಯೆ, ಆ ಸನ್ನಿಧಾನಗಳ್ಳ ಮಧ್ಯೆ, ಸತ್ತು ಹೆಣ-ವಾಗಿ ಇದೇ ಕೆರೆ ನೀರಿನಲ್ಲಿ ದೇಹಾನ ಬಿಟ್ಟು ಹೋದ ಪ್ರಾಣಿಯ (ಕಾಗದವನ್ನೆತ್ತಿ ತೋರಿಸುತ್ತಾ) ಈ ಊರೋರ್ಗೇನೇ ಬರೆದಿಟ್ಟ ಅರ್ಜಿ, ವಂದ್ವೇಳೇ ಸನ್ನಿಧಾನದಲ್ಲಿ ಕಂಡು ಬಂತೋ... ನಿಮ್ಮೂರ್ಮ್ಲ! ಅಲ್ದೆ, ಐ. ಜಿ.ಗಳ ಮೂಲ್ಕ ಇದ್ರ ವಿವ್ರ, ತಪ್ಪೀಲಾಗಿ ಚೀಫ್ ಕೋರ್ಟಿಗೆ ಮುಟ್ತೋ... (ಮುಂಬೆಟ್ಟ-ನ್ನು ಮಂಡೆಯ ಮೇಲೆ ಮಸೆದು ಗ್ರಿವ ಪೂರ್ವಕ್ಕಿಟ್ಟು ಎಡಬಲ, ಬಲಎಡಕ್ಕೆ ಚಲಿಸುತ್ತಾ) **ಗಲ್ಲು!** ನಮ್ಮೂರಲ್ಲಿರೋ ಹೆಂಗಸ್ರು ಮಕ್ಕಳ ಸಹಿತ, ಮನುಷ್ರ್ಯೂ, ಮೃಗಗ್ಳೂ ಅಲ್ದೆ, ಜಲಚರಗ್ಳೂ, ವೃಕ್ಷ-ಗ್ಳೂ, ಹುಲ್ಲು, ಸಸ್ಯಾದಿಗ್ಳೂ... (ಥಟ್ಟನೆ ಕೈಯಲ್ಲಿ ಪಿಡಿದ ಕಾಗದದಿಂದ ಮುಖವನ್ನು ಮುಚ್ಚಿಕೊಂಡು ಗೋಳಾಡುತ್ತಾ) ಹಯ್ಯೋ ಪ್ರಾಣೀ! ಹೀಗೆ ನೀನು ನಮ್ಮನ್ನು ಬಿಟ್ಬಿಟ್ಟು ಹೋಗೋಕ್ಮುಂಚೆ, ನನಗೆ.... ಈ ಹಾಳೂರಲ್ಲಿ ಯಾರಿಲ್ಲದಿದ್ರೂ— ನನಿಗೆ, ನಿನ್ನ ಯೋಗ್ಯತೆ ತಿಳಿದ ನನಗೆ, ವಂದ್ಮಾತು ತಿಳಿಸಿಬಿಟ್ಟು

ಹೋಗಬಾರದಾಗಿತ್ತೇ?... ಹಯ್ಯೋ! ಪ್ರಾಣೀ! ಅದ್ಭುತಪ್ರಾಣೀ!

[ಎಂದು ಮಂಡೆಯನ್ನು ಕೆರೆಯ ಮೆಟ್ಟಲಿನ ಮೇಲೆ ಚಚ್ಚಿಕೊಳ್ಳುವನು]

[ನೆರೆದಿರುವ ಪೌರಾನೀಕವು, ದಿಗ್ದೇಶಭ್ರಮಿತರಾಗಿ, ಕೆರೆವಾರಿ ಮಗ್ನಶವಾನ್ವೇಷಣ ಮಾಡುವುದೋ, ಶೋಕಸ್ನಿಗ್ಧ ಶ್ಯಾನುಭೋಗರನ್ನು ಸಂತೈಸುವುದೋ, ಇಲ್ಲ... ಶ್ಯಾನುಭೋಗರು ಹೇಳಿದ ಕ್ಷಿಪ್ರದಲ್ಲಿ ಮುಂದೊದಗುವ ದೊಡ್ಡ Election, ದೊಡ್ಡ ಸಾಹೇಬರ ಜಮಾಬಂದಿ, I. G. ಸಾಹೇಬರ Inspection, ಇವುಗಳಲ್ಲಿ ಈಗ ಜರುಗಿ ಇನ್ನೂ ಮಂದಟ್ಟಾಗದ ಅನಾಹುತದಿಂದ ಒದಗಬಹುದಾದ ಅನಿವಾರ್ಯ-ಗಳಿಗೆ ಪ್ರತೀಕಾರಗಳನ್ನು ಪರ್ಯಾಲೋಚಿಸುವುದೋ ಎಂಬುದೊಂದೂ ತೋಚದೆ ಕಂಠಗತ ಪ್ರಾ-ಣರಾಗಿ ನಿಂತಿರಲು, ಪುರವರ್ತಕರಲ್ಲಿ ಪ್ರಾಮುಖ್ಯರಾದ ಧರಣಯ್ಯನವರು ಮುಂದೆ ಬಂದು, ಶೋ-ಕಿಸುವಾತನನ್ನು ತಟ್ಟಿ ಎಬ್ಬಿಸುತ್ತಾ, 'ಏಳಿ ಸ್ವಾಮೀ, ಏಳಿ! ಅದೇನು ಕಾಗ್ದ? ಓದಿ, ಹೋದವನಂತೂ ಹೋದ... ನಮ್ಮ ಜವಾಬ್ದಾರಿ ಏನು? ಈ ಕಾಗದಾನ ಓದಿ! ಏಳಿ!' ಎಂದು ಎಬ್ಬಿಸಲು ಯತ್ನಿಸುವ-ರು.]

[ಏತನ್ಮಧ್ಯೆ, ನಾಯಕನಾದರೋ, ಕಿರೀಟಿಯು ಕುರುಕುಳದಲ್ಲಿ, ಕುರುಸೂನುಗಳನ್ನು ಕೆಡಹುತ್ತಿರು-ವುದನ್ನು ಕಂಡುಕಂಡು ಕುಣಿದ ಧನಂಜಯ ಧ್ವಜಸ್ಥನಂತೆ ನರ್ತಿಸುತ್ತಾ, "ಅನ್ಯಾಯ Successoo ಅಂದ್ರೆ, ನನ್ನ Planoo ಆ ದನ ಕಾಯೋ ಹುಡ್ಗ goodoo, very goodoo ಅಂದೇ... ಆದ್ರೆ ಶ್ಯಾನುಭೋಗ splendidoo! ಏನು effective ನನ್ನ letteroo! terribleoo! ತ್ಸು! ತ್ಸು! ತ್ಸು! regular ಲಿಪಿ! ಬ್ರಹ್ಮಲಿಪಿ, ಬ್ರಹ್ಮನ್ಯಾಕೇ... ಮೃತ್ಯುಲಿಪಿ... ಯಮಲಿಪಿ!... ಇದಕ್ಕೇ ಹೇಳೋದು "Pen is mightier than the swordoo" ಅಂತ!, Proverbನಲ್ಲಿ! ಎಂದು ಹಿಗ್ಗುತ್ತಾ ಮತ್ತೆ ಕೂಟಕ್ಕೆ ಕಿವಿಗೊಡುವನು.]

ಪೋಲೀಸು ಆಫೀಸರು : (ಶ್ಯಾನುಭೋಗನನ್ನು ತಟ್ಟಿ, ತಡವಿ, ಎಬ್ಬಿಸಿ ನಿಲ್ಲಿಸಿ, ಸೊಟ್ಟನಾಗಿದ್ದರೂ ರುಮಾಲನ್ನು ನೆಟ್ಟಗೆ ಮಾಡಿ, ಆತನ ಕಿಸೆಗೆ ಕೈಹಾಕಿ ಸುಲೋಚನವನ್ನು ತೆಗೆದು, ಕಣ್ ಮೂಗು ಕಿವಿ-ಗಳಿಗೆ ಸರಿಯಾಗಿ ಸೆಕ್ಕಿಸಿ, ವಿನಯದಿಂದ)

ದಮ್ಮಯ್ಯ! ಶ್ಯಾನುಭೋಗರೇ!... ಊರೂರೇ ಕಿವಿಗೊಟ್ಟು ನಡಗ್ತಾ ನಿಂತಿಧೆ... ದಯವಿಟ್ಟು ಈಗ್ಲಾ-
ದ್ರೂ ಓದಿ... ಆ ಸತ್ತ ಮನುಷ್ಯನ statementನ!

ಉಪನಾಯಕ :...(ಊರೆಲ್ಲವರೂ ಉಸಿರುಹಿಡಿದು ನಿಂತಿರಲು, ಸುಲೋಚನವನ್ನು ತೆಗೆದು ಉಟ್ಟ ಧೋತ್ರದಿಂದ ಸುಲೋಚನದ ಸ್ಫಟಿಕಗಳನ್ನು ರಜೋರಹಿತಗಳನ್ನಾಗಿ ಮಾಡಿ ಪುನಃ ಯಥಾಸ್ಥಾನಂ ಪ್ರತಿಷ್ಠಿಸಿ, ಕಾಗದವನ್ನು ಓದುವನು)

"ರಾಮಪುರದ ನಿವಾಸಿಗಳಿಗೆ! ಈ ಪುರದ ಪುಣ್ಯಜನರಿಗೆ ರಾಕ್ಷಸರಿಗೆಂದಲ್ಲ! ಪುಣ್ಯ ಮಾಡಿದ ಪೌ-ರಕರಿಗೆ!... ಮಹಾಜನರೇ!... ಪ್ರಥಮತಃ ಪ್ರಾರ್ಥನೆ.

ನಿಮ್ಮ ಮಹತ್ಪುರದಲ್ಲಿ, ನಿಮ್ಮಂತೆಯೇ ಮನುಷ್ಯನಾಗಿ ಹುಟ್ಟಿಬೆಳೆದ ನನ್ನ ಹೆಮ್ಮೆಯು, ವಿಧಿಯ ವಿ-ನೋದವೇ ಅಲ್ಲದೇ ನನ್ನ ಜ್ಞಾತ ಕೃತ ತಪ್ಪಿಲ್ಲವೆಂಬುದನ್ನು ಅಂಗೀಕರಿಸಿ ಕ್ಷಮಿಸಬೇಕೆಂಬುದು, ಯಮ-ನನ್ನು ಎದುರು ನೋಡುತ್ತಿರುವ, ಈ ಸತ್ತ ನಿಮ್ಮ ಸೇವಕನ ಪ್ರಾರ್ಥನೆ :

ದ್ವಿತೀಯತಃ ಇತ್ಯರ್ಥನೆ... 'ಕ್ರಿಮಿಯೆಂದು ನೀನಾಗಿಯೇ ಒಪ್ಪಿಕೊಂಡು, ಮಾನುಷೋತ್ತಮರಾದ ನಮ್ಮ ಮಧ್ಯೆ ಜನಿಸಿ, ವರ್ಧಿಸಿ, ಸುಖಿಸುವ ಲಭ್ಯವನ್ನು ನಿನ್ನ ಕೈಯಿಂದಲೇ ತಿರಸ್ಕರಿಸಿ, ನಮ್ಮನ್ನಪ-ಮಾನಿಸಿ, ಏತಕ್ಕೆ ಆತ್ಮಹತ್ಯ ಪಾತಕವನ್ನು ಹುಡುಕಿ ಹೊಂದಿದೆ?' ಎಂದು ಕೇಳುವಿರಾ? ಆ ಪ್ರಶ್ನೆಗೆ ಈ ವಿಧವಾಗಿ ಉತ್ತರವನ್ನು ಒದಗಿಸಲು ಯತ್ನಿಸುವೆನು.

ನನ್ನ ಜ್ಞಾನೋದಯಾರಭ್ಯ ನಮ್ಮೂರಿನಲ್ಲಿ, ಹೊಟ್ಟೆಗೆ ಹಿಟ್ಟಿಲ್ಲದೆಯೂ, ದೇಹಾವಯವರಕ್ಷಾಚ್ಛಾದನ-ಕ್ಕೆ ವಸನವಿಲ್ಲದೆಯೂ, ಇವುಗಳನ್ನು ವದಗಿಸಿ ಪೋಷಿಸುವ ಪಿತಾ ಪತಿರಹಿತರಾಗಿಯೂ, ಕೊರಗುವ ನನ್ನ ಈ ವೂರಿನ ಸಹಸ್ರ ಭಗಿನಿಯರ ಸಂತಾಪವನ್ನು... ಮಾತಾ, ಪಿತೃ, ಬಂಧು ಬಳಗವನ್ನು ಜನ್ಮಾ-ರಭ್ಯವೂ ಅರಿಯದೇ, ಅಹರ್ನಿಶಿಯೂ ನೋಡಿ ನೋಡಿ, ಇವರೆಲ್ಲರ ಅವಸ್ಥೆಯನ್ನೂ ನಿವಾರಿಸುವ ಧನ ಚೈತನ್ಯವನ್ನು ನನಿಗೆ ಕೊಡದ ಧಾತನು... ಕುದುರೆ ಬಂಡಿ, ಮೋಟಾರ್‌ಗಳನ್ನು ಹತ್ತಿ, ತಮ್ಮ ತಮ್ಮ ಧನ ಸಂಚಯನ ಯಾತ್ರೆಗೆ ದಿನವಹಿ ದಾರಿಗಳಲ್ಲಿ ಹೋಗುತ್ತಾ, ಈ ಅನಾಥರಾದ ಅಬಲಾರ್ಭಕಾ-ನೀಕವನ್ನು ಅವಲೋಕಿಸಿಯೂ ಆಹ್ಲಾದಿಸುತ್ತಾ ಹೋಗುವ ಕಲಿಕುಬೇರರಾದ ಈ ಪುರದ ಧನವಂ-ತರಿಗೆ ಇರುವ ಕಲ್ಲು ಗುಂಡಿಗೆಯನ್ನಾದರೂ ಕೊಡಬಾರದಾಗಿತ್ತೇ?"... ಎಂಬ ಮನೋವ್ಯಥೆಯಿಂದ ಮೃತ್ಯುವನ್ನು ಮೈಗಪ್ಪಿಕೊಳ್ಳುವೆನು.

ತೃತೀಯತಃ ನನ್ನೀಜನ್ಮದಲ್ಲಿ ತಮ್ಮ ಮಹಾಪುರಕ್ಕೂ ತಮ್ಮಗಳಿಗೂ, ಅನೇಕ ಕೋಟಿ ವಿಧಾನಗಳಲ್ಲಿ ಋಣಬದ್ಧನಾಗಿರುವುದನ್ನು ಲೆಕ್ಕವಿಟ್ಟು ತೂಗಿಸಿ ನಿರ್ಣಯಿಸಿರುವ ವಿಧಿಯು, ನನಗೀ ಋಣಾಧಿಕ್ಯದಿಂದ ವಿಮೋಚನೆಗೆ ಆಸ್ಪದವನ್ನು ವದಗಿಸಲು, ನಿಮ್ಮ ಪುರದಲ್ಲೇ ನನ್ನ ಪುನರ್ಜನ್ಮವನ್ನು ಕರುಣಿಸಿ, ತೀರ್ಮಾನಿಸುವ ಪಕ್ಷಕ್ಕೆ... ಆ ಮುಂದಿನ ಜನ್ಮದಲ್ಲಾದರೂ ತಮ್ಮ ಪುರದ ಪಾಮರ ಪ್ರಯಾಸವನ್ನು ಪರಿಹರಿಸಲು, ಧನಚೈತನ್ಯವನ್ನು ವಿಧಿಯು ಈಯದಿದ್ದರೂ, ಅನಾಥರ ಅಶ್ರುಗಳ ಅಬ್ಧಿಯಲ್ಲಿ ಈಜಿ, ತೇಲಿ, ಆಹ್ಲಾದದಿಂದ ಆನಂದಪಡುತ್ತಿರುವ ತಮ್ಮ ಪುರದ ಧನಲಕ್ಷ್ಮಿವತ್ಸರಿಗೆ ಇರುವ ಪಾಷಾಣ ಹೃದಯವನ್ನಾದರೂ ವಿಧಿಯು ದಯಪಾಲಿಸಲೆಂಬುದಾಗಿ ತಾವುಗಳು ನಿಮ್ಮೀ ಕೆರೆಯ ಕಟ್ಟೆಯಲ್ಲಿಯೇ ಹಾರಾಡುತ್ತಿರುವ ನನ್ನ ಜೀವಾತ್ಮನನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸುವ...

ಜೀವಿಸಿದ್ದಾಗ ತಮ್ಮ ಸೇವಕ... ಈಗ ಸತ್ತ ಸಪೌರಸೇವಕ
ನಂಜಾಪುರ ನಾರಾಯಣ ನರಸಿಂಹಯ್ಯ.

[ಶ್ಯಾನುಭೋಗನು ಪತ್ರವನ್ನು ಓದುತ್ತಾ ಓದುತ್ತಾ ಪರಿಸ್ಥರಾದ ಪೌರವರು ಹ್ರೀಭರಿತ ಹೃದಯರಾಗಿ ಪರಸ್ಪರ ಮುಖಾವಲೋಕನವನ್ನು ಮಾಡಲಾಗದೆ ತಲೆತೂಗಿ ತಗ್ಗಿಸಿ ನಿಂತಿರಲು]

ಉಪನಾಯಕ : (ಸುಲೋಚನವನ್ನು ತೆಗೆದು ಹುಷಾರಾಗಿ ಜೇಬಿನಲ್ಲಿ ಪುನಸ್ಥಾಪಿಸಿ ಯಥಾಪತ್ರಪತನಪೂರ್ವಂ ಸೋಪಾನಕ್ಕೆ ಫಾಲಪಟ್ಟವನ್ನು 'ಫಟ್ ಪಟ್'ಟನೆ ಚಚ್ಚುತ್ತಾ)—ಪುನೀತ ಪ್ರಾಣೀ... ನಮ್ಮೂರು ಬಿಟ್ಟು ಬಿಟ್ಟು ಹೋದದ್ದು... ನಿನ್ನಾ್ಭಗ್ಯ... ಇನ್ನಾನೋ, ನೀನು ನೀರ್ನಲ್ಲಿ ಬಿದ್ದಲ್ಲೇ ಬದುಕಿರೋ ನಿರ್ಭಾಗ್ಯ... ಪತ್ನಿ ಅರುಂಧತಿ... ಪುತ್ರರಶ್ವಿನಿಗ್ಳು, ಈಲಭ್ಯಾನ್ನೂ ಮರೆತು... (ಕೆರೆಯ ನೀರನ್ನು ಕೈಯಿಂದ ಸೂಚಿಸುತ್ತಾ) ಈ ನಿನ್ನ ಕೃತ್ಯದಿಂದ ನಿನ್ನ ಕಳತ್ರ ಕೂಸುಗಳ್ಗೆ... (ಪರಿಸ್ಥರನ್ನು ಬೀಸಿದ ಬಲಭಾಗದಿಂದ ಸೂಚಿಸಿ) ಈ ಕನಕದಿಂದ ಕೊಬ್ಬಿದ ಈ ಕಿರಾತರಿಂದ ಸಲ್ಲದೇ ಪಡೋ ಅವಸ್ಥೇನ್ನೂ ಮರ್ತು, ಊರಲ್ಲಿರೋ ನಾಥರಿಲ್ಲದ ಅಬಲಾ ಸಹಸ್ರಗಳು, ಪೋಷಕರಿಲ್ಲದ ಶಿಶುಲಕ್ಷಗ್ಳು, ಇವುಗ್ಳ ಅವಸ್ಥೇನವಲೋಕಿಸಲಾರ್ದೆ, ಅಸುಗಳ್ನ **ಅಪ್ಪಿನ್ವಾಲ್ಮಾಡಿದ್ಯಾ**... ಅಪೂರ್ವ ಪ್ರಾಣೀೀ... (ಫಾಲಪಟ್ಟವನ್ನು ಸೋಪಾನದ ಶಿಲೆಯಮೇಲೆ, ಪುನಃ ಪುನಃ ಬಡಿದುಕ್ಕೊಂಡು ಕ್ರಮೇಣ ಚೇತರಿಸಿ-

ಕ್ಕೊಂಡು, ಎದ್ದುನಿಂತು, ರೌದ್ರಾಸ್ಯನಾಗಿ ಕಣ್ಣುಗಳಿಂದ ಕಿಡಿಗಳನ್ನು ಕಾರುತ್ತಾ, ಸುತ್ತಿರುವವರನ್ನು... ಪದ್ಮವ್ಯೂಹವನ್ನು ಹೊಕ್ಕ ಸೌಭದ್ರೇಯನು ಪಾರ್ಥಪ್ರತಿಕಕ್ಷಿಗಳನ್ನು ತಾತ್ಸರಿಸಿ ನೋಡಿದಂತೆ ನೋಡಿ, ಸದಾಶಿವಯ್ಯನವರಿಗೆ)

ಸದಾಶಿವಯ್ಯನವರೇ, ನೀವು ಬಾಹ್ಮಣ್ರು, ಹೆಂಡ್ತಿ ಮಕ್ಳಿರೋರು. ನಾನೂ ಹಾಗೇ. ಈಗ ಹೋಗಿರೋ ಪ್ರಾಣೀನೂ ಹಾಗೇ ಇತ್ತು. ಆದ್ರೆ, ಈ ಊರಿನ ಗೋಳಾಟಾನ ನೋಡಲಾರದೆ, ಮನೆಯೋರ್ನೂ ಮರೆತು, ಮರೆಹೊಕ್ಕಿಧಾನೆ ಮಧುಸೂದನನ್ನ... ಆ ಬಡ ಬ್ರಾಹ್ಮಣ... ಈ ಕೆರೆ ಬುಡದಲ್ಲಿ! ನನ್ಗೋ... ಆತನಷ್ಟು ಧೈರ್ಯವಿಲ್ದೆ ನಡಗ್ತಿಧೇನೆ... ಆದ್ರೂನೂವೆ (sardonically)... ತೊಲೇ ಕಂಟ್ರಾಕ್ಟಿನಲ್ಲಿ ಸಾವಿರದ ಮೇಲೆ ಸಾವಿರಾಂತ ಬ್ಯಾಂಕ್ನಲ್ಲಿ ಭರ್ತಿಮಾಡ್ತಿರೋ ತಮಗೇ... ಇಲ್ಲಿಯಾಕೆ ಈ ಅವಸ್ಥೇ?... ಕಾರಿಲ್ವೇ?... ಬಂಗ್ಲೇ ಇಲ್ವೇ... (ಶೋಕಾನ್ಮಾದನಾಗಿ ನಗುತ್ತಾ) **ಈ**ವೂರಿಗ್ಮೊದಲ್ಬಂದು, ಮುಸಾಫರ ಖಾನೇಲಿಳ್ಕೊಂಡು, ಮೂರು ದಿನಕ್ಕೆ ಮೇಲೆ ವಾಸಮಾಡೋಕೆ ನನ್ಹತ್ರ... ಶ್ಯಾನುಭೋಗನ್ಹತ್ರ—ಬೇಡ್ಕೊಂಡ, ತಮ್ಮ, ಈ ಹತ್ತು ವರ್ಷದ ಹೀನ ಸ್ಥಿತೀನ, ಮಿಕ್ಕೋರ್ಗತೀನ, ಮರೆತು, ತನ್ನ ಮುಂದಕ್ತಂದ್ಕೊಂಡ ತಮಿಗೆ—ಇಲ್ಲೇನು ಕೆಲಸಾ?

(ವೆಂಕಟರಮಣ ಶೆಟ್ಟರಿಗೆ) ಶೆಟ್ಟರೇ, ನಿಮ್ಮನ್ನೇನೂ ಹೇಳೋ ಹಾಗಿಲ್ಲ ನಾನು; ತಮ್ಮ ವರ್ಣಧರ್ಮದ, ಧನಸಂಚಯನ ಎಂಬೋ ಧರ್ಮಾರ್ಥವನ್ನಾದರೂ ಜರುಗಿಸ್ತಿರೋ ಹೊತ್ಗೆ!... ಆದ್ರೂನೂವೆ, ನನ್ನ ಹಾಗ್ಯೇ ದ್ವಿಜರಾದ ತಾವು, ಗೃಹರಹಿತರಿಗೆ ಛತ್ರ... ಅನ್ನಾಹಾರ ರಹಿತ ಅನಾಥರಿಗೆ ಅನ್ನಸತ್ರ, ದೈವಭಕ್ತರಿಗೆ ದೇವಾಲಯ ಇತ್ಯಾದಿಗಳನ್ನು ಒದಗಿಸುವ ದಾರಿಯಲ್ಲಿ, ತಮ್ಮ ಧರ್ಮೇತರಾರ್ಥವಾದ ಧನವ್ಯಯವನ್ನು ವ್ಯವಸ್ಥೆಗೆ ತರದಿರೋ ವಿಷಯದಲ್ಲಿ, ನೀವಾಯ್ತು, ಪರಮಾತ್ಮನಾಯ್ತು!

(ಧರಣಯ್ಯನವರಿಗೆ)... ಧರಣಯ್ಯನವರೇ!...“ಅಹಿಂಸಾ ಪರಮೋಧರ್ಮಃ” ಎಂಬ ಆರ್ಯೋಕ್ತಿಗೆ ಅನುವಾದ, ಭೂತದಯೆ, ಎಂಬ ತಮ್ಮ ಮತವನ್ನು ಅಹರ್ನಿಶಿಯೂ ಆಚರಿಸುತ್ತಾ, ಈ ಊರ್ನಲ್ಲಿ ಹುಟ್ಟಿ ಬೆಳ್ದ ತಮ್ಮಿಂದ ಅಲ್ದೆ ಮತ್ಯಾರಿಂದ್ಲೂ ನಮ್ಮ ಪುರದ ಅನಾಥರ ಆರ್ತನವು ಅಡಗಲಾರದು... (ಬುಡನ್ ಸಾಹೇಬರಿಗೆ)... ಸಾಹೇಬ್ರೇ! ಮತದಲ್ಲಿ ಅನ್ಯರಾದರೂ, ಕೃದ್ಧರಲ್ಲಿಯೂ ಕರುಣೆ ಇಡುವವನು... **ಅರ್ರಹ್ಮಾನ್ ಇರ್ರಹೀಂ** ಎಂಬ ದೇವೋಕ್ತಿಯನ್ನು ಪಂಚದಾಪ್ರತ್ಯಹಸ್ಸೂ ಬೆಳಗುತ್ತಾ, ಸಪೌರವರೊಂದಿಗೆ ಭ್ರಾತೃಭಾವನೆಯಿಂದ ನಡೆಯುತ್ತಿರುವ ತಾವೂ... ಧರಣಯ್ಯನವರೂ... ಶೆಟ್ರೂ ಇರುವಾಗ್ಯೂ... ನಮ್ಮೂರಿನ ಗೋಳು ಮುಂದಾದರೂ ಅಡಗುವುದೆಂಬ ಭರವಸೆಯ ಮೇಲೆ...

ನನ್ನ ಪ್ರಿಯತಮವಾದ ಪ್ರಾಣಿಯನ್ನು ಸೇರ್ತೀನೆ !!!
(ಕೆರೆಯ ನೀರು ಕಾಣಿಸದಂತೆ ಜನರು ನಿಂತಿದ್ದರೂ ಗಮನಿಸದೆ ಬಾಹುಗಳನ್ನೆತ್ತಿ ಹಸ್ತಗಳನ್ನು ಜೋಡಿಸಿ ಧುಮುಕಲು ಪಾದಗಳ ಮುನ್ನಂಶಗಳ ಮೇಲೆ ಸ್ವಭಾರವನ್ನು ಘಟ್ಟಿಸಿ, ಧುಮುಕಲುದ್ಯುಕ್ತಿಸಿ ಘಟ್ಟಿಯಾಗಿ ಆತ್ಮಗತಂ) ನಂಜಾಪುರದ ನಾರಾಯಣ ನರಸಿಂಹಯ್ಯನ ಜೀವಾತ್ಮನೇ ತಡೆ! ಸ್ವಲ್ಪ ತಡೆ!!... ನಿನ್ನೀ ಜೀವಾತ್ಮಕ್ಕೆ ಈ ಶನಿ ಊರಿನಲ್ಲಿ ತಿರುಗಿ ಹುಟ್ಟದ ಹಾಗೆ ಮಾಡೋ ಶಾಂತೀನ ತರೋಕೆ, ಇಲ್ಲಿ ನೆರೆದಿರೋ ಕುಬೇರ್ರು, ಈ ಅನಾಹುತ ಆದ್ರೂ ಕಾಸು ಖರ್ಚು ಮಾಡೋಕೆ ಹೇಸ್ಗೆಯಿಂದ ಹಿಂಜರೀತಿದ್ರೂನೂವೆ... ನಿನ್ನ ಹೆಣಾನ್ನೂ... ನೀರ್ನಲ್ಲಿ ಸತ್ತ ನಿನ್ನ ಸೇರ್ಕೋತೀನೆಂತ ನೆಗೆಯೋಕೆ ನಿಂತಿರೋ ನನ್ನ ಹೆಣಾನ್ನೂ, ನಾಳೆ ಅಮಲ್ದಾರ್ರೂ, ಡಿ.ಎಸ್.ಪಿ.ಗ್ಳೂ... ನಾಡಿದ್ದು ಚಿಕ್ಕಸಾಹೇಬ್ರೂ, I.G.ಗ್ಳೂ, ಅಲ್ದೇ, ಬರೋ ವಾರ ದೊಡ್ಡ ಸಾಹೇಬ್ರೂ, ಇನ್ನು ಮುಂದೆ ಬರೋ ದೊಡ್ಡ Electionನೋರೂ, ನಮ್ಮಿಬ್ರ ಎರಡು ಹೆಣಗಳನ್ನೂ ನೋಡಿ, ನನ್ನ ಈ ಮಾತುಗಳ್ನ ಕೇಳಿರೋರ್ನೂ ಸಾಕ್ಷಿಗಳಾಗಿ ಕೋರ್ಟಿಗೆಳೆದು ಸಮಸ್ತಾನ್ನೂ ತಿಳ್ಕೊಂಡ ಸರ್ಕಾರೀ... ಹಾಕೋವ್ರಿಗೆ ಹಾಕೋದು, ಹೂಮಾಲೆಗ್ಳೋ! ಹಾತ್ಬೇಡಿಗ್ಳೋ! ಕೊಡೋದು, ಸನ್ಮಾನಾನೋ!... ಸಜಾನೋ!... ತಾನೇ... ನಿರ್ಧರಿಸಿ... ರಾಮ್ಪುರದ ಆಡಳಿತಾನ ಮಹಾಸ್ವಾಮೀ ಸರ್ಕಾರಾನೇ ವಹಿಸಿ, ದುಷ್ಟದಕ್ಷಣ, ಶಿಷ್ಟಾಬಲಾ ಶಿಶು ಸಂರಕ್ಷಣ ರೀತ್ಯಾ, ನಮ್ಮಿಬ್ರ ಜೀವಾತ್ಮಗಳಿಗೆ ಶಾಂತೀನ ವಧಗಿಸೋ ವಿಷಯದಲ್ಲಿ ಶಂಕೆ ಇಡಬೇಡ... ಇಕೋ ಬಂದೆ... ಇಕೋ ಬಂದೆ! (ಎಂದು ಜನ ಮುಚ್ಚಿದ ಕೆರೆವಾರಿಯಲ್ಲಿ ಲಂಘಿಸಲುದ್ಯುಕ್ತನಾಗಿ)... ಇಕೋ ಬಂದೆ... ಈ ಕಟುಕರು ತುಂಬಿದ ಪುರಿಯ ಕೆರೆಯಲ್ಲಿ ನನ್ನ ಈ ಹಾಳು ದೇಹಾನೂ ವದರ್ಬಿಟ್ಟು... ಇಕೋ ಬಂದೆ!... ಸ್ವಲ್ಪ ತಡೆ!! ಸ್ವಲ್ಪ ತಡೆ!!...

[ಶ್ರೀರಾಮನ ಸಂದೇಶವನ್ನು ಸೀತೆಗೆ ಸಲ್ಲಿಸುವ ಸಾಧನವನ್ನು ಕೈಗೊಂಡ ಬ್ರಹ್ಮಚಾರಿಯು, ಲವಣಾಬ್ಧಿಯ ಊರ್ಮಿಗಿರಿಗಳನ್ನು ಗಮನಿಸದೆ, ಲಂಕೆಯ ಪರಿಘೆಯಲ್ಲಿ ಬದ್ಧೇಕ್ಷುವಾಗಿ ಲಂಘಿಸಿದಂತೆ, ತಾನು ನಿಂತಿರುವ ಸೋಪಾನದ ಎಂಟನೇ ಮೆಟ್ಟಲಿನಿಂದ ನೀರಿನಂಚಿನಿಂದ ಜನಭರಿತವಾದ ಮೆಟ್ಟಲುಗಳಲ್ಲಿ ನಾಲ್ಕನೆಯದರ ಮಧ್ಯಸ್ಥನಾಗಿಯೂ ಸ್ಥೂಲಕಾಯನಾಗಿಯೂ ಇದ್ದ ವ್ಯಕ್ತಿಯ ಅತಿವರ್ಧಿತ ಜಠರಕ್ಕೆ ಗುರಿಯಿಟ್ಟು, ಲಂಘಿಸುವನು.]

ಪೋಲೀಸ್ ಆಫೀಸರು : (ಥಟ್ಟನೆ ಹಾರಿ, ಶ್ಯಾನುಭೋಗನನ್ನು ಬಿಗಿದಪ್ಪಿ,) ಇದೇನ್ರೀ ಹುಚ್ಚು!... ಹೋದೋನಂತೂ ಹೋದ... ಹೀಗೆ ನಮ್ಮನ್ನೆಲ್ಲ ಹೆದರಿಸಿಬಿಟ್ಟು ನಿಮಗಿರೋ ಹೆಂಡತಿ ಮಕ್ಕಳ ಮುಂದಿನ ಗತೀನ ಮರೆತು ಹೀಗೆ ಕೆರೇಲಿ ಧುಮುಕೋದು ಧರ್ಮವೇ?... ಇಲ್ಲ... ನಾವಿರೋವಾಗ... ಸಾಧ್ಯವೇ? ಆದದ್ದನ್ನ ಮರೆತು, ನಿಮ್ಮ ಶ್ಯಾನುಭೋಕೇನ ಮರೀದೆ, ಲಾಗಾಯ್ತಿನಿಂದ ಈ ಊರ್‍ನಲ್ಲಿ ಆದ ಅಸಂದರ್ಭಗಳಲ್ಲೆಲ್ಲಾ ಔಷ್ತಾನ ಬೋಧಿಸಿದ ಹಾಗೆ, ಈಗ್ಲೂ ಬೋಧಿಸ್ತೀರಾ!? ಇಲ್ಲಾ!... (ಶ್ಯಾನುಭೋಗನ ಕುಡುತದ ಕತ್ತನ್ನು ಬಿಗಿಹಿಡಿದು ಜಗ್ಗಿ ಸಿಂಹನಾದದಿಂದ) ಇಲ್ಲಾ!! ಇಷ್ಟು ಜನಗ್ಳೆದ್ರುಗೆ attempt ಮಾಡ್ದ ಆತ್ಮಹತ್ಯೆಕ್ಕೆ arrest ಮಾಡಿ, ಎತ್ಕೊಂಡ್ಹೋಗ್ಲೇ ನಿಮ್ಮನ್ನ, ನಮ್ಮ ಸ್ಟೇಷನ್‍ಗೆ? (ಜಗ್ಗಾಟವನ್ನು ನಿಲ್ಲಿಸಿ) ಅಲ್ರೀ! ಇದೇನು ಹುಡುಗಾಟ ಶ್ಯಾನುಭೋಗ್ರೇ!... (ಧರಣಯ್ಯನವರನ್ನು ಕುರಿತು) ಯಜಮಾನ್ರೇ... ತಾವು, ಯಾವಾಗಿನ ಹಾಗೆ ಮುಂದಕ್ಕೆ ಬಂದು, ಮುಂದಿನ ಕ್ರಮಾನ ಮಾತಾಡಿ ತೀರ್ಮಾನ್ಸಿ... ಏನ್ನಾ್ತನೇ ಆದ್ರೂನೂವೆ... ಎಷ್ಟು ಖರ್ಚಾದ್ರೂನೂವೆ... ನಾಳೆಯಿಂದಾಚ್ಗೆ, ಮುಂದೆ ಬರೋರ ಗಮ್ನಕ್ಕೆ ಇವತ್ತಿನ ಬಾಬ್ತು ಬರದ್ಹಾಗೂ, ರಾಮ್ಪುರದ ಮಾನಾನೂ ಮಿಗೋ ಹಾಗೂ... ತಮ್ಮೆಲ್ರ ಜವಾಬ್ದಾರೀನೂ ತಪ್ಪಿಸ್ಕೊಳ್ಳೋ ಹಾಗೂ, (ಶೆಟ್ಟರಿಗೂ, ಸಾಹೇಬರಿಗೂ,) ಶೆಟ್ರೇ! ಸಾಹೇಬ್ರೇ!.... ಜವಾಬ್ದಾರೀನ ತಪ್ಪಿಸ್ಕೊಳ್ಳೋ ಹಾಗೂ... ದಾರೀನ ಶ್ಯಾನುಭೋಗ್ರ ಮೂಲ್ಕ ತಿಳ್ಕೊಂಡು... ತಾವು ತೀರ್ಮಾನಿಸಬೇಕು... ಈಕ್ಷಣ! (ಹಿಡಿತವನ್ನು ಬಿಟ್ಟು, ನಾಲ್ಕು ಹೆಜ್ಜೆ ಹಿಂದೆ ಹಾಕಿ ನಿಲ್ಲುವನು.)

ಧರಣಯ್ಯ: (Rushing up, followed by Sadasivayya, Venkatramana Setty & Budan Saheb) ಶ್ಯಾನುಭೋಗ್ರೇ!... ನಿಮ್ಮ ಮನೋವ್ಯವಸ್ಥೆ ಮಂದಟ್ಟಾಯ್ತು!... ನನ್ನ ಕಾರ್ಖಾನೆ ಕೆಲಸ್ದಲ್ಲಿ ನೂರಾರು ಜನಕ್ಕೆ ಜೀವ್ನಾನ್ನೂ ವದಗಸ್ತಾ ಹಗ್ಲೂರಾತ್ರೆ ವ್ಯಾಪಾರದಲ್ಲೇ ಮುಳುಗಿ ಆಗಾಗ್ಗೆ ನಿಮ್ಮಂಥಾ ನಮ್ಮೂರಿನ ಧರ್ಮಕರ್ತರುಗಳಿಗೆ ಸಹಾಯಮಾಡ್ತಾ ಇದ್ದಿಧೇವೆ ಹೊರ್ತು, ತಹಲ್ಬಾಗ್ಲೂ, ನಮ್ಮೂರಲ್ಲಿ, ಸದಾಶಿವಯ್ಯನವರು ಕಟ್ಟಿದ ಹೊಸ ಮುಸಾಫರ್‍ಖಾನೆ, ಶೆಟ್ರು ಕಟ್ಟಿಸಿದ ಧರ್ಮಸತ್ರ, ಸಾಹೇಬ್ರು, ಜಾತಿ ಮತಭೇದವಿಲ್ದೆ ವದಗಿಸ್ದ ಹುಡುಗರ ಹಾಸ್ಟಲ್ಲು.... ಇನ್ನೂ ನನ್ನಿಂದಾದ ಅಲ್ಪಸ್ವಲ್ಪ ಅನುಕೂಲಗ್ಳು ಸಾಲದೆ, ನಮ್ಮೂರಿನಲ್ಲಿ ಅಬಲೆಯರೂ, ಅನಾಥ ಶಿಶುಗಳೂ, ಈ ಕಾಲದಲ್ಲಿ ತಿಳಿಯಬಂದ ಹಾಗೆ ಪಡೋ ಅವಸ್ಥೆ ಅರಿತೇ ಇರ್ಲಿಲ್ಲ ನಾವು... "ಹುಟ್ಟಿದ ಕೂಸು ಕೈಯಲ್ಲಿ ತರದ ಹಣಾನ, ಬೆಳು ಸತ್ತ**ಹೆಣ** ಕೈಯಲ್ಲಿ ತಗೊಂಡ್ಹೋಗೋದಿಲ್ಲ." ಆದ್ರಿಂದ, ನೀವೂ ನಾ-

ವೆಲ್ರೂ ಹುಟ್ಟಿದೀಊರ್ಗೆ, ಕುಂದಕ ಬರದಹಾಗೆ, ಮುಂದೇನಾಗಬೇಕೂಂಬೋದ್ನ ಹೇಳೋದು ನಿ-ಮಭಾರ... ಶ್ಯಾನುಭೋಗ್ರೇ!... ಮುಂದಿನ ಕ್ರಮವೇನು?

ಉಪನಾಯಕ : (ಎರಡು ಕೈಗಳಿಂದಲೂ ಎದೆಯನ್ನು ಪಟಪಟನೆ ಬಡಿದುಕೊಳ್ಳುತ್ತಾ) ಮುಂದಿನ ಕ್ರಮಾನೇ!... ಶಾಂತಿ, ಧರಣಯ್ಯನೋರೇ! ಸದಾಶಿವಯ್ಯನೋರೇ! ಶೆಟ್ರೇ! ಸಾಹೇಬ್ರೇ! **ಶಾಂತಿ**!!

ನಾಲ್ವರೂ : (ಏಕಗ್ರೀವರಾಗಿ) ಶಾಂತಿ?... ಯಾರಿಗೇ? ಹ್ಯಾಗೆ?

ಉಪನಾಯಕ : ಶಾಂತಿ, ಯಾರಿಗೇನೂ!!... ಕಾಯಾನ ಈ ಕೆರೇಲಿವದ್ರಿ ಕಂಗೆಡ್ತಾ ನಿಮ್ಮನಮ್ಮಮಧ್ಯೆ ಹಾರಾಡ್ತಿರೋ ನರಸಿಂಹಯ್ಯನ ಜೀವಾತ್ಮಕ್ಕೆ ಶಾಂತಿ!... ಹ್ಯಾಗೇಂತ್ಕೇಳಿದ್ರಲ್ಲಾ (ನಾಯಕನ ಪತ್ರವನ್ನು ಬಿಚ್ಚಿ ತೋರಿಸುತ್ತಾ) ಈ ಸತ್ತ ಪ್ರಾಣೀ, ನಮ್ಮ ಊರಿನಲ್ಲಿ ತಿರುಗ್ಬುಟ್ಟಿ, ಅಡಗ್ಸೋಕೆ ಬೇಕಾದ ಧನಚೈ-ತನ್ಯ ಇರೋ ನೀವುಗ್ಳೇ... ಆ ಅವಸ್ಥೇನ ಅಡಗ್ಸೋದಾದ್ರೆ... ವದಗಿಸಿದ ಹಾಗಾಗುತ್ತೆ... ಶಾಂತೀನ!... ಈ ಸತ್ತ ಜೀವಕ್ಕೇ... ಶಾಂತೀನ!

ಧರಣಯ್ಯ : (ದೃಢ ಧ್ವನಿಯಿಂದ) ಅರ್ಥವಾಯ್ತು! ಶ್ಯಾನುಭೋಗರೇ... (ಕಿಸೆಯಿಂದ ನೋಟ್ ಬು-ಕ್ಕನ್ನೂ ಶಾಯಿ ಪೇನಾವನ್ನೂ ಹೊರತಂದು ಬರೆಯಲುದ್ಯುಕ್ತಿಸಿ) ಹೇಳಿ... ಹ್ಯಾಗೆ?... ಖರ್ಚು ಏನು?... ಎಷ್ಟು... ಹೇಳಿ.

ಉಪನಾಯಕ : ಖರ್ಚೆಷ್ಟೋ ಅಷ್ಟೂ ನಿಮ್ಮ ಕೈಲೇ... ಏನೂ ಅಂತೀರೋ, ಈ ಪ್ರಾಣಿ ನೋಡಿ ಸಹಿ-ಸ್ಲಾರ್ದೇ ಸತ್ತ್ನಲ್ಲಾ, ಆ ಅಬಲಾಾ ಅನಾಥ ಸ್ತ್ರೀ ಶಿಶುಗಳಿಗೆ ಒಂದು ಆಲಯ; ಈತ ಬಿಟ್ಟುಬಿಟ್ಟು ಹೋಗಿರೋ ಹೆಂಡ್ತಿ ಮಕ್ಕಳು, ಆ ಆಲಯಾನ ಸೇರಿದ ಅಪಮಾನನ ಹೊಂದದ ಹಾಗೆ ಒಂದು ಫಂ-ಡು !!!

ಧರಣಯ್ಯ : (ನೋಟು ಬುಕ್ಕನ್ನು ಕಿಸೆಯಲ್ಲಿಟ್ಟು, ಚಕ್ಕುಬುಕ್ಕೊಂದನ್ನು ಹೊರತಂದು, ಬರೆಯಲು-ದ್ಯುಕ್ತಿಸಿ) ಶೆಟ್ರೇ ನಂದು ಹತ್ಸಾವ್ರ... ನಿಮ್ದೂ ಹಾಗೇ ಇರ್ಲಿ! ಸಾಹೇಬ್ರೇ, ಅಯ್ಯನೋರೇ, ನಿಮ್ದೂನೂ

ಡಿಟೋ... ಗೋವಿಂದಪ್ನೋರೇ, ನಾಯ್ಡುಗ್ಳೇ, ನಿಮ್ಮಿಬ್ರದ್ದೂ ಸಾವ್ರ ಸಾವ್ರ...

ಇವರೆಲ್ಲರೂ : (ಏಕಗ್ರೀವರಾಗಿ) ನಿಮ್ಮ ಚಿತ್ತ... ಯಜಮಾನ್ರೇ!

ಧರಣಯ್ಯ : (ಚಕ್ಕು ಬುಕ್ಕಿನಲ್ಲಿ ಬರೆದು, ಬರೆದ ಚಕ್ಕನ್ನು ಹರಿದು ಶ್ಯಾನುಭೋಗನ ಕೈಲಿಟ್ಟು) ಶ್ಯಾನುಭೋಗ್ರೇ, ಮೂವತ್ಸಾವ್ರ ರೂಪಾಯ್ಗೆ, ನೀವು ಹೇಳಿದ ಅನಾಥಾಲಯ... ಹತ್ತು ಹನ್ನೆರಡು ಸಾವಿರ ರೂಪಾಯಿ, ಹೋದಾತ್ನ ಪತ್ನಿ ಶಿಶುಗಳ್ಗೆ. ಮುಂದಿನ್ಕ್ರಮ, ನಾಳೆ ಊರ್ಕಮಿಟೀಲಿ, ಚರ್ಚಿಸ್ಕೊಳ್ಳೋಣ. ಸದ್ಯ Treasurer ತಾವು. (ಚಕ್ಕನ್ನು ಶ್ಯಾನುಭೋಗನ ಕೈಯಲ್ಲಿ ಸೆಕ್ಕಿಸಿ ಇನ್‌ಸ್ಪೆಕ್ಟರಿಗೆ) ಇನ್‌ಸ್ಪೆಕ್ಟ್ರೇ, ಇನ್ನೀ ಸೋಪಾನದಲ್ಲಿ ಒಬ್ರೂ ಇಲ್ದೆ ಖಾಲಿಮಾಡಿ ಊರಿಂದ, ದೇಹಾನ ಹೊರತರೋವರ್ನ್ನ ಕಳ್ಸೋದು ನಿಮಗ್ಗೊತ್ತು!... [ಸೋಪಾನವನ್ನು ಹತ್ತಿ ಗಂಭೀರವಾಗಿ ಹೊರಡುವನು... ಈತನ ಹಿಂದೆ “ಧರಣಯ್ಯಾಕಿ ಜೈ! ಶ್ಯಾನುಭೋಗಾಕಿ ಜೈ!” ಎನ್ನುತ್ತಾ ಸಂಭ್ರಮದಿಂದ ಕೆಲವರೂ, ಪೋಲೀಸಿನವರ ಬಂದುಬಸ್ತಿಗೆ ವಳಪಟ್ಟು ಮಿಕ್ಕವರೂ, ಹೊರಡುವರು... ಒಟ್ಟಿನಲ್ಲಿ ಶ್ಯಾನುಭೋಗನು, ತರುಮರೆ ಆಶ್ರಿತನಾದ ನಾಯಕನೂ ಅಲ್ಲದೆ, ರಂಗವು ವಿಜನವಾಗುವುದು.]

[ಒಂದೆರಡು ಕ್ಷಣಗಳಲ್ಲಿಯೇ ಸ್ತ್ರೀಯೊಬ್ಬಳ... “ಹಯ್ಯೋ! ಹೀಗಾಗಬಹುದೇ!... ಹೀಗಾಗ್ಬಹುದೇ! ಈ ದುರ್ಬುದ್ಧಿ ಹುಟ್ಟಬಹುದೆ!...” ಎಂಬ ಆರ್ತರವವು ಕೇಳಿಬಂದು ಕ್ರಮೇಣ ಸಮೀಪಿಸಿ, ಅಂತ್ಯತಃ ಸೋಪಾನಾಗ್ರದಲ್ಲಿಯೇ ಕೇಳಿ ಬರುವುದು.]

ಉಪನಾಯಕ : (ನೇಪಥ್ಯವನ್ನು ಈಕ್ಷಿಸಿ) ಇದೇನಿದು... ಮೆರವಣಿಗೆ ಮುಗಿದ ಮೇಲೆ ಮತಾಪಿನೋನು ಬಂದಹಾಗೆ... ಇಷ್ಟುಹೊತ್ತು ನಡೆದ ಗೋಳಾಟಕ್ಕಿಲ್ದಿದ್ದ ಹೆಂಗಸು... ಈಗ ಬರ್ತಿಧಾಳೆ!... ಗೋಳಾಡೋಕೆ! ...ಯಾರೂ? (ದುರುಗುಟ್ಟಿನೋಡಿ ಥಟ್ಟನೆ ಚಮಕಿತನಾಗಿ) ದೇವ್ರೇಗತಿ... ಇವ್ಳು!... ಇದೇನು ಹುಚ್ಚು!... ಇವ್ಳು ಬಂದ್ಳೀಗ... ಬೀದಿಯುದ್ದಕ್ಕೂ ಬಡುಕೊಳ್ತಾ!?... (ಅಂಜಿದವನು ಓಡಿ ತಪ್ಪಿಸಿಕೊಳ್ಳಲು ನಾಲ್ಕು ದಿಕ್ಕುಗಳನ್ನೂ ನೋಡುವವನಂತೆ ನೋಡಿ ನಡುಗುತ್ತಾ ನಾಲ್ಕಾರು ಮೆಟ್ಲುಗಳನ್ನು ಇಳಿದು) ನಾನು ನೀರಲ್ಲಿ ಬೀಳೋ ವರ್ತಮಾನ ಕಿವೀಗೆ ಬಿದ್ದಾಕ್ಷಣ್ವೆ... ನನ್ನ ಬುದ್ಧಿಶಕ್ತಿ ಗೊತ್ತಾಗ್ದೇ?...

ಸ್ತ್ರೀ : (ಕಟ್ಟು ಬಿಚ್ಚಿಕೊಂಡು ಕೆದರಿ ಗಾಳಿಗೆ ಹಾರಾಡುವ ಕೇಶರಾಶಿಯಿಂದಲೂ, ವಾಸುಕಿಯ ಚಂಡಮಾರುತ ಉಚ್ಛ್ವಾಸದಿಂದಲೂ, ಕಣ್ಣುಗಳಿಂದ ಕಾರುವ ಕಿಡಿ ಮಳೆಯಿಂದಲೂ, ಆಸ್ಯದ ರೌದ್ರ ಮುದ್ರೆಯಿಂದಲೂ, ಇವಲ್ಲದೇ ಅತಿ ಕೃಷ್ಣವರ್ಣ ತನುವಿನ ಗೌರವಾಕಾರದಿಂದಲೂ, ಕಾಳ ರಾತ್ರೆಯನ್ನು ಬಿಂಬಿಸುತ್ತಾ ಪ್ರವೇಶಿಸಿ, ಮೆಟ್ಲುಗಳನ್ನು ಹೆಜ್ಜೆಗೆ ಹತ್ತುಹತ್ತಾಗಿ ಧುಮುಕಿ ಉಪನಾಯಕನನ್ನು ಸೇರಿ, ಆತನ ಭುಜಗಳನ್ನು, ದೃಢವಾಗಿ ಪಿಡಿದು ಬೇಟೆನಾಯಿಯು ಇಲಿಯ ಮರಿಯನ್ನು ಕಚ್ಚಿಕೊಂಡು ಭೂಮಿಗೆ ಬಡಿಯುವಂತೆ, ಪ್ರಾಣವಲ್ಲಭನನ್ನು ಜಗ್ಗಿಸಿ ಕುಕ್ಕುತ್ತಾ, ದಂತಾವಳಿಯನ್ನು ಕಟಕಟನೆ ಘರ್ಷಿಸುತ್ತಾ ಘನ ಕಂಠದಿಂದ) ಇದೇನ್ಹುಚ್ಚು ನಿಮಗೆ? ಯಾವೋನೋ ಪಾಪಿ ಕೆರೇಲಿಬಿದ್ದು ಪ್ರಾಣಕಳಕೊಂಡ್ರೆ, ನನ್ನ ತಾಳೀನ ಕೀಳೋಕೆ, ಇದೇನು ಹುಚ್ಚು ಬಂತು ನಿಮಗೆ!?... ಮನೇಗೆ ಬನ್ನಿ! ಮಾಡ್ತೇನೆ, ಮರ್ಯಾದೆ!

[ಪದಪದಕ್ಕೂ ಅಲ್ಪಕಾಯನಾದ ಅರ್ಧಾಂಗನನ್ನು ಕುಕ್ಕಿ ಕುಕ್ಕಿ, ಮಹಾ ಸರ್ಪವು ಮಂಡೂಕವನ್ನು ಎಳೆದುಕೊಂಡು ಹೋಗುವಂತೆ, ಸ್ವಾಮಿಯನ್ನೂ ಸೆಳೆದುಕೊಂಡು ಸೋಪಾನಾರೋಹಣಕ್ಕೆ ಉತ್ಕ್ರಮಿಸುವಳು.]

ಉಪನಾಯಕ : ಸ್ವಲ್ಪಿರೇ—ಶನಿ, ಅಲ್ಲಾ, ನೀನು... ಕೂತ್ಕೊಂಡು ಶಾಂತಿತಕೋ! ಮಾಧ್ಯಾಹ್ನೀಕದಹೊತ್ತು! [ಕಾಂತೆಯ ಹಿಡಿತವನ್ನು ನುಣುಚಿ ತಪ್ಪಿಸಿಕೊಂಡು ನೀರಿಗಿಳಿದು ಮಾಧ್ಯಾಹ್ನೀಕವನ್ನು ಆಚರಿಸುವನು. ಉಪನಾಯಕಿಯು, ನಿಂತೆಡೆಯಲ್ಲಿ ಕುಳಿತುಕ್ಕೊಂಡು, ಅಧರೋಷ್ಠಗಳನ್ನು ಭದ್ರಿಸಿ ಆಗಾಗ್ಗೆ "ಬರ್ಲಿ! ಶನೀನೆ?... ಮೆಟ್ಲು ಹತ್ತಿ ಬರ್ಲಿ! ಬ್ರಾಹ್ಮಣಿಕೆ ತೀರಿಸ್ಕೊಂಡು" ಎನ್ನುತ್ತಾ, ನಾಥನನ್ನು ರೆಪ್ಪೆಮುಚ್ಚದೇ ದುರುಗುಟ್ಟಿ ದೃಷ್ಟಿಸುತ್ತಿರುವಳು.]

[**ನಾಯಕ** : (ಆತ್ಮಗತಂ) ದೇವ್ರೇಗತಿ... ನನ್ನ ಹೆಂಡತೀನೇ ಹೆಬ್ಬುಲಿ ಅಂತಂದೆನಲ್ಲಾ!... ಹಾಗಾದರೆ ಇವಳೋ!... ಗಜಸಿಂಹ!... ಅದೇ ನೋಡಿದೆ!!... ಏನಪ್ಪಾಂತ!!! ನಾನು ಸತ್ತಾಕ್ಷಣ್ವೆ, ಈ ಪ್ರಾಣೀನೂ ನೀರಿನಲ್ಲಿ ನೆಗೆಯೋಕೆ ಆತುರಪಡುತ್ತಾನೆ ಯಾಕೇಂತ!... ಓ ಹೋಽಽ ಹೊ! ಈಗಲೀಗ ಇತ್ಯರ್ಥವಾಯ್ತು. ನಂದರ ಹಾಗೇನೇ ಇವಂದೂನೂ ಕೇಸೂ!... hopelessoo... homeನಲ್ಲಿ ಇವ್ನ positionooನೂ helplessooನೂ! ಅಬ್ಬಬ್ಬಬ್ಬ ಬ್ಬ ಬಾ!... ಏನ್ ಹೆಂಗಸೂಂತೇನೆ!... ಒಳ್ಳೇ

ದಂಪತಿಗಳು!—ಇವರ್ನ ಗಂಟುಹಾಕಿದ ಕಡು ಪುರೋಹಿತನಿಗೆ special ನರಕ! ಯಮಪುರೀ-ಲಿ!... ಲಂಕಿಣೀನ ವಾಲಖಿಲ್ಯರಲ್ಲೊಬ್ಬ ವರಿಸಿದ್ರೂನೂವೆ ಅನ್ಯಾಯವಲ್ಲಾಂದ್ರೆ... ತನ್ನ ತಪಸ್ಸಿನಿಂ-ದಲಾದರೂ ತಪ್ಪಿಸಿಕೊಳ್ತಿದ್ದ... ಪತ್ನೀಕಾಟಾನ... ಆ ಖುಷಿ! ...ಈ ಶ್ಯಾನುಭೋಗನಿಗೆ ಆಶಕ್ತಿನೂ ಇಲ್ಲ... ಒಳ್ಳೇ ಸ್ವರ್ಗ ಇವನ ಸಂಸಾರ... ಪಾಪ... ಹು ಹುಃ (ತಾತ್ಸಾರದಿಂದ ನಗುತ್ತಾ) ಅಲ್ಲಾ! ...ಈ ಉದ್ದಂಡೀ ಕೈಲಿ ಸಿಕ್ಕಿಕೊಂಡು ವದ್ದಾಡ್‌ತಿರೋ ಈ ಮಿಡ್ತೆ, “ಪರಿಶೋಚನೀಯ ಪ್ರಾಣೀಂ!”ತಾ... ನನ್ನ ಕನಿಕರ್ಸ್‌ತ್ತಲ್ಲಾ!... ನನ್ನ sweet wifeಏ ಎಷ್ಟೋ ವಾಸೀಂದ್ರೆ!... ಮುಖ ಮುರಿಯೋ-ಹಾಗೆ ಆ ನಾಗರಹಾವು ನಾಲಿಗೇನ ಉಪಯೋಗಿಸ್ತಾಳೆ ಹೊರ್ತು, ಗಂಡಾಂಬೋದನ್ಮರ್ತು ಹೀಗೆ ಜುಟ್ಟು ಹಿಡಿದು ಜಗ್ಸೋ ಚಂಡೀ ಅಲ್ಲಾ! ಅವಳ methodsಊ Gentleಉ... personal assault ಅವಳ ಪಟ್ಟೀಲೇ ಇಲ್ಲ... lady ಅವಳು, ಹೆಂಗ್ಸು... ನಾಲ್ಗೆ ಸೂಜೀ ಆದ್ರೂನೂವೆ ನಡ-ತೇಲಿ ಸೀತೆ... ನಮ್ಮೋಳು!]

ಉಪನಾಯಕಿ : (ಮೆಟ್ಲು ಹತ್ತಿಬಂದ ರಮಣನನ್ನು ಬಿಗಿ ಹಿಡಿದು) ಶನೀನೆ ನಾನು, ಇರ್ಲಿ, ನನ್ನ ಶನೀತನಾನ (ಪ್ರಾಣೇಶ್ವರನನ್ನು ಪುನರ್ಜಗ್ಗಿಸುತ್ತಾ) ಮನೇಲಿ ತೋರಿಸ್ತೇನೆ... ಇಲ್ಲಲ್ಲ... ಪತಿ ಪೂಜೆ, ಯಾವಾಗಿನಹಾಗೆ ಮನೇಲಿ ತೋರಿಸ್ತೇನೆ... ಇಲ್ಲಿ ಇನ್ನು ಬಾಯಿಬಿಟ್ಟು ರೇಗ್ಸಿದ್ರೋ, ನನಗೆ ಈಗಿರೋ ಕೋಪದಲ್ಲಿ ನನ್ನ ತಾಳೀ ಹರಿಯೋ ಅಪಾಯಕ್ಕೂ ಅಂಜದೆ (ಮಡಿವಾಳನು ನೀರಿನಲ್ಲಿ ನೆನೆಸಿದ ಮಾಸಿದ ಬಟ್ಟೆಯನ್ನು ಒಗೆಯಲು ಉದ್ಯುಕ್ತಿಸುವಂತೆ ಒಡೆಯನನ್ನು ಅನಾಮತ್ತಾಗಿ ಎತ್ತಿ ಕುಲುಕು-ತ್ತಾ) **ಒಗದ್ಬಿಟ್ಟೇನು....** ಬಟ್ಟೆ ಒಗದಹಾಗೇ, ಒಗದುಬಿಟ್ಟೇನು.... **ಮಾತ್ಹಾಡದೆ ಬನ್ನಿ**.. ಅಲ್ಲಾ! ಅಗ-ಳ್ನ ಜೀರ್ಣಿಸಿಕೊಳ್ಳೋಕೆ ನಾಡಿಯಿಲ್ಲ, ಆತ್ಮಹತ್ಯಾನ್ನೇ ಮಾಡೋದು ನೀವು?... ಊರೇ ನೋಡುತಿ-ರೋವಾಗ ಆನಂದವಾಗಿ ನೀವು ಸತ್ತರೇ ನನ್ನ ಕಾಟ ತಪ್ಪಿಸಿಕೊಳ್ಳೋಕೆ ನೀರಿನಲ್ಲಿ ಧುಮುಕಿದ್ರೀಂತ ಅಂದ್ಕೊಳ್ಳೋದಿಲ್ವೇ ಜನಗ್ಳು!

ಉಪನಾಯಕ : ಅಲ್ಕಣೇ ಹುಚ್ಚು!... ಊರುದ್ದಕ್ಕೂ ಹೀಗೆಳಕೊಂಡು ಹೋಗ್ತಿಯಾ, ನನ್ನ ಬಿಡೇ... ಯಾರ್‍ಯಾದ್ರೂ ನೋಡಿಯಾರು ಬಿಡೇ ...ಬೆಳ್ಳಂಬೆಳ್ಕು ಕಣೇ... ಮಮ್ಮಟ ಮಧ್ಯಾಹ್ನ.... ಮಾನಹೋ-ದೀತು ಬಿಡೇ? (ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾ) ಬರ್ತೇನೆ ಬಿಡೇ... ಹಯ್ಯೋ ಬೆಪ್ಪು... ನಾನು

ನಿಜವಾಗಿ ನೀರಿನಲ್ಲಿ ಧುಮುಕ್ಕಿದ್ದೇಂತ ತಿಳ್ಕೊಂಡ್ಯಾ? ...ಮಂಕೂ ...ಅಲ್ಲ...ಸಾಧು ಪ್ರಾಣೀ... ನಮ್ಮ ಸೀತೂ ಮದ್ವೆಗೂ, ಅಶ್ವತ್ಥನ ಕಾಲೇಜಿನ ಖರ್ಚು ತೀರೋಕೂ ರಸ್ತೆ ಹಾಕ್ಯೂಬಿಟ್ಟೆ... ಸಲೀಸ್ ರೋಡ್ನ, ಇಲ್ನೋಡೆ! (ವಳಜೇಬಿನಿಂದ ಏನನ್ನೋ ಹೊರತರಲು ಯತ್ನಿಸುವನು.)

ಉಪನಾಯಕಿ : (ಪ್ರಾಣ ಪ್ರಭುವಿನ ಮೇಲಿನ ಹಿಡಿತವನ್ನು ಸಡಲಿಸಿ) ಎಲ್ಲಿಗೆಲ್ಲೀಗೆ ಸಂಬಂಧಾಂದ್ರೆ! ಅರ್ಥ್ವಾಗಿಲ್ಲ... ನೀರಿನಲ್ಲಿ ಧುಮುಕೋಕೆ ನೆಗೆದ ನೀವೆಲ್ಲಿ?... "ಹೆಂಡ್ತೀಕಾಟ ತಡೀಲಾರ್ದೆ ಶ್ಯಾನು-ಭೋಗ ಕೆರೇಲಿ ಧುಮ್ಕೀಸತ್ತಾಂ"ತ ಹಲ್ವಲ್ಕಿರೀತ ಹಂಗ್ನೋ ಊರಹೆಂಗಸರ ಕೇಕೇನ ಸಹಿಸಲಾರದೆ ಓಡಿಬಂದ ನನ್ನ, ಮರೆಸಬೇಕೂಂತ ನೀವು ಎತ್ತತಾ ಇರೋದುಡ್ಡೆಲ್ಲೀ? ಎಲ್ಲಿಂದಲ್ಲಿಗೆ ಸಂಬಂಧ...?

ಉಪನಾಯಕ : (ನಿಶ್ಶೇಷವಾಗಿ ನೀಡಿ ನಟ್ಟುಕೊಂಡು ಚಕ್ಕನ್ನು ತೋರಿಸುತ್ತಾ) ಇಲ್ನೋಡೆ! ಮಂಕು! ಚಕ್ಕು ಕಣೇ!!! ಧರಣಯ್ಯನೋರ್ದು!!! ನಲವತ್ತೆರಡು ಸಾವಿರ ರೂಪಾಯ್ಗೆ!!!! ನನ್ನ ಕೈಲಿ!!! ಅದೇ ನಿನಗೂ ನನಗೂ ಇರೋ ವ್ಯತ್ಯಾಸ. (ಚೆಕ್ಕನ್ನು ನೋಡಿದ ಭಾರ್ಯೆಯು ಬೆಚ್ಚಿಬಿದ್ದು ಸಭಕ್ತಿಯಿಂದ ಹಿಮ್ಮೆಟ್ಟುವಳು) ಎಷ್ಟಾವರ್ತಿ ಹೇಳಿದೇನೆ!... ನಿನ್ನ ಬುದ್ಧಿಯೆಲ್ಲಾ ನಿನ್ನ ಬಾಯಿಯಲ್ಲೂ, ನಿನ್ನ ಮೈ-ಯಲ್ಲೂ, ನಿನ್ನ ಕೈಯಲ್ಲೂ!!! ನನ್ನದೆಲ್ಲಾ... ಇರಬೇಕಾದ ಕಡೇಲಿ... ಮಂಡೇಲಿ... ಅರ್ಥ್ವೇ? ಸುಧಾ-ರಿಸಿಕೊಂಡು ವಿವರಸ್ತೇನೆ... ವೃತ್ತಾಂತಾನ.... ಓಡಿ ಬಂದಿಧೀಯಾ... ಕೂತ್ಕೊಂಡು ಚೇತರಿಸ್ಕೋ... [ದಂಪತಿಗಳು ಕೂಡಲು ಉಪನಾಯಕಿಯು ಬಿಸಿಲಿನಲ್ಲಿ ಬಳಲಿದ ಭರ್ತೃವನ್ನು ಉಟ್ಟ ವಸನದ ಸೆ-ರಗಿನಿಂದ ಬೀಸುತ್ತಾ ಶುಶ್ರೂಷಿಸುವಳು.]

[**ನಾಯಕ** : (ವಿಸ್ಮಯಭರಿತನಾಗಿ ಆತ್ಮಗತಂ) ದೇವ್ರೇಗತಿ! ದೊಡ್ಡ ದೊಡ್ಡ motorಗಳ ಚಿಕ್ಕಿಕ್ಕ brakeಗ್ಳೇ ನಿಲ್ಸೋ ಹಾಗೆ... ಊರೂರ್ನೇ ಗದರ್ಸಿ ನಲವತ್ತೆರಡು ಸಾವಿರ ರೂಪಾಯಿ ಕಸ್ಕೊಂಡು ನನಗ್ಗಿಟ್ಟಿಸಿದ ಈ ವಿಪರೀತ ಬುದ್ಧಿ ಎದುರಿಗೆ ಎಷ್ಟು ಗುರುಗುಟ್ಟಿದ್ರೂನೂವೆ, ಈ ವಾರಾಹಿ... ಯಾವ ಮೂಲೆ?... after all ಗಂಡ್ಸು ಗಂಡ್ಸೆ! ಹೆಂಗ್ಸು ಹೆಂಗ್ಸೆ! ಹೋದ್ವಾರ ನಮ್ಮ ಊರಿಗೆ ಬಂದಿ-ದ್ದ ಸರ್ಕಸ್ಸಿನಲ್ಲಿ ಸಿಂಹದ ಕೈಲಿ ಕೆಲಸಾ ತಕ್ಕೊಂಡ ಕುಳ್ಳ, ವಾಮನಕರ್ ಮಾಸ್ಟರ್‌ರ ಹಾಗೆ ಭೀಕರ ಪತ್ನೀ ಕೈಲಿ ಬೀಸಿಸ್ಕೊಳ್ತಿರೋ ಇವನಲ್ವೇ ಭೂಪ!... ಗಂಡಂತೆಂಬರ ಗಂಡ ಇವ್ನು!! ...ಅರ್ಧಾಂಗೀ

ಐರಾವತವಾದ್ರೂನೂವೆ, ಅರ್ಧ ಆಳಿನೆತ್ತರವೂ ಇಲ್ಲದ ಈ ಛೋಟಾ ಮಾಹುತ... ಬುದ್ಧಿಂಬೋ ಅಂಕುಶದಿಂದ ಅಡಗಸ್ತಿಧಾನೆ, ಅವ್ನ ಮದರೌದ್ರಾನ!... (ಅಸೂಯೆ ಮುದ್ರೆಯನ್ನವಲಂಬಿಸಿ) ನನ್ನ ಹಾಳ್ departmentಏ ಬೇರೆ... ಬುದ್ಧಿ ಬಾಬತ್ನಲ್ಲಿ ಬೆಟ್ಟ, ನನ್ನ wifeಊ! ಇನ್ನು ಅವಳ ನಾಲಿಗೇನೋ ಕೆಂಜೇಳಿನ ಕೊಂಡಿ!... Therefore widow ಆದ್ರೇನೇ, ಗಂಡನ್ಮೇಲೆ ಮರ್ಯಾದೇ ಇಡೋದವಳು... Again therefore, widow ಆಗ್ಲೇಬೇಕು ಅವಳು... ಒಂದೆರಡು ದಿನಕ್ಕಾದ್ರೂ widow-shipನ ಹತ್ತಿ ವಾಯೇಜು ಮಾಡಿದ್ಲೋ ತನ್ನಷ್ಟಕ್ಕೆ ತಾನೇ ಬುದ್ಧಿ ಬಂದು, ನಲವತ್ತೆರಡು ಸಾವ್ರ ರೂಪಾಯ್ನ ಒಂದು secondನಲ್ಲಿ ಸಲೀಸಾಗಿ ಸಂಪಾದಿಸಿದ ನನ್ನ ಯೋಗ್ಯತೇನ ತಿಳುಕೊಂಡು, ಸತ್ತ ನಾನೂ, ಬದ್ಕಿರೋ ಅವಳೂ ನಮ್ಮ ಮಕ್ಕಳೂ, ಇನ್ನು ಯಾವ ಊರಿನಲ್ಲಾದ್ರೂ, ನಮ್ಮಾಯುಸ್ಸ ಶೇಷಾನ ಅನ್ಯೋನ್ಯವಾಗಿ ಕಳೀಬಹುದು!... ಸುಖವಾಗಿ... ನನ್ನ ಹಾಳು ಮಾವನ ಮನಿಯಾರ್ಡರಿಲ್ಲದೆ! ಹೌದೂ ನಲವತ್ತೆರಡುಸಾವಿರ ರೂಪಾಯ್ಲಿ ಮೂವತ್ಸಾವ್ರ minus ಆಗತ್ತೆ!... ಗಂಡನಿಲ್ದೇನೂ, ಅಪ್ಪ ಅಮ್ಮ ಇಲ್ದೇನೂ ಬಾಯ್‌ಬಾಯ್ ಬಿಡೋ ಭಿಕಾರಿಗಳ ಹಸಿವಿಗೆ ಹುಯ್ದು, ಅವ್ರ ವಾಸಕ್ಕೇಂತ ಕಟ್ಟೋ ಹಾಳು ಆಲಯಕ್ಕೆ!! ಧರಣಯ್ಯನೋರು ಹೇಳಿದಹಾಗೆ,... ಬಾಕಿ ಹನ್ನೆರಡು ಸಾವಿರ ರೂಪಾಯಿ ಸಾಕು! ನನ್ನ ಸಂಸಾರಕ್ಕೆ!!....(ಭೃಕುಟಿ ರಚನೆಯನ್ನು ಮಾಡುತ್ತಾ) ಹೌದು! ದುಡ್ಡು ಕೊಟ್ಟಿದ್ದು ಊರಿನ ವರ್ತಕ್ರು! ಚಕ್ಕು ಶ್ಯಾನುಭೋಗನ ಕೈಲಿ... ಏತನ್ಮಧ್ಯೆ... ಎತ್ತಿಧಾನೆ... topicಊ... ತನ್ನ ಮಗಳು ಸೀತೂವಿನ ಮದುವೇಗೆ—ಈ ಭದ್ರಕಾಳಿ ಹಾಕಿರೋ ಬಡ್ಜೆಟ್ ಒಂದು ಸಾವಿರ... ಕುಮಾರ ಕಂಠೀರವ್ನ ಕಾಲೇಜು ಖರ್ಚು ಇನ್ನೊಂದ್ಸಾವ್ರ... ಈ ಕಪ್ಪು amazon ಅಂದ್ಹಾಗೆ... totalಉ... two thousandಉ... ನನ್ನ ಹನ್ನೆರಡುಸಾವಿರ ರೂಪಾಯ್ನೂ, ಇವ್ರಿಗೆ ಬೇಕಾದ one one ಎರಡು ಸಾವಿರ ರೂಪಾಯ್ನೂ ಒಂದೇ ಬಾಯಿಂದ ಉಸರ್‌ತಿಧಾನೆ ಯಾಕೆ?!!... connection ಗೊತ್ತಾಗ್ಲಿಲ್ಲ... ಈ ಕಲಿ ಹಿಡಿಂಬಿ ಹೇಳಿದ ಹಾಗೆ... ಎಲ್ಲೀಗೆಲ್ಲೀ ಸಂಬಂಧ? ಒಟ್ನಲ್ಲಿ dangerous ಶ್ಯಾನುಭೋಗ! **“ವಿಪರೀತ ಬುದ್ಧೀ! ವಿನಾಶಕಾಲೇ!”... ಆದ್ರೇ? ಯಾರ ವಿನಾಶಕಾಲ ಅಂಬೋದ್ನ ತಿಳಿಕೋಬೇಕು ತಪಶೀಲಾಗಿ!...** (ದಂಪತಿಗಳ ಕಡೆ ಕಿವಿಯನ್ನೊಡ್ಡುವನು.)]

ಉಪನಾಯಕಿ : (ವಾರಾಹಿಯ ರೂಪವನ್ನು ತಾಳಿದ ದೇವಿಯು, ಶೋಣಿತ ಪಿಪಾಸ ಪೀಡಾಶಮನ-

ಳಾಗುತ್ತಲೂ, ಲೀಲಾ ಭೂಮಿಕೆಯನ್ನು ಪುನರವಲಂಬಿಸಿದ ಮಾಹೇಶ್ವರಿಯಂತೆ ರೌದ್ರವನ್ನೊದರಿ ಪತ್ನೀತ್ವವನ್ನು ಕೈಗೊಂಡು, ಸ್ಮಿತ ವಕ್ತ್ರ ವಿರಾಜಿತಳಾಗಿ, ತನ್ನ ಐಹಿಕೇಶ್ವರನನ್ನು, ಮೃದು ವಚನಗಳಿಂದ ಪ್ರಶ್ನಿಸುತ್ತಾ) ಏನದೂ ಚಕ್ಕೂ?... ನಲವತ್ತೆರಡು ಸಾವಿರ ಅಂತೀರಾ! ...ಹೆಚ್ಚೂಕಮ್ಮಿ ಅರ್ಧ ಲಕ್ಷ!!! ಸೀತೂಗೋ ವಯಸ್ಸಾಗ್ತಾ ಬಂತು. ಮದ್ವೇ ಆಗ್ಲೇ ಬೇಕು ಈ ವರ್ಷ... ಮಾಘ... ಇದು ಮಾಸ... ಮೆಟ್ರಿಕ್ಯುಲೇಷನ್ ಆದ ಅಶ್ವತ್ಥ ಕಾಲೇಜೂಂತ ಕೂತಿಧಾನೆ. ಇದಕ್ಕೆಲ್ಲಾ ಬೇಕಾದ್ದುಡ್ನ ವದಗಿಸೋವಗ್ಟೇನ ಬಿಡಿಸಲಾರ್ದೆ ವದ್ದಾಡ್ತಿದ್ವಲ್ಲಾ! ನೀವೂ ನಾನೂ! ನೀವು ನೀವೇ ಬಿಡಿಸಿಬಿಟ್ರಾ ಇವತ್ತು? (ವಾಮಪಾರ್ಶ್ವದಲ್ಲಿ ತನ್ನ ವಿಸ್ತಾರ ತನುವು ಹಾಸಿದ ಆತ್ಮಘನ ಛಾಯೆಯನ್ನು ಸೂಚಿಸಿ) **ಅಲ್ಲಿ ಬಿಸಿಲು !... ಇಲ್ಲ ಅಂದ್ರೆ! ನನ್ನ ನೆರಳಿಗೆ!....** ಪರ್ವಾ ಇಲ್ಲ!... **...ನಾನೇ ಎದ್ದು ಬಂದು ನೆರಳು ಹಾಕ್ತೇನೆ...** ನಿಮಗೆ!... [ವಲ್ಲಭನ ದಕ್ಷಿಣ ಪಾರ್ಶ್ವ ನಿಷಣ್ಣಿಸಿ ನಾಥನಿಗೆ ನಿಜ ಛಾಯಾತಪತ್ರವನ್ನು ಅರ್ಪಿಸುವಳು.]

ಉಪನಾಯಕ : ನೆರಳಿರ್ಲೆ! ಹಸಿವು ಕಣೇ! ಹೊಟ್ಟೆಗಿಲ್ದೇನೆ... ನಿನೂ ನನಗೂ ಊಟ ಇಲ್ಲ...!

ಉಪನಾಯಕಿ : (ಅಡ್ಡಮಾತಾಗಿ ಚನ್ನಾಯ್ತು!... ಇಷ್ಟು ದೂರ ನಿಮ್ಮ ಹೆಣಾನ—ಹೇಳಬಾರದಾಗಿತ್ತು! ಹೇಳಿಬಿಟ್ಟೆ!!... ಬಿಡ್ತು ಅನ್ನಿ! ಮರೆತುಬಿಡಿ—.... ಹುಡುಕ್ಕೊಂಡು ಓಡಿಬರೋಕೆ ಚೈತನ್ಯ-ವಿರ್ತಿತ್ತೇ?... ನನ್ನ ದೇಹದಲ್ಲೀ? ಊಟಾ ಆಗ್ದಿದ್ದದ್ರೆ?..... ಮನೇಲೆ ಎಲ್ರಿಗೂ ಊಟಾ ಆಯ್ತು! ಕಾದೂ ಕಾದೂ ನೋಡಿದ್ದಾಯ್ತು!

ಉಪನಾಯಕ : (ಎದ್ದು) ಸರಿ ಯಥಾಪ್ರಕಾರ! ಏಳು, ಹೊರಡೋಣ ಮನೆಗೆ... ಧರಣಯ್ಯನೋರ ಚೆಕ್ಕು ನಲವತ್ತೆರಡು ಸಾವಿರಕ್ಕೆ... ಅನಾಥರಾದ ಅಬಲೆಯರು, ಮಾತಾಪಿತೃರಹಿತ ಮಕ್ಕಳು, ಇವರಿಗೆ, ನರಕ ಪ್ರಾಪ್ತನಾದ, ಸತ್ತ ಸೋಮಾರಿಗೆ ಸ್ವರ್ಗವೆಲ್ಲೀದೂ!—ನರಸಿಂಹಯ್ಯನ ಹೆಸರಿಟ್ಟು, ಒಂದು ಆಲಯಕ್ಕೆ ಮುವತ್ತಾವ್ರ: ಬಾಕಿ ಹನ್ನೆರಡು ಸಾವಿರ; ಆಯ್ತೆ! ಧರ್ಮಿಷ್ಠರಾದ ಧರಣಯ್ಯನೋರ ಯಾವ ಹೊತ್ತೂ ತೊದಲದ ನಾಲಗೇ, ಸತ್ತೋನ ಸಂಸಾರಕ್ಕೆ ವದಗಿಸೋ ಸಹಾಯದ ವಿಷಯದಲ್ಲಿ... "ಹತ್ತು, ಹನ್ನೆರಡುಸಾವಿರಾಂ"ತ ಈ ಹೊತ್ತು ತೊದಲ್ತು... ಆಕೇಗೆ ಸಿಗೋ ಹತ್ತು ಸಾವಿರ ಕೈಗಂಟೋಕೆ ದಾರೀ, ಹನ್ನೆರಡುಸಾವಿರ ರೂಪಾಯ್ನ ರಸೀದಿಗೆ ಸೈನು ಹಾಕೋದೇ ಅಂಬೋದ್ನ ಒಪ್ಪಿಸಿ-

ಬಿಟ್ಟರೆ... ಶ್ರಮವೇನೂ ಇಲ್ಲ. ...ಜಾಣೆ ಆಕೆ... ದಕ್ಕಿದ ಹಾಗಾಯ್ತು ನಮ್ಮ ದುಸ್ಸನ್ನಿವೇಶದ ಅಂತ್ಯಾನ್ನ ಮುಟ್ಟಿಸೋ ಎರಡುಸಾವಿರ ರೂಪಾಯಿ... ನಡೀ... ಮನೇ ಕಡೇ.... ಇನ್ನೇನು ಬಂದುಬಿಡ್ತಾರೇ... ಇನ್‌ಸ್ಪೆಕ್ಟ್ರು, ಈಜೋಋ್ನೂ ಮುಳುಗೋರ್ನೂ ಇತ್ಯಾದಿಗಳ್ನೆಳಕೊಂಡು... ಆತ್ಮಹತ್ಯ ಮಾಡಿಕೊಂಡು ಪ್ರಾಣಗಳು ಬಿಟ್ಟ, ಆ ಪಾತ್ಕಿಹೆಣಾನ ಈಚೆಗೆತ್ತಿ ಹಾಕೋಕೆ... ಬಂದ್ಬಿಡ್ತಾರೆ ಜನಗ್ಳೂನೂ!... **ಅವ-ನು ಸತ್ತದ್ದು ಶುಭಾ ನಮ್ಮ ಊರಿಗೆ, ಒಂದು ಸೋಮಾರಿಯಾದ್ರೂ ಕಮ್ಮಿ ನಮ್ಮೂರ್ಗೆ!... ಹೀಗೇ ನೋಡು, ಬರ್ತಾಬರ್ತಾ, ಹಗೂರವಾಗೋದು ನಮ್ಮ ಭೂದೇವಿ ಭಾರಾ!**

[ದಂಪತಿಗಳು ಸೋಪಾನವನ್ನೇರಿ ನಿಷ್ಕ್ರಮಿಸುವರು]

ನಾಯಕ : [ದಂಪತಿಗಳ ಈ ಕಠಿಣಾರೋಪಗಳು ಕರ್ಣಾಂತವನ್ನು ಸೇರುತ್ತಲೂ ಕೆಣಕಿದ ಕಾಳೀ-ಯನಂತೆ ಕನಲಿ, ರೌದ್ರಮುದ್ರೆಯನ್ನು ತಾಳಿ, ಪುನಃ ಬಿಗಿದ ಮುಷ್ಟಿಗಳಿಂದ, ನಿಷ್ಕ್ರಮಿಸುತ್ತಿರುವ ನರಯುಗ್ಮವನ್ನು ಸೂಚಿಸಿ ನಿರಾಕರಿಸುತ್ತಾ]...**ಭೂಭಾರ!... ಯಾರು!... ನಾನೇ?**... ಅಲ್ಲಾ! ಪೂ-ತನಿಹಾಗಿರೋ ಪತ್ನೀನ ಪಕ್ಕದಲ್ಲಿ ನಡೆಸಿಕೊಂಡು ಹೋಗ್ತಿರೋ, ತಲೆಯಾವ್ದು ಬಾಲಯಾವ್ದು ತಿಳಿ-ಯದ, ಅಂಗುಷ್ಠದಷ್ಟೂ ಇಲ್ಲದ ಈ ಜಂತೂಗೆ... ನಾನೇ? ಭೂಭಾರ!! ಛೇ! ಊರ್ಗೆಲ್ಲಾ warning ಕೊಟ್ಟೇಬಿಡಬೇಕು!!!! ಇವನು bombಊ ಅಂಬೋದ್ನ!!... ತಿಳಿಸೇ ಬಿಡಬೇಕು, ಸರ್ವರಿಗೂ!!... ಹನ್ನೆರಡು ಸಾವಿರ ರೂಪಾಯ್ನೂ ಊರ್ನೋರು ಒಬ್ಬ ವಿಧವೇಗೆ ಕೊಟ್ರೇ, ಅದರಲ್ಲಿ... ಎರಡಾರ್ಲ ಹನ್ನೆರಡುನೂರು... ಹದ್ನಾರಾರ್ಲ ತೊಂಬತ್ತಾರು... ಅರ್ಧಆರ್ಲ ಮೂರು. ತೊಂಭತ್ತಾರು ಮೂರು ತೊಂಬತ್ತೊಂಭತ್ತು... ಇನ್ನೊಂದಿರ್ಲಿ, at least ಹದಿನಾರು percentಉ, ಗಂಡನ್ನ ಕಳಕೊಂಡ ವಿಧ್ವೆ ದುಡ್ಡ್ನಲ್ಲಿ... ಕಮಿಷನ್ ಕಳಕಳ್ಳೋ ಈ ಕಡುಪಾಪಿ ಅಯೋಗ್ಯತೇನ ತಿಳಿಸಲೇಬೇಕು ಊರಿಗೆ-ಲ್ಲಾ?... ಸೋಮಾರೀನೇ ನಾನು?... ಈಗ ಹೀಗೇ ಓಡಿಹೋಗಿ... ಧರಣಯ್ಯನೋರ್ನ ನೋಡಿಬಿಟ್ಟು... ನಾನು ಸತ್ತದ್ದು ಸುಳ್ಳೂಂತ ತಿಳಿಸಿಬಿಟ್ಟು... ಚಕ್ಕೂ ಹರಿಸಿಬಿಟ್ಟು, ಈ ತಾಟ್ಕಿ ಮಗಳ ಮದುವೇನೂ ನಿಲ್ಲಿಸಿಬಿಟ್ಟು... ಇವನ ರಾಕ್ಷಸ ಕುಟುಂಬ ಕಂಗೆಡ್ತಿರೋದ್ನ, ಕಣ್ಣುತುಂಬಾ ನೋಡ್ತಾ, ಆನಂದಪ-ಡ್ತಾ, ಈ Sham Rogueಉ ಪಡೋ ಸಂಕಟ ಸಾಗರದಲ್ಲಿ ಸಂತೋಷವಾಗಿ ಈಜ್ತಾ ಶಾಂತಿ ತಂ-ದುಕ್ಕೊಂಡು... ನನ್ನ ಸೇಡು ತೀರಿಸಿಕೊಳ್ಳೋದೇ, ಗಂಡಸ್ತನ... best thingoo ಭೂಭಾರಾನೇ?... ನಾನು! ತೋರಿಸ್ತೇನೆ ಈಗ...! Therefore, ಈ ಪಾಪೀ ಹಾಗೆ ಹಸಿವಿನಿಂದ ಬಳಲ್ತಿರೋ ನಾನೂವೆ

ಮನೇಗೆ ಹೋಗಿ ಊಟ ಮಾಡೋದೆ first thingoo... (ಯೋಚಿಸುತ್ತಾ, ಬಿಗಿದ ಮುಷ್ಟಿಗಳು ಕ್ರಮೇಣ ಮೃದುವಾಗಿ ಸಡಿಲ ಬಿದ್ದು ಬಾಹುಗಳು ನಿಸ್ತ್ರಾಣಿಗಳಾಗಿ ಜೋಲಾಡುತ್ತಾ)...

ಹೌದೂ ಊ!? ಈ "ಮುಯ್ಯಿಗೆ ಮುಯ್ಯಿ"ನ ಗಲಾಟೇಲಿ, ನನ್ನ wifeನ ನನ್ನ ದಾರೀಗೆ ತರೋ widow shipನ ಮೇಲೆ ಹತ್ತಿಸೋದು ಹ್ಯಾಗೇ? ...ಆ Voyageನ ಒಂದೆರಡು ದಿನವಾದ್ರೂ ಅನುಭವಿಸಲ್ಲೇ ಬೇಕು... ಇವ್ಳು!

(ಭೃಕುಟಿರಚಿತನಾಗಿ, ಕಪಾಲವನ್ನು ಕೆದರಿ ಕೆದರಿ ಯೋಚಿಸುತ್ತಾ)

...ಶ್ಯಾನುಭೋಗನಿಗೆ ಬುದ್ಧಿ ಕಲಿಸೋ ದಾರಿ ಹಿಡದ್ರೋ, ನನ್ನ ಹೆಂಡ್ತೀಗೆ ಬುದ್ಧಿ ಕಲಿಸೋ line ತುಂಡಾಗುತ್ತೆ... hopelessoo!! ಎರಡು linesoo ಹಿಡಿಯೋದು hopelessoo;... ಅದು ಹಿಡಿದರೆ ಇದಿಲ್ಲ... ಇದು ಹಿಡಿದ್ರೆ ಅದಿಲ್ಲ!... Geometryಲಿ ಬಂದ್ಹಾಗ, two lines enclose a sppaceಊ, which is impossibleಊ. (ತೀರ್ಮಾನಿಸಿ ತಲೆದೂಗುತ್ತಾ) Therefore, ಇವೆರಡೂ ಬಿಟ್ಟು ಮೂರನೇ line ಒಂದನ್ನ ಹಿಡೀಲೇಬೇಕು... ಆ lineಗೋ ಯಾವಾಗಲೂ breadth ಏ ಇಲ್ಲಾ! ಈಗ ನಾನಿರೋಸ್ಥಿತೀಲಿ, ಷುರೂನೂ, endಊ ಇಲ್ದೆ ತೋಚೋಹಾಗೇ ಇಲ್ಲ! ಹಸಿವು ಹೊಟ್ಟೇನ ಕೊರೀತಿರೋವಾಗ ಹೊಳಿಯೋದಲ್ಲಿ?, ನನ್ನ ಮೆದುಳಿಗೆ? (ಕುತ್ತಿಗೆಯನ್ನೆತ್ತಿ) ಈ ಹಾಳು ಬಿಸಿಲೊಂದು ಶನಿ! ಬೆಳಿಗ್ಗ್ಯೇ ಥಳೀಗೆ ಹೆದ್ರಿ ಬಿಸಿಲಿಗೆ ಕಾದಿದ್ದೆ! ಈಗ ಈ ಬಿಸಿಲಿಗೆ ಬೆಂದು ಈ ಬೂರುಗದ ಬುಡಾನ ಸೇರಬೇಕಾಗಿದೆ! (ದ್ರುಮಚ್ಛಾಯೆಯಲ್ಲಿ ನಿಷಣ್ಣಿಸಲು ಉಪಕ್ರಮಿಸಿ ಥಟ್ಟನೆ ನಟ್ಟುಕೊಂಡು) ಕೂತುಕೊಳ್ಳೋಕೆ ಎಲ್ಲಿ time ಈಗ!... ಸತ್ತೋನ Soulನ ಯಮದೂತರು ಸೆಳಕೊಂಡ್ಹೋಗೋಕೆ ಮುಂಚೆ, ಶವಾನ ಸೆಳಕೊಂಡು ಹೋಗೋಕೆ sham rogue ಹೇಳಿದ ಹಾಗೆ ಬಂದೇಬಿಡ್ತಾರೆ; ಈ ಹಾಳು ಹೆಣಾನ ಹುಡುಕೋಕೆ... ಬಂದೇಬಿಡ್ತಾರೆ... (ಉನ್ಮಾದನಾಗಿ ನಗುತ್ತಾ) ಹಃ! ಹಃ!! ಹಃ!!! ಹಾಃ!!!! ಒಳ್ಳೇ ಕವೇಗೋಲಿನಲ್ಲಿ ಸಿಕ್ಕೊಂಡಿಧೇನಲ್ಲ... ಸತ್ತ ಹೆಣವಾದ ಹಾಗೂ ಇಲ್ಲ! ಬದಿಕಿ ಮನೇಗೆ ಹೋಗಿ ಕಬಳಾನ ಗದಿಕಿದ ಹಾಗೂ ಇಲ್ಲ... ನನಗೆ ಈಗಿರೋ ಹಸಿವಿನಲ್ಲಿ ಹೆಂಡತೀನ ಬಿಟ್ಟು, ಅವಳಿಗೆ ಬರೋ ಹತ್ತು ಸಾವಿರ ಶ್ವೇತಗಳಿಗೆ ಹೇಸಿ ಓಡಿಹೋಗೋ ಹಾಗೂ ಇಲ್ಲ!... ನಮ್ಮ ಊರ ಸರಹದ್ದಿನಲ್ಲಿ, ನನ್ನ ಗುರ್ತು ಕಂಡುಬಂತೋ, ನಾನು ಸಾಯದ್ದು ಹೊರಬಿದ್ದು, ತುಂಡಾಗುತ್ತೆ... ಹೆಂಡ್ತಿ ಪ್ಲಸ್ ಮಕ್ಕಳು Plus ಹತ್ತು ಸಹಸ್ರ King George ಪ್ರತಿಮೆ-

ಗ್ಳು... ಇದಕ್ಕೆ ಬೆದರಿ ಓಡಿಹೋದೆನೋ, ಅವಳಾಯ್ತು ಅವಳ ಕೈಗೆ ಸಿಗೋ ಹತ್ತುಸಾವಿರವಾಯ್ತು... ಅವಳು ಅವಳ ಮಕ್ಕಳು ಅವಳ ಅಪ್ಪನ ಮನೇಗೆ ಯಾತ್ರೆಯಾಯ್ತು... ನನ್ನ ಶ್ರಾದ್ಧವಾಯ್ತು... ಬಿಡಿಗಾಸೂ ನನಗೆ ದಕ್ಕೋ ಹಾಗಿಲ್ಲ!... ಸದ್ಯ, ಈ ಸೋಪಾನ ಬಿಟ್ಟು, ಕತ್ತಲೆ ಕವಿಯೋವರಿಗೂ ಮೂತಿ ಮುಚ್ಚಿಕೊಳ್ಳೋದೇ first and best thingಊ...!!

[ಸತ್ತಮುತ್ತ ಅಂಜಿ ನೋಡುತ್ತಾ ನಿಷ್ಕ್ರಮಿಸುವನು.]

[ನೇಪಥ್ಯದಲ್ಲಿ "ಹಗ್ಗಾ ತಂದಿದ್ದೀರಾ?—ಕೆಸರಲ್ಲಿ ಸಿಕ್ಕೊಂಡಿದ್ರೂನೂವೆ, ಮುಳ್ಗಿ ಮೆಹನತ್ತು ಮಾಡಿ, ಆ ಹೆಣಾನ ಹೊರಗೆಹಾಕಿದೋನಿಗೆ, ಹತ್ತುರೂಪಾಯಿ ರೂಬುರಬು ಬಕ್ಷೀಸು! ಬನ್ನಿ!" ಎನ್ನುವ ಇನ್‌ಸ್ಪೆಕ್ಟರ ಧ್ವನಿಯು,... ಏಕಗ್ರೀವರಾಗಿ ಹತ್ತು-ಇಪ್ಪತ್ತು ಜನರು, "ಅಂಗೇ ಆಗ್ಲೀ ಬುದ್ಧೀ... ಏಟಾಳುದ್ದಾ, ಎಂತಾ ಕೆಸರ್ನಾಗೆ ಸಿಕ್ಕೊಂಡಿದ್ರೂನೂವೆ... ಮುಣಿಗಿ ಎಳೆದಾಕಿಬಿಡ್ತೀವಿ, ಎಣಾನ... ನಿಮ್ಮ ಪಾದಕ್ಕೆ!... ನಡೀರಿ ಬುದ್ಧೀ" ಎಂಬ ಕೋಲಾಹಲವೂ ಕೇಳಿಸುತ್ತಾ, ಘರದೆಯು ಬೀಳುವುದು.]

ದೃಶ್ಯ ೩

ಸ್ಥಾನ : ರಾಮಪುರದ ಪರಿಪ್ರಾಂತ್ಯ ಇನಾಮತಿ ಕಾಡುಹಾದಿ.

ಕಾಲ : ನಾಯಕನ ಆತ್ಮಹತ್ಯದ ಅನಂತರ ಆರನೆಯ ನಿಶಿ.

[ಪೌರವರಿಬ್ಬರು ರಾಮಪುರತಃ ನಡೆಯುತ್ತಿರುವರು. ಮುಂದಾತನು ತಾನು ತಲೆಯ ಮೇಲೆ ಹೊತ್ತಿರುವ ದೊಡ್ಡ ಗಂಟಿನ ಘನತೆಯನ್ನೂ ಗಮನಿಸದೆ, ಆದರ್ಶನೀಯವಾದ ಅಪಾಯಗಳಿಗೆ ಅಂಜಿ, ಅತ್ತಿತ್ತ ದೃಷ್ಟಿಯನ್ನಿಟ್ಟು, ಬೆದರುತ್ತಾ, ಅವಸರದಿಂದ ಮುಂದುವರಿಯುವನು. ಹಿಂದಾತನು, ಪ್ರಭಾಕರನನ್ನು ಪೊಗಳುತ್ತಾ ಪೂರ್ಣಚಂದ್ರನಿಂದ ಪೊಳೆಯುವ ಪ್ರಕೃತಿ ಭಾಗ್ಯವನ್ನು ಮೆಚ್ಚಿ ಯಥಾಸೌಕರ್ಯಂ ಅನುಭವಿಸುತ್ತಾ ಬಸವನ ಹುಳುವಿನಂತೆ ಹರಿಯುವನು.]

ಹಿಂದಾತ : ಕೆರೇನ್ ನ್ನೋಡ್ರಿ... ಇಷ್ಟಕ್ಕೂ, ನಮ್ಮ ಕೆರೆ ಈಗ ಹ್ಯಾಗಿಧೆ!? ಬೆಳ್ಳಂಬೆಳಕಿನಲ್ಲಿ ನೋಡಿದಾಗಲೆಲ್ಲಾ... ನಮ್ಮೂರ ಕೆರೆ... ನಮ್ಮೂರಕೆರೆ, ಬರೀ ಕೆರೆ... ಈಗ ನೋಡ್ರಿ... ಕ್ಷೀರಸಾಗರರೀ... ಉಕ್ತಿಧೆ... ಕಾಣ್ರೀ!... ಒಂದೇ ಹಾಲು! ಚಂದ್ರನ ಜೋರೇ ಜೋರು ಅಂದ್ರೆ!

(ಹಾಡುತ್ತಾ ; ರಾಗ – ತೋಡಿ)

“ಅಮಾಯ... ಮ... ಮೃತ... ನಿ... ಧಾ... ನಂ...” ಅಮೃತ ವೃಷ್ಟೀರೀ... ಅಲ್ಲಿ ನೋಡಿ! (ಕೆರೆಯ ಕೊನೆಯಲ್ಲಿನ ಚಿಕ್ಕಗುಡಿಯ ಮುಂದಿನ ತೋಟವನ್ನು ಸೂಚಿಸಿ)... ಈ ಬಳ್ಳಿಗಳನ್ನೋಡ್ರೀ... ಗಾಳಿಗಾಡ್ತಾ... ಆಡ್ತಾ ಇರೋದು... ಎಲ್ಲೋ ಕೇಳಿದ್ದಾರೆ... (ಚಿಟಿಕೆ ಹಾಕುತ್ತಾ)... (ಹಾಡುತ್ತಾ) “ಪಳೀಪರೀ”... ಹ್ಯಾಗ್ರೀ ಅದೂ... ಹೂಂ!! ಊಂ, “ರಾರಾಜಿಪಳೀ... ಪರಿ ಸ್ತ್ರೀ ಈಃ”, ಮುಂದಕ್ಕೆ ಮಲ್ಲಿಗೇನೋ ಏನೋ... ಅಂತೂ ಬಳ್ಳಿ!... ತದ್ರೂಪು!... ನೋಡ್ರೀ!... ನಿಲ್ರೀ!!

ಮುಂದಾತ : ಯಾರ್ರೀ?... ಯಾವ ಹೆಂಗಸ್ರೀ? ಎಲ್ರೀ!?

ಹಿಂದಾತ : ಅಲ್ಲಿ ನೋಡ್ರೀ ಗುಡೀ ಮುಂದೇ... ಮಲ್ಲಿಗೆ ಗುಲಾಬಿ ಬಳ್ಳಿಗ್ಳೂ ಘಾಳೀಗೆ ಹಾರಾಡ್ತಾ ನೀರ್ಕಡೆ ತಲೆ ಚಾಚ್ತಿರೋದೂ... ಇಬ್ಬರು ಹೆಂಗಸ್ರು ಹಾಗೇ... (ಚಿಟಿಕೆ ಹಾಕಿಕೊಂಡು ಹಾಡ್ತಾ) "ಸ್ತ್ರೀ ರೂಪದೀ... ಈ"... ಹಿ! ಹಿ!! ಹಿ!!! ಹಿ!!!! (ಎಂದು ನಕ್ಕು) ನನ್ನ ಏನೋಪ್ಪಾ... ಹುಚ್ಚೂಂತ ಬೇಕಾದ್ರೂ ಅಂದುಕೊಳ್ಳೀ! ನನ್ನ ಕಣ್ಣಿಗೇನೋ, ಮಲ್ಲಿಗೆ ಗುಲಾಬಿ ಬಳ್ಳಿಗಳ ವೇಷಾ ಧರಿಸ್ಕೊಂಡು ಯಾರೋ ಇಬ್ಬರು ಸ್ತ್ರೀಯರು ಹೊರಟ್ಹಾಗಿದೆ... ಯಾರಿಬ್ಬರೇನೂ... ಸ್ವರ್ಗದಲ್ಲಿ ಇದ್ದೂ ಇದ್ದೂ, ಪಾಲ್ಮಾರ್ಕೆಪಟ್ಟು, ಇಹಲೋಕದ ಇಂಥಾ ಚಂದ್ರಿಕೆ ಪ್ರಭಾವದಲ್ಲಿ... ನಮ್ಮ ಕೆರೆ ಈ ರಾತ್ರಿ... ಕಾವ್ಯದಲ್ಲಿ ಬರುತ್ತಲ್ಲಾ... "ಪಾಲ್ಗಡಲೋಳ್ ಪೊಂಗಿಪೊಂಗಿ ಪೊಳೆಯುವ"ದ್ನ ನೋಡಿ, ಭೂಮೀಗಿಳ್ದು ಬಂದು, ಮನುಷ್ಯರ ಮೈಮೇಲೆ ದೇವರು ಬರೋಹಾಗೆ... ಮಲ್ಲಿಗೆ ಗುಲಾಬಿ, ಬಳ್ಳಿಗಳ ಮೇಲೆ ಬಂದು, ಕ್ಷೀರಾಭಿಷೇಕಕ್ಕಿಳೀತಿರೋ... (ಅಮರ ರಾಗದಲ್ಲಿ ಹಾಡುತ್ತಾ) "ಮೇನಕೇ ಮಲ್ಲಿಗೇನ ಹ್ಯಾಗೋ ಘೃತಾಚೀ ಗುಲಾಬೀ ತಥಾ" ಇತಿ ನನ್ನಮರಃ!... ಇರಲಿ! ನಂದೂ ಒಂದು ವರಸೆ!... ಇವತ್ತಾತ್ರೇ! ಬನ್ನೀ! ಅನುಭವಿಸ್ರೀ!... ಪ್ರಕೃತೀನಾ! ಚಂದ್ರಿಕೇಂದ್ರೇ ಇದು!... (ನಿಷಣ್ಣಿಸಿ ಹಾಡುತ್ತಾ ರಾಗ-ಕೇದಾರಗೌಳ)... "ಮಲ್ಲಿಕಾಸುಮಲತೆಯ ಜಾಲವ ಚೆಲ್ಲಿ ಸೆಳೆವಳು ಪ್ರಕೃತಿಯೂ!"||... ಬಳ್ಳೀ ಬಲೇನ ಬೀಸಿ ಸೆಳೀತಿಧಾಳ್ರೀ! ಪ್ರಕೃತಿ! ಬನ್ನಿ!... ಇಹದಲ್ಲಿ ಇದಕ್ಕಿಂತ ಇನ್ನೇನ್ರೀ? ದಮ್ಮಯ್ಯಾ ಬನ್ನ್ರೀ! ನೋಡ್ರೀ!... ತ್ಸು! ತ್ಸು!! ತ್ಸು!!!... ಏನು ಹೇಳಿದ್ರೂನೂವೇ... ಪ್ರಕೃತಿ ಪ್ರಕೃತೀನೇರೀ! ಪ್ರಾಣೀ... ಅನುಭವಿಸಿ ಆನಂದಪಡೋಕೆ ಪ್ರಾಪ್ತವಿರಬೇಕ್ರೀ! ಆ ಮಲ್ಲಿಗೆ ಗುಲಾಬೀ ಬಳ್ಳಿಗ್ಳೂ ಪ್ರಾಣಬಿಡ್ತಿವೇರಿ... ಪಾಪ! ನೀರ್ನ ಮುಟ್ಟೋಕೆ... ಗಾಳೀ ಸಹಾಯಾನ ಕೋರ್ತಾ...!

ಮುಂದಾತ : (ಏಕಾಂಗಿಯಾಗಿ ಮುಂದುವರಿಯಲು ಬೆದರುತ್ತಲೂ... ನಡುಪಥದಲ್ಲಿ ನಿಷಣ್ಣಿಸಿ, ನಾಲ್ಕು ದಿಕ್ಕಿಗೂ ಕೈಬೀಸುತ್ತಾ, ನಗುತ್ತಾ, ಮಿಠಾಯಿ ಅಂಗಡಿಯನ್ನು ಹೊಕ್ಕ ಹುಡುಗನಂತೆ ಹಲ್ಲು ಕಿರಿಯುತ್ತಾ, ಪರಿಸ್ಥಿತಿ ಮಗ್ನನಾದ, ಸಪಥಿಕನೆಡೆಗೆ ಬಂದು)... ಏನ್ರೀ ಇದು! ಹುಚ್ಚು!... ಪಂಚೆ ಮಾಸೋದ್ನೂ ಮರ್ತು, ಮಣ್ಣುಹಾದೀಮೇಲೆ ಕೂತು, ಕೆರೇ ಎದುರು ಕಟ್ಟೇಮೇಲೆ ಗುಡೀ ಮುಂದೆ ನೇತಾಡ್ತಿರೋ ಬಳ್ಳಿಗ್ಳಬಾಬ್ತು ಇದು ಮಲ್ಲಿಗೆ, ಇದು ಗುಲಾಬಿ ಅಂಬೋದ್ನ ಇಲ್ಲಿಂದಲೇ ನಿಷ್ಕರ್ಷಿ-

ಸೋ ನಿಮ್ಮ ದೂರದೃಷ್ಟಿ... ಇಲ್ರೀ...

ಹಿಂದಾತ : ದೃಷ್ಟಿ ಅಲ್ಲಾ ಕಾಣ್ರೀ! (ಮುಂದಾತನ ಬಗ್ಗಿದ ತಲೆಯನ್ನು ಬಿಗಿಹಿಡಿದು, ಸೂಚಿಸಿದ ಕೆರೆಯ ಕೊನೆಗೆ ತಿರುಗಿಸಿ, ಅತ್ತಿತ್ತ ಡೋಲಾಯಿಸುತ್ತಾ) ಘ್ರಾಣ! ಘ್ರಾಣ! ಘ್ರಾಣಿಸಿ ಗಮನಿಸ್ರೀ! ಘಾಟ್ನ... ಅದು ಮಲ್ಲಿಗೇ, ಇದು ಗುಲಾಬೀ!... (ಅಮರರಾಗದಲ್ಲಿ) "ಮಲ್ಲಿಕಾಗುಲಾಬೀಜೈವ" ನಿ-ಜವೇ?... ದೃಷ್ಟಿ ಅಲ್ಲಾ ಕಾಣ್ರೀ... ಘ್ರಾಣ!... ಕವಿ ಹೇಳಿದ ಗಂಧವಹ!... ಘ್ರಾಣ! ಕೂತುಕೊಂಡು ಕೇಳ್ರೀ! (ಹಾಡುತ್ತಾ: ರಾಗ : ತೋಡಿ) ಅದೆಂಥಾ "ಲ... ತಾ... ಗಂಧ... ವ... ಹೇ... ನ... ಚುಂ... ಬಿ... ತಾಂ!"ತ ಕವಿ ಹೇಳಿದ್ದಾಗೆ, ಗಂಧವಹ ಕಾಣ್ರೀ!... ಕಣ್ಣಿಗೆ ಕಾಣದ್ದನ್ನ ಎತ್ಕೊಂಬಂದು ಮೂಗಿಗೆ ತೂರಿಸಿ... ತುಂಬಿ ಚುಂಬಿಸ್ತಿಧೆ ಕಾಣ್ರೀ! ಗಂಧವಹ! (ತಪ್ಪಿಸಿಕೊಳ್ಳಲು ಮುಂದಾತನು ಜಗ್ಗುತ್ತಿರಲು) ಇರ್ರೀ! ಮೂರು ಫರ್ಲಾಂಗೂ ಇಲ್ಲ ಊರು... ಇದ್ಯಾಕ್ರೀ ಅವಸ್ರ?

ಮುಂದಾತ : ಅವಸರವಲ್ಲ!... ಭೀತಿ!... ಇಷ್ಟು ಹೊತ್ತಿನಲ್ಲಿ ಇಲ್ಲಿ ಹಾಸ್ಹೋಗೋದ್ರ ಭೀತಿ... ಪ್ರಾಣ-ಭೀತಿ... ಚೋರಭೀತಿ... ಅಲ್ದೆ, (ಕಣ್ಣುಗಳಿಂದ ಕನಿಕರವನ್ನು ಕಾರಿಸಿ ಪಥಿಕನನ್ನು ಮನ್ನಿಸಿ)—ಓಹೋ! ಮರ್ತೆ; ನೀವು ಈ ವಾರವೆಲ್ಲ ಊರಲ್ಲೇ ಇರ್ಲಿಲ್ಲಾ... ಅಯ್ಯೋ ಪಾಪ!... ನಿಮಿಗೆಲ್ಲಿ ಗೊತ್ತು?—ಪ್ರೇ-ತಭೀತಿ! ಸ್ವಾಮೀ, ಪ್ರೇತಭೀತಿ!!

ಹಿಂದಾತ : ("ಪ್ರೇತ ಭೀತಿ" ಎಂಬ ಪದವನ್ನು ಕೇಳುತ್ತಲೇ, ಕಿರ್ಲುತ್ತಾ) ಏನೂ!? ಪ್ರೇತ!!! ಇಲ್ಲಿ! ಯಾರ್ದು?!!!

ಮುಂದಾತ : ನಮ್ಮ ಊರಿನ ನರಸಿಂಹಯ್ಯನ್ದು... ಸತ್ತಮೇಲೆ ಹಗ್ಲೂ ರಾತ್ರೆ ಇಲ್ಲಿಲ್ಲೇ ಹಾರಾಡ್ತಿ-ರೋ ಅನ್ನ ಪ್ರೇತದ ಭೀತಿ... ಅದರ ಜೊತೇಲಿ ಲಾಗಾಯ್ತಿನಿಂದ ಇಲ್ಲದ್ದ ಚೋರಭೀತಿ... (ಹಿಂದಾತ-ನು, ಮೂರ್ಧನಿಯಲ್ಲಿನ ಮೂಟೆಯು ಜಾರಿ, ಅದರೊಂದಿಗೆ ಮಹೀಸಮನಾಗಲು, ಮುಂದಾತನು ಸಪ್ರಯಾಣೀಕನನ್ನು ಸಂತೈಸುತ್ತಾ) ಹೆದರ್ಬೇಡ್ರಿ, ಭಟ್ರೆ, ನಾನಿಧೇನೆ!

ಹಿಂದಾತ : ಇಧೀರಾ!? (ಎರಡು ಕೈಗಳಿಂದಲೂ ಇಕ್ಕಳದಂತೆ ಮುಂದಾತನ ಗ್ರೀವವನ್ನು ಬಿಗಿದು

ತಗ್ಗಿಸಿ, ಕುಕ್ಕರಿಸಿ, ಹಿಡಿತವನ್ನು ಬಿಡದೆ ಫಾಲಪಟ್ಟವನ್ನು ಆತನ ವಿಶಾಲ ವಕ್ಷಸ್ಥಳದ ಮೇಲೆ ಪ್ರತಿಷ್ಠಿಸಿ... ಹೊರಳಿಸುತ್ತಾ... ಗದ್ಗದ ಚೀತ್ಕಾರದಿಂದ) ಏನು!?... ನಾನೂ ಇಧೇನೆಯೇ!?

ಮುಂದಾತ : (ಹಿಸುಕಿ ಹಿಡಿದ ಶ್ವಾಸನಾಳದಿಂದ ಶ್ರಮಿಸಿ ಉಸಿರುತ್ತಾ) ಇಲ್ದೆ ಏನ್ರೀ?... ಬಿಡ್ರೀ... ಬೆದರಬೇಡ್ರೀ!... ನಾನು ಇಧೇನೇ!

ಹಿಂದಾತ : ನರಸಿಂಹಯ್ಯ ಸತ್ತನೇ? ನಿಜವಾಗಿ ಸತ್ತನೇ! ಆಶ್ಚರ್ಯ!! ಕಲಿಯುಗದಲ್ಲಿ, ಕಡು-ಪಾಪಿಗ್ಳು ದೀರ್ಘಾಯುಗಳೂ ಅಂತಿದ್ದೆ... ಹಾಗಾದ್ರೆ ಧರ್ಮ ಈಗ್ಲೂ ಇಧೇ! ಇಹಲೋಕದಲ್ಲೀ!? "ಬದುಕಿರೋಕೆ ಯೋಗ್ಯತೆ ಇಲ್ಲಾ ಭೂತಳದಲ್ಲೀಂ"ತ ಯಮ, ದೂತರ್ನ ಕಳ್ಸಿ, ಇವನ್ನ ಪಾತಾಳಕ್ಕೆ ಎಳ್ದು, ಅಲ್ಲಿ ಅಜಮಾಯಿಷೀಮಾಡಿ, ಅಲ್ಲಿಗೂ "ಲಾಯಕ್ಕಲ್ಲಾಂತ"ವದ್ದು ಅಟ್ಟಿತ್ತಲ್ಲನೂವೆ, ಮೂರು ಲೋಕಕ್ಕೂ ಟಿಕೆಟ್ ಇಲ್ಲದ ಇವನಾತ್ಮ, ರೇಗಿ, ಹಳೇ ಸೇಡುಗ್ಳು ಜ್ಞಾಪಕಕ್ಕೆ ಬಂದು, ಇಲ್ಲಿಲ್ಲೇ ಹಾ-ರಾಡ್ತಾ ಹೆದರಿಸ್ತಿಧಾನೋ? ಪಾಪಿ!!... ಹೆದರಿಸಲೀ! (ಮುಂದಾತನ ಮೆಡೆಯ ಮೇಲಿನ ಭದ್ರ ಹಿ-ಡಿತವನ್ನು ಮತ್ತೆ ಬಿಗಿದು) ಆದ್ರೆ ಯಾರನ್ನ ಹೆದರ್ಸಿದ್ರೂ... ನನ್ನ ಹೆದರ್ಸೋ ಹಾಗಿಲ್ಲಾ... ಅವನ ಹಳೇ ಸಾಲಗಾರ ನಾನು... ನನ್ನಾ... ಹೆದರ್ಸೋಹಾಗಿಲ್ಲ... ಈಗ ನಿಲ್ಲಲಿ ನನ್ನ ಎದ್ರಿಗೆ ಅವನ ಪ್ರೇತ... ಕೇ-ಳೇಬಿಡ್ತೇನೇ... ನನ್ನ ಹತ್ರ ಎರವಲು ತಗೊಂಡ ಮೊಳಕಾಲ್ಮುರು ವಸ್ತ್ರ-ಸರಿಗೆ ಅಂಚೂಂದ್ರೆ ಮೂವ್ವ-ತ್ತಾರು ತೊಲಾ!... ಖುದ್ದಾಗಿ ನಿಂತು ನೇಯಿಸ್ದ, ನಮ್ಮ ಮಾವ!... ಅವನೇ ಪಕ್ಕದಲ್ಲಿ ನಿಂತು ಬಣ್ಣ ಹಾಕಿಸಿದ್ದೂ! ದೀಪಾವಳೀಗೆ!!... ನನ್ನ ಎಂಟನೇ ದೀಪಾವಳೀಗೆ!!!! ಎಲ್ಲಾದ್ರೂ ಕೇಳಿಧೀರಾ!!!!!... ಇವನು ಒಂದು ದಿನಕ್ಕೇಂತ ಗಂಜಿ ಇಸ್ಕೊಂಡ... "ಇವನೇ ನೊ?" (ಕೈಬೀಸುತ್ತಾ)... **ಇದು**... ಈ ಪ್ರೇತ! "ಇವನಾ"ಗಿದ್ದಾಗ!... ಅಲ್ಲೇ ಆಗ ಎರಡೂವರೆ ರೂಪಾಯಿ ನಗ್ದು, ಸಾಲ... ಅವರಪ್ಪ ಸತ್ತ-ದ್ದು ಶ್ರಾದ್ಧಕ್ಕೇಂತ ಸುಲ್ಕೊಂಡದ್ದು... ಸುಳ್ಳು ಹೇಳಿ... ಅವರಪ್ಪ ಸತ್ತದ್ದು ಸುಳ್ಳಲ್ಲ!... ಶ್ರಾದ್ಧ ಸುಳ್ಳಲ್ಲಾ! "ಮಾಡ್ತೇನೇ" ಅಂದದ್ದು ಸುಳ್ಳು!... "ಪ್ರೇತಾ" ಅಂದ್ರೆ ಬೆದ್ರಿದ್ರೂನೂವೆ ನಾವೂ... "ಸಾಲಗಾರ್ರೂ" ಅಂದ್ರೆ... ಸನ್ನಿಪಾತ ಆತನಿಗೆ!... ಆದ್ರೂ ಶುಭಾ ಅನ್ನಿ!... ವಟ್ನಲ್ಲಿ ಸಮಾಜಕ್ಕೂ ಸರ್ವರಿಗೂ ಶುಭಾ ಅನ್ನಿ!!... ಅಲ್ದೆ, ಇವನ ಕಾಟಾತಡೀಲಾರ್ದೆ, ಎರಡು ಮಕ್ಕಳನ್ನು ಕಟ್ಟಿಕೊಂಡು ಕಣ್ಣುಕಣ್ಣು ಬಿಡ್ತಿದ್ದ ಈತ್ನ ಕುಟುಂಬಕ್ಕೂ, ಶುಭಾ... ಅನ್ನಿ!!... ಏಳ್ರೀ... ಬೆದರ್ಬೇಡ್ರಿ... ನಾನಿಧೇನೆ... (ಮುಂದಾತನ-

ನ್ನು ಹಿಡಿದು ಎದ್ದು ನಿಂತು) ನಾನು ನಿಮ್ಮನ್ನು ಭದ್ರವಾಗಿ ಹಿಡಿದುಕೊಂಡಿರೋವರ್ಗೂ ನಿಮಗೇನೂ ಹಾನಿ ಇಲ್ಲ!... ನಿಮ್ಮ ಗಂಟು ನಿಮ್ಮ ತಲೇಲಿ... ಬರೀ ಕೈಯಿ ನಿಮ್ಮ ಕೈಯಿ... ಎತ್ತಿಕೊಳ್ರೀ ನನ್ನ ಗಂ-ಟ್ನೂ... ಭದ್ರವಾಗಿ ನಿಮ್ಮನ್ನ ಹಿಡಕೊಂಡು ಮನೇಸೇರ್ತೀನೆ... ನಡೀರಿ... ನೆಟ್ಟಗಿದೆ ಹಾದಿ... ಅತ್ತಿತ್ತ ನೋಡಬೇಡಿ... ನಾನೂ ನೋಡೋದಿಲ್ಲ—ಕಾಲುಹಾಕಿ ನೆಟ್ಟಗೆ ಬರ್ಲ್ಲಿ !

...ಬದುಕಿದ್ದಾಗ ನನ್ನ ಬಟ್ಟೇನೂ ರೂಪಾಯ್ನೂ ಸುಲ್ಕೊಂಡ ಈ... ...ಭೂತ... ಬರ್ಲ್ಲಿ ನೋಡಿಯೇ ಬಿಡ್ತೇನೆ... ನಡೀರಿ!!

[ಪಥಿಕರು ವಾಮತಃ ನಿಷ್ಕ್ರಮಿಸುವರು.]

[ವನಪಥದ ದಕ್ಷಿಣಾಂತ ವೃಕ್ಷದ ಕೊಂಡೆಯಲ್ಲಿ ಕುಳಿತು, ಇದೆಲ್ಲವನ್ನೂ ಆಕರ್ಷಿಸಿ ಕ್ರುದ್ಧನಾದ ನಾ-ಯಕನು, ಪಥಿಕರು ಅದೃಶ್ಯರಾಗುತ್ತಲೇ ಅವತರಿಸುವನು.]

ನಾಯಕ : (ಮುಷ್ಟಿಗಳನ್ನು ಬಿಗಿದು ಪಥಿಕರು ಪೋದ ದಿಕ್ಕಿಗೆ ತಿರುಗಿಸಿ ಚಲಿಸುತ್ತಾ) ಶುಭಾನೇ? ನಿ-ಮ್ಮ ಹಾಳೂರ್ಗೆ?!... ನನ್ನ ಸಾವು?!... ಸುಖಿಸಿ ...ಶುಭವಾಗಿ ಸುಖಿಸಿ... (ಹಲ್ಲುಗಳನ್ನು ಬಿಗಿದು ಕಣ್ಣು-ಗುಡ್ಡೆಗಳನ್ನು ಹೊರತಳ್ಳಿ) ನನ್ನ ಸೇಡು ತೀರಿಸಿಕೊಳ್ಳೋಕೆ... ನಾನ್ಯಾಕೆ?... ನನ್ನ ಪ್ರೇತವ್ಯಾಕೇ? (ಮು-ಷ್ಟಿಗಳನ್ನು ಸಡಲಿಸಿ ಬಾಹುಗಳನ್ನು ನೀಡಿ) ನಿಮ್ಮ ಮಧ್ಯದಲ್ಲೇ ಇಧಾನೆ, ನನ್ನ Agentಉ! death assuranceagentಊ... ನಮ್ಮ ಊರ್ನೇ ನುಂಗಿ ಜೀರ್ಣಿಸಿಕೊಂಡು ಕೊಬ್ಬೋ ಗುಂಡೋ-ದರ... ಗುಂಡ್ಗೆ ಕರಗಿದ ಊರಿನೋರು ಗಂಡನಿಲ್ಲದ ಹೆಂಗಸಿಗೆ ಕೊಟ್ಟ ದುಡ್ಡ್ನಲ್ಲಿ at least ಹದಿ-ನಾರು per cent ಸೇಕ್ಡಾ ಸುಲ್ಕೊಳ್ಳೋ... Dam Rogue of the villageಊ, ಅಲ್ದೆ plus ಪಟ್ಟಣಾ ಪಟ್ಟಣಾನ್ನೇ ಫಲಾಹಾರಮಾಡೋ ಅವನ ಪೂತ್ನೀನೂ... ಅಲ್ಲ, ಪತ್ನೀ... same thingoo ಇಧಾರೆ! (ಉನ್ಮಾದನಾಗಿ ನಸುನಗುತ್ತಾ) ನನ್ನ ಸೇಡು ತೀರಿಸೋಕೆ. ನಾನಿಲ್ಲಿ ಹಾರಾಡ್ತಿರೋದು ಬಂದ ದಾರಿಹೋಕರ್ನ ಬೆದರಿಸೋಕಲ್ಲಾ... ನಾನು ಸತ್ತ ಈ ಆರು ದಿನಾನೂ, ಬಂದೋರ್ನ ಬೆದ-ರಸಿ ಓಡ್ಸಿ, ಅವರು ಬಿಟ್ಟುಬಿಟ್ಟು ಹೋದ ಕುಕ್ಕೇನೋ ಗಂಟೋ ಬಂಡಿಗಳೋ ಇವುಗಳಲ್ಲಿನ ಹಣ್ಣು ಹಂಪಲ್ನ ಹಾರ್ಸಿ ಹುಟ್ಟಿಸಿದ 'ಚೋರ ಭೀತಿ' ಪಾಪಕ್ಕೆ ನನ್ನ ಹಸಿವು ಹೊಣೆಯೇ... ಹೊರ್ತು, 'ಸಾ-ಲಾಸಿಕ್ಕೋನಿಗೆ ಕಳ್ಳತನ ಯಾಕೇಂ'ತ ಬದುಕಿದ್ದಾಗ ಜೀವಿಸ್ತಿದ್ದ ನಾನಲ್ಲ ಚೋರ! (ನಡುಪಥದಲ್ಲಿ

ನಿಷಣ್ಣಿಸಿ) ನನಿಗೇನು ಕಟ್ಟಿಕೊಂಡು? ಇವ್ವ ಭೀತಿಗಳ್ಳ!... ಇವ್ರ ಸಾಲಗ್ಳ! ಸಾಲ!?... (ಭೃಕುಟಿ ರಚಿತನಾಗಿ) ಹೌದೇ!... ಏನಾಯ್ತು!?... ಪ್ರಕೃತೀಗೆ ಬೆಚ್ಚಿ ಬಿದ್ದು ಬಡುಕೊಂಡ ಆ ಪ್ರಾಣೀ ಮೊಳ-ಕಾಲ್ಮುರೂ?... ಭಟ್ಟನ ತಾರೀಫ್‌ಮಾಡಿ ತಂದದ್ದು ಜ್ಞಾಪ್ಕ... ...ಮಗೂ ಹುಟ್ಟಿದ ಹಬ್ಬಕ್ಕೆ; ಆಯುಷ್ಯ ಹೋಮಕ್ಕೆ ನಾನು ಸುತ್ಕೊಂಡಿದ್ದು ಜ್ಞಾಪ್ಕ, ಆಮೇಲೆ ಆರತಿ ಅಕ್ಷತೆಗೆ ಮಗೂಗೆ ಹೊದ್ದಿಸಿದ್ದು, ಮರು ವರ್ಷ ಕೂಸ್ಗೆ ಎರಡು ಮಗ್ಗಲು ಹಾಸಿಗೆ ಮಾಡ್ತು, next yearಉ ಇವುಗಳಲ್ಲೊಂದು ಮಗ್ಗಲು ಹಾಸ್ಗೇಲಿ ಇವಳಿಗೊಂದ್ರವ್ಕೆ... ನನಗೆ ನಾಲ್ಕು ಕರ್ಚೀಫು... ಜ್ಞಾಪ್ಕ ಬರುತ್ತೆ, ನಶ್ಯದ್ದು!... ಸತ್ತಾಗಿನಿಂದ ನಶ್ಯವಿಲ್ದೆ ಮೂಗೆಲ್ಲ ಒಂದೇ ಒಲೆ! ಎಲ್ಲಿ ಹೋಯ್ತೋ, ಇನ್ನೊಂದು ಮಗ್ಗಲು ಹಾಸ್ಗೆ? (ಕೂದಲ-ನ್ನು ಕೆದರಿ ಯೋಚಿಸಿ ತಲೆದೂಗಿ) ಒಳ್ಳೇ ಸರಕು! ಅವನು ಹೇಳಿದ್ದು ದಿಟ... ಸರಿಗೆ ಅಂಚು, "ಅಲ್ದೆ ಬಟ್ಟೆ ಹೋದ್ರೂ ಬಣ್ಣ ಹೋಗೋದಿಲ್ಲಾಂ"ತ; ಸ್ಕೂಲು ರೀಡರಿನಲ್ಲಿ ಬರೋ ವಿಲಾಯ್ತಿ ನಾಯಿ ಹಾಗೆ, "faithful until death" ಆಗಿತ್ತು ಕೊನೇ kerchiefoo!... ನಶ್ಯ ಸಿಂಬಳೆದ decoction proofಉ ರಂಗೂ... ಪಾಪ! can understand... ಮಾಲೀಕನ ಮನೋವ್ಯವಸ್ಥೇನ... can understand! ...ಊ! ಅದ್ರೆ ಯಾರು ಏನು ಮಾಡೋ ಹಾಗಿದೆ. ಮನುಷ್ಯರೇ mortaloo... ನರಸಿಂಹಯ್ಯನೇ ನಾಸ್ತಿ ಅಂತೆ... ಇನ್ನು ಮೊಳಕಾಲುಮುರುಗ್ಳು?!!!... ನಾನೇ ಹೋದ್ನಂತೆ!... ಇನ್ನು ಯಾರು ಹೋದರೆ ತಾನೇ ಏನು?... ನಾನು ಹೋದದ್ದು ನನಗಲ್ದೆ ಮಿಕ್ಕೋರಿಗ್ಯಾರಿಗೂ ನಷ್ಟವಿಲ್ಲಾಂತ ಕಾಣುತ್ತೆ!... ವಟ್ನಲ್ಲಿ!... ಮಾವ ಕೊಟ್ಟದ್ದೋ? ಪಾಪ!... ಎಂಟನೇ ದೀಪಾವಳೀ ಅಂತೆ! ಮಾವಾ ಅಂದ್ರೆ, **ಅವ್ನು** ಮಾವ!... ಅಳಿಯನ ಯೋಗ್ಯತೆ ಅರಿತೋನು ಅವ್ನು! ಖುದ್ದಾಗಿ ನಿಂತು ನೇಯಿಸಿ, ಮಗನ್ನ ನಿಲ್ಸಿ ಬಣ್ಣ ಹಾಕಿಸಿದ್ದ ಮೊಳಕಾಲುಮುರೂನ, ಮಗಳ ಗಂಡನಿಗೆ ಎಂಟನೇ ದೀಪಾವಳೀಲಿ ಸರಿಗೇ ಅಂಚು ಸಮೇತ ಹೊದ್ಸಿದ ಮಹನೀಯ ಮಾವನಲ್ಲದೇ... ನನ್ನ ಹಾಳುಮಾವ ಮಾವನಲ್ಲ! ತಾನು ಹೆತ್ತ ಕಿರಾತಕೀನ ಕುತ್ತಿಗೇಗೆ ಕಟ್ಟಿ, ಸಂಸಾರಾಂಬೋ ಈ ಕೆರೆ ನೀರಿನಲ್ಲಿ ಮುಳುಗ್ಸಿ... ಸಾ-ವಿರದ ಮೇಲೆ ಸಾವಿರಾನ safeನಲ್ಲಿ ಇಟ್ಟುಕೊಂಡು son-in-lawಗೆ ಸೊನ್ನೇ ಸುತ್ತಿ... ನೀರಿನಲ್ಲಿ ಸತ್ತ ಈ ಸ್ಥಿತಿಗೆ ತಂದಿಟ್ಟಿಧಾನಲ್ಲಾ!... ಅಳಿಯನ್ನ!.... ನಾನೇನ್ ನಗೋದೋ ಅಳೋದೊ... ಒಂದೂ ತೋಚೋದಿಲ್ಲಾ... ಈ ನನ್ನ ಸ್ಥಿತೀಲಿ!... ನನಗೆ ಬರೋ ಕೋಪದಲ್ಲಿ (ಮುಷ್ಟಿಗಳನ್ನು ಬಿಗಿದು ಹಲ್ಲನ್ನು ಕಚ್ಚಿಕೊಂಡು ತಕ್ಷಣವೇ ಮುಷ್ಟಿಗಳನ್ನು ಸಡಿಲಿಸಿ ದವಡೆಯನ್ನು ಜೋಲಾಡಿಸುತ್ತಾ)

"ತೀರ್ದೋನ ಹೊಟ್ಟೆ ಉರಿ, ತಿರುಗೂ ಹುಟ್ಟಿದಾಗ ಜಾರಿ!" ಅನ್ನ ಬೇಕಾದ ಹಾಗೆ ಹೆಚ್ಚುತಿದೆ ಜಮ-

ದಗ್ನಿ... ಜಠರದಲ್ಲಿ... ಏನು ಹಣೇಬರ್ಹಾನೋ ನಂದು?(ಹಣೆ ಬಡಿಯುತ್ತ) ಇಷ್ಟಕ್ಕೂ ಜಾತಕ ಬರೆದ ಜೋಯಿಸ "ಜನ್ಮಾಂತವೂ ಹೊಟ್ಟೇಪಾಡಿಗೆ ಹೆದರಿಕೆ ಇಲ್ಲಾಂ"ದ... ಅಲ್ಲದೆ, ಆತನೆ ಕೈನೂ ನೋಡಿ "ಧನರೇಖೆ ಧಂಡಿಯಾಗಿಧೆಂ"ದ... (ದಕ್ಷಿಣ ಹಸ್ತವನ್ನು ವಿಸ್ತರಿಸಿ ಈಕ್ಷಿಸಿ)ಇದೇನ್ಕಪ್ಪೂ?!... ಮರತೆ! ...ದಾರಿಹೋಕರು ಮೂತೀನ ನೋಡಿ ಗುರ್ತಿಸದ ಹಾಗೆ, ಹಾಸ್ಟೋದ ಬಂಡಿಗ್ಯ ಕೀಲೆಣ್ಣೆನೆಲ್ಲಾ, ಮುಖಕ್ಕೆ ಬಳಕೊಂಡದ್ದು... ಮರತೇಬಿಟ್ಟೆ!... ...ಹೌದೂ, ಹೀಗೆ ನಾನು ಹಾರಾಡ್ತಾ... ಹಸಿವಿನ ಗಲಾಟೇಲಿ ಕಂಗೆಡ್ತಾ, ಹಾದಿಹೋಕರಿಗೆ ಪ್ರೇತ-ಭೂತ ಭೀತೀನ ಪ್ರೇರೇಪಿಸಿ, ಬೆದರಿದೋರು ಬಿಟ್ಟುಹೋದ ಬಾಳೆಹಣ್ಣು, ತೆಂಗಿನಕಾಯಿಗಳಿಂದ ಹೊಟ್ಟೆ ತುಂಬಿಕೊಳ್ಳೋ ಸಂಭ್ರಮದಲ್ಲೀ, ನನ್ನ ಮೂವತ್ತು ಸಾವಿರವೂ, ಶ್ಯಾನುಭೋಗನ Commission ಎರಡು ಸಾವಿರವೂ ವಟ್ಟು ಮೂವತ್ತೆರಡುಸಾವಿರವೂ, ಜಾತಾ ಬಾಕೀ ನನ್ನ ಹತ್ತು ಸಾವಿರ, ಇವಳ ಕೈಸೇರಿಧೆಯೋ? ಇಲ್ಲವೋ?... ಇಲ್ಲಾ! ಸೇರಿ, ನನ್ನ ದುಡ್ಡೂ, ನನ್ನ ಮಕ್ಕಳನ್ನೂ ಅನಾಮತ್ತಾಗಿ ಎತ್ಕೊಂಡು ಹೋಗಿ, ಅಪ್ಪನ ಮನೇಲಿ ಅವುತುಕೊಂಡು, ಅವಳೇ ಇಲ್ಲವೋ ಇಲ್ಲೀ!? ಇದನ್ನು ತನಿಖೆ ಮಾಡಿ ಇತ್ಯರ್ಥಮಾಡ್ಕೊಳ್ಳೋದಲ್ವೆ ಕರ್ತವ್ಯ? ಇಲ್ಲಾ!!!! ಮಕ್ಕಳೂ ಅಂದ್ರೆ ಪ್ರಾಣಬಿಡ್ತಿದ್ದು ಅವಳು... ಅದೇ ಮಕ್ಕಳ ತಂದೆ ನಾನೂ ಅಂಬೋ ಜ್ಞಾಪಕದಲ್ಲಿ, ನನ್ನ ಹೆಣಾನ ನೋಡೋವರೀಗೂ ಇದೇ ಊರಿನಲ್ಲಿ ಇರೋಪಕ್ಷಕ್ಕೆ, ಮುಸುರೆಯೋಳಿಗೆ ಮಾಮೂಲಾಗಿ ಇಷ್ಟು ಹೊತ್ತಿಗೆ ನಮ್ಮ ಮನೇಲಿ, ಅನ್ನ ಹುಳೀನೋ, ಇಲ್ಲ ಹೆಪ್ಪು ಹಾಕಿ ಮಿಗೋ ಮಜ್ಜಿಗೇನೋ, ವ್ಯರ್ಥಪಡಿಸ್ದೇಯೂ, ನನ್ನಿಂದ ಬಂದ ಹತ್ತು ಸಾವಿರಾನ ಸರಿಯಾಗಿ ಖರ್ಚುಮಾಡೋ ವಿಧಾನಾನ ಅರಿಯದ ಹೆಂಗಸಿಗೆ ಬುದ್ಧಿ ಕಲಿಸಿ ಬೋಧಿಸೋ ಭಾರಾನ್ನೂ ಭಗವಂತ ನನ್ನ ಮೇಲೆ ಹೊರಿಸಿರೋವಾಗ, ಗಂಡುಸಾದ ನನ್ನ duty... **ಇಲ್ಲಲ್ಲ**...! ದುಡ್ಡು ಒಂದು ಕಡೆ! ಮಕ್ಕಳೊಂದು ಕಡೆ! ತಾಳಿಕಟ್ಟಿದ ಗಂಡನ ಹೆಣಾ ಕೆರೇ ನೀರಿನಲ್ಲೀಂ...ತ, ಕೈ ಕೈ ಹಿಸುಕ್ತಾ ಕೊರಗ್ತಿರೋ ನನ್ನ ಕೈಹಿಡಿದ ಆ ಪ್ರಾಣಿ ಇಧಾಳಲ್ಲಾ... **ಅಲ್ಲಿ** ನನ್ನ duty... ಇಲ್ಲಲ್ಲ!... ಬೇಗ ಹೋಗಿ ಸೇರಿಕೋಬೇಕು... ಮುಸುರೆಯೋಳು ಬರೋಕೆ ಮುಂಚೆ!

[ವಾಮತಃ ನಿಷ್ಕ್ರಮಣ]

ದೃಶ್ಯ ೪

ಕಾಲ : ರಂಗತೃತೀಯದ ನಿಶಿಯ ಅಂತ್ಯವಾದ.

ಸ್ಥಾನ : ನರಸಿಂಹಯ್ಯನ ಮನೆಯ ಮುಂಭಾಗ.

[ಬೀದಿಯ ಬಾಗಿಲು ಮುಚ್ಚಿರುವುದು. ಕಿಟಕಿಯ ಗಾಜಿನ ಮೂಲಕ ಮನೆಯ ಹಿಂಭಾಗದಲ್ಲೆಲ್ಲೋ ಉರಿಯುವ ಹಣತೆಯ ಮಿಣುಕು ಕಂಡುಬರುವುದು. ಮನೆಯ ವಾಮದಲ್ಲಿನ ಮೈದಾನದ ಮುಂಭಾಗದಲ್ಲಿ ರಸ್ತೆಯ ಅಂಚಿನಲ್ಲಿ ನೆಟ್ಟ ಮರಗಾಲೆರಡಕ್ಕೆ ಬಿಗಿದಿರುವ ಹಲಗೆಗೆ ಬಿಳಿಯ ಬಣ್ಣದ ಮೇಲೆ, “Site for the Narasimhayya Memorial Widows and Orphans home” ಎಂದು ಇಂಗ್ಲಿಷಿನಲ್ಲಿಯೂ, “ದಿವಂಗತ ನರಸಿಂಹಯ್ಯಶರ್ಮ ಸ್ಮಾರಕ ವಿತಂತು ಶಿಶು ಸಂರಕ್ಷಣ ಸದನವನ್ನು ಸ್ಥಾಪಿಸುವ ಜಮೀನು” ಎಂದು ಕನ್ನಡದಲ್ಲಿಯೂ ಬರೆದ ಕರಿಯ ಶಾಯಿಯ ಬರೆಹದ ಮೇಲೆ ಹಿಮಾಂಶುವು ಬೆಳಗುತ್ತಿರುವನು.]

[ನಾಯಕನು ಮಂದಗತಿಯಿಂದ, ಮರಗಳ ಮರೆಯಿಂದ ಮರೆಗೆ ಲಂಘಿಸುತ್ತಾ, ಶ್ರೀ ರಾಮನನ್ನು ಸೀತಾ ಉಟಜದಿಂದ ಆಕರ್ಷಿಸಿದ ಸ್ವರ್ಣ ಮೃಗದಂತೆ, ಬೆನ್ನು ಬಗ್ಗಿ, ತನುವು ತಗ್ಗಿ, ಪಾದ ಹಸ್ತಗಳೆರಡನ್ನೂ ಉಪಯೋಗಿಸುತ್ತಾ ಊರುದ್ದುಕ್ಕೂ ಮನೆಯ ಛಾಯೆಯಿಂದ ಮನೆಯ ಛಾಯೆಗೆ ಲಂಘಿಸಿ ನೋಟೀಸ್ ಬೋರ್ಡನ್ನು ಗಮನಿಸಿ ಸಮೀಪಿಸಿ ಓದುವನು.]

ನಾಯಕ : (ಓದಿ ಮುಗಿಸಿ) ಓಹೋ! ಹೊ! complete, arrangementಉಗ್ಗೂ!!!... ಭರತಖಂಡದಲ್ಲೆಲ್ಲಾ best business man ಯಾರೂಂದ್ರೆ... ನಮ್ಮೂರು ಶ್ಯಾನುಭೋಗ... ಬೃಹಸ್ಪತಿ! ಹಾಗಾದ್ರೆ Cashedಊ... Chequeಊ!! ಅಲ್ದೆ ಏನು ಮತ್ತೆ!... ಮಾಘಮಾಸ... ಮಗಳ ಮದ್ವೆ... ಅಶ್ವತ್ಥ ಬೇರೇ ಕೂತಿಧಾನೆ ಕಾಲೇಜ್ಗೆ!?... ಅದ್ರೂ... ಅನ್ಯಾಯ ಅಂದ್ರೆ!... ಕಮೀಷನ್ನೂ

ಹೋಗಲಿ... ಆ ಕಡುಪಾಪಿಗೆ... ಹ್ಯಾಗೂ, ನನ್ನ ಹಾಗೇ ಮಕ್ಕಳೂ ಮರೀಯೋನು!! ...ನನ್ನ ಮೂವತ್ತು ಸಾವಿರಾನೂ ಹೋಗಲಿ ಹಾಳಾಗಿ... ಹ್ಯಾಗಿದ್ರೂ... ಮನೆ ತಪ್ಪಿದೋರಿಗೂ, ಮಕ್ಕಳಿಗೂ ಹೋಗೋ-ದು... (ದಕ್ಷಿಣ ಬಾಹುವನ್ನು ಬೋರ್ಡಿನ ಕಡೆ ಚಾಚುತ್ತಾ)... ಅದಲ್ಲ!... ಗಂಡ್ಸು, ಹೆಂಡ್ತೀ ಮಕ್ಕಳ್ನ ಕಟ್ಟಿಕೊಂಡು, ಅವಳಿಂದ ಒದಗೋ ಸುಖಾನ ಮಟ್ಟಿಗೆ ಅನುಭವಿಸೋ ಆವೇಶದಲ್ಲಿ... "ತಾನು ಸತ್ತರೇ ಅವ್ಳ ಗತೀ ಏನೂ... ...ತಾನು ಹುಟ್ಟಿಸೋ ಮಕ್ಕಳ ಗತೀ ಏನು?" ಅಂಬೋ ಜವಾಬ್ದಾರೀ-ನೂ ಮರ್ತು ಮದ್ವೇನೂ ಮಾಡಿಕೊಂಡು, ತಾನು ಬಿಟ್ಟು ಹೋಗೋ ಹೆಂಡತೀಗೂ, ತಾನು ಅವಳಲ್ಲಿ ಅನುಭವಿಸಿದ ಭೋಗದ ಉಪಭೋಗ ಪದಾರ್ಥಗಳಾದ ಮಂದೆ ಮಂದೆ ಮಕ್ಕಳಿಗೂ—ನಾನಿಟ್ಟು ಹೋದ... ಅಲ್ಲ... ನಾನು ಹೋದ ಮೇಲೆ ಇಡಿಸ್ದ—ಹತ್ತು ಸಾವಿರದ ಹಾಗೆ ದುಡ್ಡನ್ನೇನೂ ಇಡದೆ... ಅವನು ಬಿಟ್ಟು ಹೋದ... ಈ ಬೋರ್ಡಿನ ಮೇಲೆ ಬರೆದಿರೋ ವಿತಂತು ಶಿಶುಗ್ಳ ಸಂರಕ್ಷಣೇ ಖರ್ಚ-ನ್ನು ಸಮಾಜದ ಮೇಲೆ—ಸಮಾಜಾಂದರೆ ಏನೂ—ದೇವ್ರು ಧನಾನೂ ಕೊಟ್ಟು, ಧರ್ಮ ಮಾಡೋಕೆ ಹೃದ್ಯಾನೂ ಕೊಟ್ಟು ಇರೋ, ನಮ್ಮ ಧರಣಯ್ನೋರೂ ಶೆಟ್ರು, ಸಾಹೇಬ್ರು, ಇಂಥಾ ಮೂರಾರು ಧನಿ-ಕರ ಹೆಗಲಮೇಲೆ ಹೇರಿಸಿ ಹೊರಿಸಿಬಿಟ್ಟು, ಸಾಯೋದು, ಅನ್ಯಾಯಾಂದ್ರೆ! ಗಂಡಸ್ತನವಲ್ಲಾಂದ್ರೆ ಅದು! (ಬೋರ್ಡನ್ನು ಬಿಟ್ಟು ನಡುರಸ್ತೆಗೆ ಬಂದು ನಾಲ್ಕು ದಿಕ್ಕಿಗೂ ಪಂಚಭೂತಗಳಲ್ಲದೆ, ಗಗನ-ವಾಸಿಗಳಾದ, ದೇವತೇ**ತ್ಯಾದಿ**ಗಳನ್ನು ಸಾಕ್ಷಿಯಾಗಿ ಕರೆಯುವಂತೆ, ಬಾಹುಗಳನ್ನು ಬಿರುಸಾಗಿ ಬೀ-ಸುತ್ತಾ) Orphans **ಅಂತೆ**!... ಅರ್ಧ ಬಿಡಿಗಾಸೂ ಇಲ್ದೆ ಅಪ್ಪ ಬಿಟ್ಹೋದಶನೀ ಮಕ್ಕಳಿಗೆ, ನನ್ನ ಮೂವ್ವತ್ತಾವ್ರ ಖರ್ಚುಮಾಡಿ, ಕಟ್ಟಡ ಕಟ್ಟಿ ಅವರ ಹೊಟ್ಟೇಗೆ ಕೂಳು ಹೊಯ್ಯೋದಂತೆ!... ನನ್ನ ಕಾ-ಸಿನಲ್ಲಿ!... ಯಾಕೋ ಕಾಣೆ!... ...(ರೌದ್ರದಿಂದ)... ಕಿಲ್ರ್ತೀಲ್ರ್ಲೀ!... ಕೇರಿಕೇರಿ ಕೋನೇಕೊನೇಲೂ ಕುಕ್ಕರಿಸಿ ಕೊಂಡು... ಕೈಗಳನ್ನ ಚಾಚ್ತಾ ಗಗನಕ್ಕೆ, ಕಿಲ್ರ್ಲೀ!... ರಾಚಪ್ಪನ್ನೋರು ಗ್ರಾಮಾಫೋನಿನಲ್ಲಿ... ಮಾರುತೀ! ಮಾರುತೀ!! ಅಂತ ಹಾಡಿದ ಹಾಡ್ನ... Complete ಆಗಿ ಕಿಲ್ರ್ಲೀ! ಈಗ ನನ್ನ ಮಕ್ಕಳ ಸತ್ತ ತಂದೆ ನಾನೇ ಬಂದಿರೋ ಹಾಗೆ, ಈ ತಬ್ಬಲಿ ಮಕ್ಕಳ ತಂದೆಗ್ಳಿಗೆ... ಹೃದಯವಿದ್ದರೆ, ಎಲ್ಲಿದ್ರೂ-ನೂ ಬಂದೇಬರ್ತಾರೆ!... ತಾವು ಹುಟ್ಟಿಸ್ದ ಮಕ್ಕಳ ಮುಂದಿನ ಗತೀನ ನೋಡಿಕೊಳ್ಳದ ತಂದೆಗಳು... ತಾವೇ ಯಾಕೆ ಹುಟ್ಟಿದರೋ...? ಅಂಬೋ... ಪ್ರಶ್ನೆ ಬಿಡಿಸೋಕೆ, ಹಸಿಯೋ ಹೊಟ್ಟೇನೂ ಮರೆತು, ಕೈಬಿಟ್ಟು ಹೊರಟೇಹೋದ ದುಡ್ಡ್ನ ಹಾರಿಸಿಕೊಂಡು ಹೋದೋರು ಮಾಡೋ ಅನ್ಯಾಯ ಖರ್ಚಿಗೆ ಕೋಪಿಸ್ಕೊಂಡು ಕಿಲ್ರ್ತಿಥೆನಲ್ಲಾ!... ಈ ಹುಚ್ಚು!?... ಏನು ಚಂದ್ರಿಕೆ ಪ್ರಭಾವವೋ?... (ಉನ್ಮಾದ-

ನಾಗಿ ನಗುತ್ತಾ) ಹ!... ಹ...!! ...ಹ!!! ...ಮೇನಕೇ ಮಲ್ಲಿಗೆ ಹಾಗೂ... ಘೃತಾಚೀ ಗುಲಾಭೀ ಹಾಗೂ ವೇಷಾ ಹಾಕ್ಕೊಂಡು... ಮಲೇರಿಯಾ, ಕಾಲರಾ ತುಂಬಿದ, ರಾಮಪುರದ ಕೆರೇ ನೀರಿನಲ್ಲಿ ಮುಳು-ಗಿ ಮೈ ತೊಳ್ಕೊಳ್ಳೋಕೆ, ಮಹೇಂದ್ರಪುರದಿಂದ, absurd ಸ್ತ್ರೀಸ್ ಬಂದಿಧಾರೇಂಬೋ ಹುಚ್ನ ನನ್ನ ಮೊಳಕಾಲ್ಮುರು ಸಾಲಗಾರನಿಗೆ ಹಿಡಿಸಿದ ಇದೇ ಚಂದ್ರ, ನನಗೆ ದಕ್ಕಿರೋ ಹತ್ತು ಸಾವಿರ ರೂಪಾ-ಯಿಗ್ಳೂ, ನನ್ನ ಕಷ್ಟ ಸುಖಗಳಿಗೆ ಸಭಾಗಿಯಾದ ನನ್ನ ಅರ್ಧಾಂಗಿಯೂ... ನನ್ನ ಹೆಸರ್ನೂ... ನನ್ನ ಗೋತ್ರಾನ್ನೂ ಮುಂದಕ್ಕೆ ತರೋ ನನ್ನ ಔರಸ ರತ್ನಗ್ಳೂ, ನಾನು ಸತ್ತ ದುಃಖದಲ್ಲಿ (ಮನೆಯ ಕಡೆ ಕೈ-ಚಾಚಿ) ನನ್ನ ರೂಬುರೂಬೇ ಮುಳುಗಿರೋದು ಮರ್ತು... ಮಿಕ್ಕ ಪಾಪಿಗಳ ಕಷ್ಟಕ್ಕೆ ಗೋಳಾಡೋ ಹುಚ್ಚನ್ನ ಹಿಡ್ಸೋಕೆ try ಮಾಡೋ ಹಾಗಿಧೆ. But moonಉ ಮರ್ತಿಧಾನೆ one thingoo; Important thingoo, that is; ಭಟ್ಟ ಭಟ್ಟನೆ! ನಾನು... ನರಸಿಂಹಯ್ಯ!! (ತಾತ್ಸಾರದಿಂದ ನಗುತ್ತಾ)... after all ಯಾರು ಈ ಚಂದ್ರ?!! ಈಗ ತೇಲಿ, ಇನ್ನೊಂದು ಕ್ಷಣದಲ್ಲಿ, ನನ್ಕಣ್ಮುಂದ್ಯೇ ಮುಳ್ಗೋ ಮಣ್ಣು!... earthನ ಹಾಗೆ, Ist form geographyಲಿ ಬರೋ ಬರೀ planetಉ! ಗ್ರಹ!! that is all!... ನನ್ನ duty ಏನು?... ನನ್ನ ಗೃಹ! ನನ್ನ ಗೃಹಿಣಿ!!... ಅಬ್ಬಾ!... ಬಂದ್ಸೇರೇ ಬಿಟ್ಟೆ!... ದೇವೀರೀಗ್ಮುಂಚೆ... ತಂಗ್ಳೂ, ಹುಳೀನೂ, ಖಾತ್ರಿ!! luck ಇದ್ರೆ ಮೊಸ್ರು... at least ಮಜ್ಜ್ಗೆ! (ಹೊಟ್ಟೆಯನ್ನು ಹಿಸಿಕಿಕೊಳ್ಳುತ್ತಾ) ಇಷ್ಟೆಲ್ಲಾ ಕೊಟ್ಟ ದೇವ್ರು ಹಾಳ್ಹಸಿವ್ನ ಕೊಡ್ದಿದ್ರೇನೋ!!.. ಹಿಂದ್ಹೋದದ್ದ ಬಡ್ಕೊಂಡೇನ್ಪ್ರಯೋಜನ್ನ?! ಸದ್ಯ ಈ ಜಠರಾಗ್ನೀನ ಅಡಗ್ಸೋದು first thingಉ... (ಸ್ವಗೃಹದ ಕಿಟಕಿಯ ಗಾಜಿನ ಮೂಲಕ ಮಿಣುಮಿಣುಕಿಸುವ ಬೆಳಕನ್ನು ಗಮನಿಸಿ) ಇದ್ದೇ-ನ್ದೀಪ!?... ಇಷ್ಟೊತ್ತ್ನಲ್ಲಿ?... (ನಿಟ್ಟುಸಿರುಬಿಟ್ಟು) ತಿರ್ಗಾ ಮೈಗೇನಾದ್ರೂ !? ...ಪಾಪ!! ನಾನೂ ಇಲ್ಲ... ನಾನ್ಕೇಳಿದ್ರೂ ಬರೆಯದ ದುಡ್ಡ್ಗೆ, ತಾನ್ತಾನೇ ಬರೆಯೋಳಲ್ಲ, ಇವ್ಳು!... ಅಪ್ಪನ್ಗೆ! ಮನೇ-ಲೊಂದ್ಕಾಸಿಲ್ದೇನೂ, ಮಕ್ಕಳ್ನ ಸುಧಾರಿಸಿಸ್ಕೊಂಡು, ನೆನ್ಮನ್ನೆ ಬಂದೇ ಇರೋ, ಹತ್ತಾಸ್ವಾನ್ನಾಬಚ್ಕೊಂ-ಡು, ಅಪ್ಪನ್ಮನೇ ಸೇರ್ದೆ, ಇಲ್ಲೇ ಇರೋ ಇವ್ಳು... ಈ ನನ್ನ wifeಉ **ವೀರಪತ್ನಿ**!... no less!! ನನ್ನ ಕೈಹಿಡಿದಾಗ್ನಿಂದ, “ಸೋಮಾರಿ” ನರಸಿಂಹಯ್ಯ್ನ ಕೈಹಿಡಿದಾಗ್ನಿಂದ ದುಡ್ಡೂ ದುಡ್ಡೂ... ಅವ-ನಿಗ್ಮಕ್ಕಳ್ನೂ ಹೆತ್ತು, ಅವನ್ಸತ್ತು ಹತ್ತಾಸ್ವರ್ರೂಪಾಯಿ ಕೈಗ್ಸಿಕ್ಕಿದ್ರೂನೂವೆ... ಹೆತ್ತ್ಮಕ್ಕಳ್ನೂ, ದಕ್ಕಿದ್ದುಡ್ನೂ, ದೋಚ್ಕೊಂಡು, ತೌರ್ಮನೇಗೋಡ್ದೆ, ನಾನ್ಸತ್ತು, ಊರೆಲ್ಲಾ ನನ್ನ್ಹೆಣಾನ ಹುಡುಕುತ್ತಾ, ನನ್ಪ್ರೇತಕ್ಕೆ ಬೆ-ದರ್ಕೊಂಡು ಓಡಾಡ್ತಿರೋ, ಈ ಆರುದಿನಾನೂ ಊರ್ನೋರು ಹಂಗ್ಸೋ ಹಂಗ್ನ ನುಂಗ್ತಾಲೂ, ನಾ-

ನ್ಬಿಟ್ಹೋದಲ್ಲೇ ಕೊರಗ್ತಾ ಇರೋ **ಇವ್ಳು, ವೀರಪತ್ನಿ!** ನಾನ್ಸತ್ಮೇಲೆ ನನ್ಯೋಗ್ತೇ ಇವ್ಳಿಗೆ ಹ್ಯಾಗ್ಗೊತ್ತಾಗಿ-ಧ್ಯೋ ಹಾಗ್ಯೇ ಅವ್ಳಯೋಗ್ತೇ ನನಿಗೆ ಈಗ್ಗೊತಾಯ್ತು!!... ಹೀಗೇ. ಗಂಡ್ಹೆಂಡ್ರಿಗೆ ಒಬ್ರೊಬ್ರ ಯೋಗ್ತೆ ಯಾವಾಗ ಗೊತ್ತಾಗುತ್ತ್ಯೋ, ಆ ಕ್ಷಣಾನೇ... ಜ್ಞಾನೋದಯ! ವಿಜ್ಞಾನ!! ಪುಸ್ತ್ಕಬರೆದ್ಹಾಗೆ... "ದಾಂ-ಪತ್ಯ ವಿಜ್ಞಾನೋದಯ"! permanment ಸಂಸಾರ ಸುಖ... ವಟ್ನಲ್ಲಿ... ಹೇಳಿದ್ಹಾಗೆ... ವೀ-ರಪತ್ನಿ, ನನ್ನ wifeಉ! ಅದ್ರೆ ನಾನೋ!? ಅವ್ಳು ತಿಳ್ಕೊಂಡಿರೋ ವೀರ husband ಅಲ್ಲ!... ಅವ್ಳು ನನ್ನ... "ವೀರ husband"ಊಂತ ತಿಳ್ಕೊಂಡಿದ್ರೂನೂವೆ ನನ್ಮನಸ್ಸ್ನಲ್ಗೊತ್ತು ನನ್ಗೆ: ನಾನು, ನನ್ನ ವೀರ wifeನ ವೀರ husband ಅಲ್ಲಾಂತ... But shall try... future-ನಲ್ಲಾದ್ರೂ, try ಮಾಡ್ತೇನೆ! ವೀರ husbandನ positionಗೇನೆ!!... ನಮ್ಮ ಕೂಸಿಗೇನಾಗಿ-ದೆಯೋ? ಅಲ್ಲ, ನಗದು ಹತ್ತುಸಾವ್ರಾನ ಪಕ್ಕದ್ಲ್ಲೇನೆ ಇಟ್ಟುಕೊಂಡು, ಏಕಾಂಗಿಯಾಗಿದ್ದಾಳಲ್ಲಾ! ತಪ್ಪು!! ಶುದ್ಧತಪ್ಪು!!!... must advise. (ಹೆಜ್ಜೆಮೇಲೆ ಹೆಜ್ಜೆಹಾಕುತ್ತಾ... ಶಬ್ದಮಾಡದೇ ಕಿಟ-ಕಿಯನ್ನುಸಮೀಪಿಸಿ ಇಣಿಕಿನೋಡಿ) ತೂಗ್ತಿದಾಳೆ ತೊಟ್ಟಿಲ್ನ!... ಹೂವ್ವು, ಹ್ಯಾಗ್ಬಂತು!?... ಕೂದ್ಲಿಗೆ? ...ಶುಕ್ರವಾರ ...ಹೌದು ...ಅವ್ಳ ಪದ್ಧತಿ!! ದೇವೀಪೂಜೆ!!! "ಮಹಾತಾಯಿ ಪ್ರಸಾದಾನ ತಿರಸ್ಕರ್ಸ್ಬಾ-ರ್ದೂಂ"ತ ಮುಡ್ಕೊಂಡಿಧಾಳೆ... can understand!... but! But!!...Butt !!! ನಾ-ನ್ಸತ್ಮೇಲೆ ಕೂದ್ಲ್ಯಾಕೆ ಇವ್ಳಿಗೆ! ನಾನಿಲ್ಲ್ದ ಇವಳ್ನೂ, ಮಕ್ಕಳ್ನೂ ಹತ್ತಾಸ್ವಾನ್ನೂ ರಾತೋರಾತ್ ಸಾಗ್ಸಿ, ಎಲ್ಲಾದ್ರೂ... ನಮ್ಮನ್ನ ಗುರ್ತಿಸ್ದ್ಕಡೆ, ಕೂದ್ಲು ತಿರ್ಗೂ ಬೆಳ್ಯೋವರ್ಗೂ ಇದ್ದು... ಮುಂದಿನ ಪ್ರೋ-ಗ್ರಾಂನ arrange ಮಾಡೋಣಾಂತ ನಾನಿದ್ರೇ!... ನಾನೂ ಸತ್ತು, ನೀರ್ನಲ್ಲಿ ನನ್ಹೆಣಾನೂ ಸಿಕ್ಕ್ದೆ, ಊರೆಲ್ಲಾ ವದ್ದಾಡ್ತಿರೋವಾಗ, ಕಳ್ಳಿಗೂ ಹೆದರ್ದೆ, ಹತ್ತುಸಾವ್ರರೂಪಾಯ್ನೂ ಪಕ್ಕದ್ಲಿಟ್ಕೊಂಡು... ಹೂವ್ಮುಡ್ಕೊಂಡು... ತೊಟ್ಲು ತೂಗ್ತಿಧಾಳಲ್ಲಾ! ದೀಪಾ ಇಟ್ಕೊಂಡು!!... ಇದು "ವೀರಪತ್ನಿ"... yes! ಹೌದು! ಅದ್ರೆ wiseತನ ಅಲ್ಲ!! must take charge... affairsನ! (ಬಾಗಿಲನ್ನೂ ಸಮೀ-ಪಿಸಿ ತಟ್ಟಲುದ್ಯುಕ್ತನಾಗಿ ಆದ್ರೆ... ಭಟ್ರ ಕಣ್ಣಿಗೆ ಹೂಬಳ್ಳೀನ್ನೇ ಹೆಂಗ್ಸಾಗೆ ತೋರ್ಸಿದ ಚಂದ್ರಿಕೆ, ನನ್ನೀ ಸ್ಥಿತೀನ, ಹ್ಯಾಗ್ತೋರಿಸುತ್ತ್ಯೋ ಕಾಣೆ? ಇವ್ಳ ಕಣ್ಣಿಗೆ... therefore ಹೆದ್ರಸ್ಬಾರ್ದೂ... must be careful... bestಉ ಕಿಟಕಿ

(ಕಿಟಕಿಯನ್ನುಸಮೀಪಿಸಿ)

ಆದ್ರೂನೂವೆ, ಮುಖಕ್ಕೆ ಕೀಲೆಣ್ಣೆ ಬಳ್ಕೊಂಡು, ರಾತ್ರೆ ನಾಲ್ಕ್ನೆ ಜಾವ್ದಲ್ಲಿ, ಮನೆಬಾಗ್ಲು ತಟ್ಟಿ ತೆಗ್ಸಿ "ನಾನ್ನಿನ್ನ್ಸತ್ಗಂಡ" ಅಂತಂದ್ರೆ ಎಂಥಾ double ವೀರಪತ್ನಿ ಆದ್ರೂನೂವೆ, shockನಲ್ಲಿ ಕಿರ್ಲಿಬಿಟ್ಟಾಳು!... must be gentle.... programmeಊ ಜರಗ್ಬೇಕು!!... ನನ್ನೀಸ್ಥಿತೀನ್ನೋಡಿ ಬೆದ್ರಿ "ಕಿಟಾರಂ"ತ ಕಿರ್ಲಿ ನೆರ್ಹೊರ್ಹೋರ್ನ್ನ ಎಬ್ಸಿ, ಅವ್ರು ಬಂದು, ನನ್ನು ಗ್ರ್ತಿಸ್ದ್ರೋ, ಸತ್ತಾನು ಸಾಯ್ದು ಹೊರ್ಬಿದ್ದು, ಈ ಊರಿನ ಆ ಶನಿ ಬೋರ್ಡ್ರು ಹೇಳೋ ಅನಾಥ ವಿತಂತು ತಬ್ಬಿಲಿಗಳ ಹೊಟ್ಟೇಪಾಡೂ ಹೋಗಿ, ನನ್ನಾಳು "ಸ್ಮಾರಕ"ವೂ ಬೂದಿಯಾಗಿ, ಶ್ಯಾನ್ಭೋಗ್ನಿಗೆ son-in-law ಮನೇಗ್ಬಂದು sonಊ ಕಾಲೇಜಿಗ್ಹೋಗೋ, ಭಾಗ್ಯಾನೂ ತಪ್ಪಿ, ನನಗಿಟ್ಟಿರೋ ಹತ್ತಾನ್ರವೂ ತುಂಡು!... therefore ಅವ್ಳು... ನನ್ನೋಡೋಕ್ಮುಂಚೆ, ನಾನ್ನಾನೇಂತ ನನ್ನಧ್ವನೀಲಿ ತಿಳಿಸಿ, ಅವ್ಳ ಧ್ವನಿ ತಗ್ಗೋದು best thingಉ. (ಗಾಜನ್ನು ಘರ್ಷಿಸುತ್ತಾ) ಲೇ! **ಲೇ!! ಲೇ!!! ಲೇ!!!!** ನಾನೇ!

ನಾಯಕಿ : [ತೊಟ್ಟಿಲನ್ನು ತೂಗುತ್ತಿದ್ದು ಕಿಟಕಿ ಗಾಜಿನ ಘರ್ಷಣವನ್ನು ಆಕರ್ಷಿಸಿ, ಆದ್ಯ ಬೆಚ್ಚಿಬಿದ್ದು, ಅನಂತರ "ಲೇ!" ಅದರ ನಂತರ **'ಲೇ!!' "ಲೇ!!!"** ಎಂದು ಕ್ರಮೇಣ ವರ್ಧಿಸುತ್ತಿರುವ ಧ್ವನಿಯನ್ನು ಗುರ್ತಿಸಿ ನಸುನಕ್ಕು ಎದ್ದು ಯೋಚಿಸುತ್ತಾ ಕ್ರಮೇಣ ಭೃಕುಟಿ ರಚನೆ ಮಾಡಿಕೊಂಡ ವದನದಲ್ಲಿ ದೀರ್ಘಾಲೋಚನೆಯನ್ನು ಸೂಚಿಸಿ, ನಯನಗಳಿಂದ ಮಕ್ಕಳನ್ನೂ ತಲೆ ದಿಂಬಿನಡೆ ಇರುವ ಕೈ ಪೆಟ್ಟಿಗೆಯನ್ನೂ ದುರುಗುಟ್ಟಿ ನೋಡಿ, ಕ್ಷಣ ಮಾತ್ರ ಕೈಕೈ ಹಿಸುಕಿ ಅವಸ್ಥೆ ಪಟ್ಟು, ಒಂದೆರಡು ನಿಮಿಷದಲ್ಲಿಯೇ, ಪ್ರಕೃತ ಸನ್ನಿವೇಶದ ಅಪಾಯವು ಪರಿಹಾರವಾಗುವ ವಿಧಾನವು ಹೊಳೆದು... ತನ್ನ ಮುಂದಿನ ಕ್ರಮವನ್ನೂ ನಿರ್ಧರಿಸಿ, ಹಾಸ್ಯ ಮುದ್ರೆಯನ್ನೂ ದಮಿಸಿ, ಅಧರೋಷ್ಠಗಳನ್ನು ಬಿಗಿಹಿಡಿದು, ಬೆಳಗುವ ಹಣತೆಯೊಂದಿಗೆ ಕಿಟಕಿಗೆ ಬಂದು ಹಣತೆಯನ್ನೂ ಇಳಿಸಿ, ಗಾಜಿನ ಕದವನ್ನೂ ತೆಗೆದು]

ಇದ್ಯಾರಿಷ್ಟೊತ್ತ್ನಲ್ಲಿ?... ತಿರ್ಗೂ ಪೋಲೀಸ್ನೋರೆ?... ಹೀಗ್ಗಂಟೆ ಗಂಟೇಗೂನೂ ಪಹ್ರೆ ಕೊಡೋ ಉಪ್ಕಾರ ವಪ್ಪ್ದೆ... ಆದ್ರೆ ನಿದ್ದೆ ಮಾಡೋದ್ಯಾಗೆ? ನಾವು?...

[ಎಂದು ಹೊರಗೆ ನೋಡುವಳು]

ನಾಯಕ : ಪೋಲೀಸಲ್ಲ ಕಣೇ, ನಾನೇ!... ಏನು? ಗಂಟೆ ಗಂಟೆಗೂ ಬೀಟೇ? ...ಹಾಗಾದ್ರೆ, ಬಂ-

ಢ್ಗಿಂಢ್ಬಿಟ್ಟಾರು!... ದೇವ್ರೇಗತಿ! ಬಾಗಲ್ತೆಗ್ಯೇ ಬೇಗ! ಪೆದ್ದೂ! ಮೆಲ್ಲಗ್ಮಾತಾಡೇ!

ನಾಯಕಿ : ಬಾಕ್ಲೂಂದ್ರೇನು!?... ತೆಗ್ಯೋದೂಂದ್ರೇನು!?... ನೀವ್‌ನೀವಲ್ಲ! ಅದ್ಹ್ಯಾಗ್ನೀವು ನೀ-ವು?!... ಈವಾರ್‍ವೆಲ್ಲ ನೀವ್ ನೀವಲ್ಲ... ನೀವ್ ನಿಮ್ದೆವ್ವ!... (ನಡುಕವನ್ನು, ಕಿಟಕಿಯಿಂದ ಒಳಬರುವ ಶೀತವಾತದ ಸಹಾಯದಿಂದ ಸುಲಭವಾಗಿ ನಟಿಸುತ್ತಾ) ಬೆ... ಬೆ... ಬೆದ್ರಿ... ಕೆಯಾಗತ್ತೆ!... ಧ್ವನಿ-ಯೇನೋ ನಿಮ್ಮ್ದು... ಆದ್ರೂ ಮುಖ ನಿಮ್ಮ್ದಲ್ಲ... ಕಪ್ಪು... ಕಪ್ಪಮ್ ಕಪ್ಪು... ಕೆಂಪ್ಗಿದ್ರಿ—ಕೆಂಪೇ-ನೂ... ಕಪ್ಪಲ್ಲದ್ಬಣ್ಣ!... ಹೋಗೋಕ್ಮುಂಚೆ... (ಕೈಗಳನ್ನು ಉನ್ಮತ್ತಳಂತೆ ಬೀಸುತ್ತಾ ಧ್ವನಿಯನ್ನೂ ತಗ್ಗಿಸಿ) ಹಯ್ಯೋ! ಹಯ್ಯೋ!!... ದೆವ್ವ! ...ದೆವ್ವಾ!!... ಪೋಲೀಸು!... ದೆವ್ವ! ...ಪೋಲೀಸು!... ದೆವ್ವ!!

ನಾಯಕ : ದೇವ್ವಾನೇ ನಾನು?!... ದೆವ್ವ!... ದೆವ್ವ!!... ಪೋಲೀಸು! ಪೋಲೀಸು!... ಹಯ್ಯೋ!... ದೇವ್ರೇಗತಿ!... ಅಲ್ಕ್ಕಣೇ!... ದೇಹಾಲಸ್ಯಾನೂ ಮರ್ತು, ನನ್ಹೊಟ್ಟೇಲ್ಬೇಯೋಜ್ವಾಲೇನ ಆರ್ಸೋ ಕವ್ಳಾ ದೇವೇರಿ ಬಾಯಿಗ್ಬೀಳೋಕ್ಮುಂಚೆ ಓಡ್ಬಂದ್ದಾನು ನಾನೇ... ಯಥಾ ಪ್ರಕಾರ ನಾನೇ... ದೆವ್ವವ-ಲ್ಲಾ ಕಣೇ... ದೆವ್ವಕ್ಕ್ದೇಹ ಎಲ್ಲೀದೇ? ಹೊಟ್ಟೆ ಎಲ್ಲೀದೇ? ಇನ್ನೂ, ಹಸ್ದು ತಂಗ್ಳಾಸೆ ಎಲ್ಲೀದೇ?... ಒಳ್ಳೆ ಹುಚ್ಚೀ ನಿನ್ಗೆ... ದೆವ್ವವಲ್ಲ! ನೀರ್ನಲ್ಲಸ್ತ್ರೂನೂವೆ—ಪುನಹ ನಿನ್ನೆದ್ರಿಗ್ನಿಂತು, ಹಸಿವ್ನಿಂದ ಸಾಯ್ತಿರೋ husbandಊ ಕಣೇ!... ಗಂಡ್ನೇ—ನಿನ್ಗೆ ತಾಳಿ ಕಟ್ಟಿದ ...ಶ್ಯಾನ್ಭೋಗ ಹೇಳಿದ್ಹಾಗೆ... “ಪರಿಶೋ-ಚನೀಯ ಪ್ರಾಣೀ” ಕಣೇ ...ಪತಿ! ಬೇಗ್ಬಾಕ್ಲು ತೆಗ್ದು, ನೀವೆಲ್ಲ ಭಕ್ಷಿಸಿ ಬಿಟ್ಟಿರೋ ಬಾಕೀನ ಬಡ್ಸು... ನಾನ್ದೆವ್ವವಲ್ಲ... ಬೆದರ್ದೆ ಬಾಕಲ್ತೆಗಿ!... ಹೌದೂ! ಆ ಹತ್ತ್ಸಾವರ್ರೂಪಾಯಿ ಹುಷಾರ್ತಾನೆ?...

ನಾಯಕಿ : ನೀವು ದೆವ್ವವಲ್ದಿದ್ರೆ, ಹತ್ತ್ಸಾವರ್ರೂಪಾಯಿ ಎಲ್ಲೀದು?

ನಾಯಕ : ಎಲ್ಲೀದೇ? ಇದ್ದ್ಯಾಕ್ಹೀಗೆ? ಊರಿನೋರು... ಅಲ್ಲ, ಧರಣಯ್ಯನೋರು ಕೊಟ್ಟ ಚೆ-ಕ್‌ನ cash ಮಾಡಿದ ನಲವತ್ತೆರಡ್ಸಾವ್ರ ರೂಪಾಯ್ನಲ್ಲಿ ಅನ್ಯಾಯವಾಗಿ ಹೋದದ್ದ್ಹಾಚ್ತಾಬಾಕೀ, ಶ್ಯಾ-ನ್ಭೋಗ ನಿನ್ಕೈಲಿ ಕೊಟ್ಟೇ ಇರ್ಬೇಕಾದ ಹತ್ತ್ಸಾವ್ರ ಎಲ್ಲಿ?... ಇಲ್ಲ್ವೋ!? (ರೋಷವನ್ನು ನಟಿಸಿ) ಈಗೀಗ್ಹೋಗಿ ಎಬ್ಬ್ಸಿ ಕೇಳೇಬಿಡ್ತೇನೆ ಧರಣಯ್ಯನೋರ್ನ... “ನನ್ನೆರ್ಡು ಕಣ್ಣು ಹೋದ್ರೂ ಶ್ಯಾನ್ಭೋಗ-ನ್ದೊಂದಾದ್ರೂ ಹೋಗ್ಲಿ!” ಅಂಬೋ principle ನಂದು!... ಭೇಗ್ಬೊಗ್ಳು... ಕೈ ಮುಟ್ತೀ ಮು-

ಟ್ಟಿಲ್ವೇ? ಕಾಸು?...

ನಾಯಕಿ : ಒಳ್ಳೇ ಹುಚ್ಚೂಂದ್ರೆ ನಿಮ್ಗೆ... ಅಲ್ಲ ನಿಮ್ಮೆದ್ವಕ್ಕೆ! ಈಗ್ನೋಡಿ... ಒಂದೂ ನೀವ್ನೀವು!... ಇಲ್ಲಾ! ನೀವ್‌ನಿಮ್ಮೆದ್ವ! ಭೇಗ್ಕೇಳಿ... ಬೀಟ್ ಪೋಲೀಸ್ನೋರು ಬರೋ ಹೊತ್ತಾಯ್ತು... (ನಾಯಕನು ನಡುಗುತ್ತಾ ಸುತ್ತಮುತ್ತಲೂ ನೋಡುವನು) ಈಗ್ನೋಡಿ, ನೀವ್ ನೀವೇ ಆದ್ರೂ, ನೀವ್ನೋದ್ರೀಂತ ತಿಳ್ಕೊಂಡು ಮೋಸ್ಹೋದ ಊರ್ನೋರು ನನ್ನೂ, ನಮ್ಮಕ್ಕಳ್ನೂ, ನೀವ್ಬಿಟ್ಹೋದ್ರೀಂತ ಕನಿಕರ್ಸಿ ಕೊಟ್ಟಹತ್ತಾವ್ರ, ನಮ್ಮಕೈ ಮುಟ್ಲೋ ಹಾಗಿಲ್ಲ... ಇಲ್ಲಾ! ನೀವು ನಿಮ್ಮೆದ್ವವಾದ್ರೂ ಶ್ಯಾನ್ಭೋಗ್ರು ನನ್ಕೈಲಿ ಸದ್ಯ ಇಟ್ಹೋಗಿರೋ ನಮ್ಮತ್ಸಾವ್ರದ ಮೊದಲು ಕಂತು... ಅಲ್ಪಸ್ವಲ್ಪ ಕಂತು. ಜಾತಾ ಬಾಕೀ ರೂಪಾಯಿಗಳ್ನ, ನನ್ನೂಮ್ಲಕ್ಕ ಇನ್ಮೂರ್ತಿಂಗ್ಳಲ್ಲಿ, ನಮ್ಮಿಬ್ಬಿಗೂ ಲ... ಭಿ... ಸ... ಬ... ಹು... ದಾ... ದ ಸಂಭವಾನ ನೀವ್ನೀವೇ ...“ನಾನ್ದೆವ್ವವಲ್ಲಾಂ”ತ ನಡ್ರಾತ್ರೇಲಿ ಊರೂರ್ಗೇ ಸಾರಿ ಕೆಡಿಸ್ಕೊಂಡ್ರೇ, ನಮ್ಮೈಗ್ಬರೋ ಸಾವ್ರಾರೂಪಾಯಿ ಜಾರಿಹೋಗೋ ಜವಾಬ್ದಾರಿ ನಂದೇ?... ಇಲ್ಲಾ... ನಿಮ್ಮೆದ್?.... ಅಲ್ಲಾ... ನಿಮ್ಮೀದೆವ್ವದ್ದೇ?... ಭೇಗ್ನಿಷ್ಕರ್ಷಿಸಿ... ಬಂದ್ಬಿಟ್ಟಾರು... ಬೀಟ್ನೋರು... ಆದ್ರೆ (ಉಕ್ಕುವ ವಿಸ್ಮಯವನ್ನೂ ಅಡಗಿಸುತ್ತಾ) ನೀವ್ದೀಗ್ಹುಚ್ಚುಚ್ಚಾಗಿ ದೆವ್ವಗ್ಳಿಗಿಲ್ಲದ ಹಸ್ವಿಗೆ ಸೋತು... “ನಾನ್ದೆವ್ವವಲ್ಲಾಂ”ತ ಈ ಊರ್ನಲ್ಲೇ ಕೂತು, ಕುಣಿದಾಡ್ತಾ ಇದ್ರೋ! ಹತ್ತೆಲ್ಲೀದೂ!... ಸಾವ್ರವೆಲ್ಲೀದೂ!?... ರೂಪಾಯೆಲ್ಲೀದು!?... ಒಳ್ಳೇ ಹುಚ್ಚೂಂದ್ರೆ ನಿಮ್ಗೆ!... ಅಲ್ಲ... ನಿಮ್ಮೆದ್ವಕ್ಕೆ!.... ನೀವು **“ಇದೋ?”... ಅಲ್ಲ “ಅದೋ”?** ಅಂಬೋದ್ನ ಇತ್ಯರ್ಥ ಮಾಡ್ಬಿಡಿ ಈಗ್ಲೇ... ದೇವೇರಿ ಯಾಕ್ಬರ್ಲಿಲ್ಲಾ ಇನ್ನೂವೇ?... ಚಂದ್ರ ಮುಳುಗ್ತಾ...

[ಕಿಟಕಿಯನ್ನು ಮುಚ್ಚಲುಪಕ್ರಮಿಸುವಳು]

ನಾಯಕ : ಸ್ವಲ್ಪಿರೇ! ಹಾಗಾದ್ರೇನು... instalment plan ಓ ಶಾನ್ಭೋಗಂದು? ಎಷ್ಟಿದ್ನಾಂದೆ?... ಮೂರ್ತಿಂಗ್ಳೆ?... ಮೂರು long ತಿಂಗ್ಳಗ್ಳೆ?! “scoundrellು”... ಹಾಗಾದ್ರೆ ಬದ್ಕಿರೋದ್ಹ್ಯಾಗೆ? ಅಷ್ಟ್ರವರ್ಗೂ... ನಾನು... ಅಲ್ಲಾ,... ನೀನ್ಹೇಳಿದ್ಹಾಗೆ... ನನ್ದೆವ್ವ... ಹ್ಯಾಗ್ಬೇಕಾದ್ರೂ ಇಟ್ಕೋ!... ಇಲ್ನೋಡೂ! ನಾನ್ಹಾಕ್ಕೊಂಡ್ಬಂದ programmeಏ ಬೇರೆ! ಕರೀೀೀ l..o..n..g ಕೂದ್ಲು... curly ಕೂದಲ್ನೆಲ್ಲಾ ಕಳ್ಕೊಂಡು, ಕೆಂಪು ಬಟ್ಟೇನೂ ಸುತ್ಕೊಂಡು, ತನ್ನಂಡ ಬಿಟ್ಹೋದ ಕೂಸುಗಳ್ನ ಲಾಲಿಸ್ತಾ, ಅವುಗಳ ಮುಂದಿನ್ಗತೀಗೆ ಆ ಹತ್ಸಾವರ್ರೂಪಾಯಿ...

ನಾಯಕಿ : (ಅಡ್ಡಮಾತಾಗಿ) ಸಾಕ್ಷಿಲ್ಲಿಣ್ದ್ರೇ!... ಇದೇನಧ್ವಾನ... ಊರೂರೇ ಹುಡುಕ್ತಿರೋ ನಿ-ಮ್ಮ್ಹೆಣ ಮನೆಗ್ಬಂದ್ಸೇರಿ, ಮುಂದಿನ ಕ್ರಮಾ ಆದ್ಮೇಲೆ, ನೀವ್ವೇಳೋ ವೇಷ ನನಗ್ಬಂದಾಗ ನೋಡ್ಕೊ-ಳ್ಳೋಣ... ನೀವ್ಹಾಕ್ಕೊಂಡ್ಬಂದಿರೋ ಪ್ರೋ—ಅದೆಂಥಾದ್ದೊ—ಅಂದ್ರಲ್ಲಾ ಅದ್ನ... ಸಧ್ಯ ನಿಲ್ಸಿ... ನನ್ನ ಪ್ರೋ...

ನಾಯಕ : (ಆತುರದಿಂದ) Programmeಊ ಕಣೇ!! ಭೇಗ್ಹೇಳೇ...

ನಾಯಕಿ : ಅದೆಂಥಾದ್ದೋ—ಅದ್ನ ಕೇಳ್ತೀರೋ?... ಇಲ್ಲಾ! ಕೂಸಿಗ್ಮೈ ಬೆಚ್ಚಗಿದೆ... ಚಳಿಘಾಳಿ... ತಣುವು ತಗುಲ್ತೋ!?... ಒಳ್ಳೇ ಹುಚ್ಚು ನಾನು!... ದೆವ್ವೊಂದಿಗೆ ನನಗೇನ್ಮಾತು!...

[ಕಿಟಕಿಯನ್ನು ಮುಚ್ಚಲು ಉಪಕ್ರಮಿಸುವಳು]

ನಾಯಕ : ದಮ್ಮಯ್ಯ!... ಸ್ವಲ್ಪಿರೇ, ಕೂಸಿಗೆ ಜ್ವರಾ ಬಂದ್ರೆ ನಿಲ್ಸೋಕೆ ಡಾಕ್ಟರಿಧಾನೇ!... ಸರ್ಕಾರಿ ಸಂಬ್ಳ ತಿನ್ನೋ ಡಾಕ್ಟರಿಧಾನೇ! ಈಗ ನನ್ ಗತಿ ಹೇಳೇ! ನೀರ್ನಲ್ ಬಿದ್ ಸತ್ತು, ಆರ್ದಿನ್‌ದಿಂ-ದ್ಲೂ ಇರೋದೊಂದ್ ಚಿಕ್ಕೆರೇಲಿ ಬಲೆ ಬೀಸ್ತಾ ಹುಡುಕ್ತಿರೋ ಊರ್ನೋರ್ಗೆ, ಸಿಕ್ಕದ ನನ್‌ಹೆಣ, ಮೈಮೇಲೂ ಹೊಟ್ಟೇಲೂ ಒಂದ್ತೊಟ್ಟು ನೀರೂ ಇಲ್‌ದೆ ಒಣಗಿ ಬೇಯ್ತಾ ಈ ಕಿಟಕಿ ಕೆಳಗೆ ನಾಳೆ ಸಿಕ್‌ಬೇಕೂಂಬೋದೇನೇ... ನಿನ್ ಹಾಳ್ programmeಉ!? ಹೇಳೇ! ಅದ್ನೂ ಕೇಳ್‌ಬಿಟ್ಟು ಮುದುರ್ಕೊತೀನೇ ಮರಣಾವಸ್ಥೇಲಿ! (ಕಿಟಕಿಯ ಅಂಚನ್ನು ಹಿಡಿದುಕೊಂಡು ಗೋಡೆಯ ಮೇಲೆ ಒರಗಿ) ನಿಸ್ತ್ರಾಣಿ ಕಣೇ! ಹೇಳ್ಬಿಡೇ ನಿನ್ plan... ಹೇಳಾದ್ಮೇಲೆ, ಕೂಸ್ತನದಲ್ಲಿ ನಿನ್ನ ಕೈಲಿ ಘಾಳಿಜ್ವರಾ-ನೂ ತಪ್ಪಿಸ್ಕೊಂಡು, ದೊಡ್ಡೋರಾಗಿ, ನಿನಗೆ ನಾನೀಗ ಸತ್ತದ್ರಿಂದ ಮುಂದ್ಬರೊ ೧೦,೦೦೦ ರೂಪಾ-ಯ್ನೂ ಬಡ್ಡೀಸಮೇತ ಧ್ವಂಸಮಾಡಿ, ತಿಂಗ್ಳು ತಿಂಗ್ಳೂ ಹೊತ್ತು ಹೆತ್ತೂ, ಎದೆಹಾಲ್ಕೊಟ್ಟು, ಗಂಡನ್ನೂ ಘಾಳಿಪಾಲ್ಮಾಡಿ, ಪೋಷಿಸಿದ ನಿನ್‌ಮಕ್ಕು, “ಪುತ್ರವೈ ಶತ್ರುನಾಮಾಸಿ” ಅಂಬೋದಕ್ ಸರ್ಯಾಗಿ ನಿನ್ ಮುಪ್ಪಿನಲ್ಲಿ... ನಾನೀಗ ಮನೆ, ಬಾಕ್ಲು, ಕುಟುಂಬ, ಕಬ್ಳ ಇಲ್ದೆ ಕಂಗೆಡೋ ಹಾಗೆ ನಿನ್ನೂ ಕಂಗೆಡಿಸ್ಯೇ ಕಂಗೆಡ್ಸೋ, ನನಗೇಂತ್ಹೆತ್ತ ನಿನ್ ಹಾಳ್ಕೂಸುಗಳ್ನ... ಗಮನ್ಸೋಕೆ, ನಿನ್ನ plan ಏನಾದ್ರೂ ಇದ್ರೆ... ನೀ-ನು ಬೊಗ್ಳಿದ ಬೀಟ್ ಪೋಲೀಸ್ನೋರು ಬರೋಕ್ಮುಂಚೆ ಬೊಗ್ಳು...!! ಇಲ್ಲಾ! ನಾನಾಯ್ತು! ಪೋಲೀ-

ಸಾಯ್ತು!... ನನ್ನ dead statement ಆಯ್ತು... ಆರ್ದಿನಕ್ ಮುಂಚೆ ಕೆರೆಕಟ್ಟೆ ಮೇಲೆ ಶಾನ್ಭೋಗ ಊರಿನ್ಮುಖ್ಯಸ್ಥರ್ಗೆ ಬೆದರಿಸ್ದ ದೊಡ್ಡೊಡ್ಡ ಆಫೀಸರುಗ್ಳ ಮಕ್ಕಾಮೂ ತೀರಿ, ಬೆದರ್ಕೇನೂ ಹೋ-ಗಿ... ಊರು!... ಯಥಾಪ್ರಕಾರ ಊರಾಯ್ತೂ ನಾನೋ ನನ್‌ಮನೆ ಕಿಟಕಿ ಮುಂದೆ, ನನ್‌ಹೆಂಡ್ತಿ ಹಾಕ್‌ದಿದ್ದ ಅನ್ನಾ ನೀರೂ ಇಲ್‌ದೆ ಸತ್ತ ಶವವಾಯ್ತು... ಶಾನ್ಭೋಗ ನಿನ್‌ಕೈಲಿ ನೀನ್ಹೇಳಿದ ಮೊದಲು ಕಂತು ಜಾತಾಬಾಕಿ ರೂಪಾಯಿಗ್ಳೂ ತುಂಡು ಆಯ್ತು... ನಾನೂ ಸತ್ತು, ನಿನ್‌ಕೈಲಿರೋ ಕಂತಿನ್ರೂ-ಪಾಯಿ, ನನ್ ಸುಡೋ ಖರ್ಚಿಗಾಯ್ತು! ಧರ್ಮದ ಖರ್ಚು ಇನ್ ನೀನೂ ನಿನ್ ಕೂಸುಗ್ಳುನೂವೆ, ಕಾಸಿಲ್ದೆ ಕಂಗೆಟ್ಟು... ಆರು ಸೋಮಾರಿ sonsನೂ ಅಲ್ದೆ, ಅವ್ನ ಹೆಂಡ್ತಿ ಮಕ್ಕಳ support ಮಾಡ್ತಾ insolvent ಆಗ್ತಿರೋ ನಿಮ್ಮಪ್ಪನ್ಮನೇ ಬಾಕ್ಲಲ್ಲಿ ಭಿಕ್ಷಬೇಡೋ ಭಿಕಾರಿಗ್ಳೂ ಆಯ್ತು!!... ಮಾತಾಡೇ! ಹೇಳೇ! ಹಸಿವೇ!!!

[ಕ್ಷುಧಾಗ್ನಿಗೆ ತುತ್ತಾಗಿ ಗೋಡೆಯ ಹಿಡಿತ ಜಾರಿ ಕುಸಿದುಬೀಳುವನು]

ನಾಯಕಿ : (ಕಿಟಕಿಯ ಅಂಚನ್ನು ಅತಿಕ್ರಮಿಸಿ ಬಗ್ಗಿ) ಹಯ್ಯೋ! ಏಳೀಂದ್ರೇ!... ನೀವು ಊರಿಗೆ-ಲ್ಲಾ ದೆವ್ವವಾಗಿದ್ರೂನೂವೆ... ನನಗ್ನೀವ್ನೀವೆ... (ನಾಯಕನು ಮುಖವನ್ನು ಎತ್ತುವನು) ಈಗ್ನೋಡಿ, ಐವತ್ತು ಹೋಗ್ತಾ ಮಿಕ್ಕಿದ್ದು ಕೈಮುಟ್ಟೋಕೆ... ಶ್ಯಾನ್ಭೋಗ್ರು ಹೇಳಿಧಾರೆ... ಮೂರ್ತಿಂಗ್ಳಾಗುತ್ತೆ. ಅದು-ವರ್ಗೂ ನೀವು ನಿಮ್‌ದೆವ್ವವಾಗಿರೋದೇ ಮೇಲು... ಇದಕ್ಕೆ ನನ್ನ ಪ್ರೋ... ಅದೇನ್ಹೇಳಿದ್ರಿ?...

ನಾಯಕ : ಪ್ರೋಗ್ರಾಮು! ಪ್ಲಾನು! ಕ್ರಮ!... ನಾನ್ ಬದ್ಕೋದಾರಿ! ಲೊಟ್ಟು! ಲೊಸ್ಕು! ಬೊಗ್ಳೇ! ಈ ಚಿತ್ರಹಿಂಸೆ ಯಾಕೇ?

ನಾಯಕಿ : ಕೋಪಿಸ್ಕೋಬೇಡಿ... ರಸ್ತೇಳಿ ಕೇಳ್ಬರತ್ತೆ... ಕಿವೀಗೆ ಬೀಟ್ನೋರೋ ಏನೋ!... ಬೇಗ್ಹೇಳ್ತೇ-ನೆ ಕೇಳಿ!... ನನ್ "ಪ್ಲಾನ್" ಅಂದ್ರಲ್ಲಾ ಅದನ್ನ ಈಗ್ವಳಕ್ ಬಂದ್ರೋ ನಿಮ್‌ಮಸೀ ಮುಖಾನ ನಿಮ್ಮ-ಕ್ಳು ನೋಡಿ ಕಿರ್ಲಿ... ಇನ್ನು ದೇವೇರಿನೂ ಬಂದು... ಗಲಾಟೆ!!... ಹೊರ್ಗೇ ಹೀಗ್ಬಿದ್ಕೊಂಡಿದ್ರೋ... ಇನ್ನೀವು ದೆವ್ವವಲ್ದೆ... ನೀವಾಗ್ಯೇ ಇನ್ನೂ ಇರೋದು ಹೊರ್ಬೀಳೋ ಗಲಾಟೆ!... ಇದ್ರ ಜೊತೇಲಿ... ಇನ್ನು ಮೂರೇ ಮೂರು ತಿಂಗ್ಳಲ್ಲಿ ಕೈಗ್ಬರೋ ದುಡ್ಡು ಜಾರೊ ಅಪಾಯ ಬೇರೆ!... ವಪ್ತೀರಾ?

ನಾಯಕ : (ಪೃಥ್ವೀಪುತ್ರಿಯ ಮೇಲಿನ ಪಕ್ಷಪಾತದಿಂದ, ಪಕ್ಷಪಾತವೇ ಅಲ್ಲದೆ ಪ್ರಾಣಪ್ರವಾಸವನ್ನೂ ಅನುಭವಿಸುತ್ತಿದ್ದ ಗೃಧ್ರೋತ್ತಮನು ಇನಕುಲೋತ್ತಮನಿಗೆ ದಶರಥ ಸ್ನುಷೆಯ ಗತಿಯನ್ನು ವಿವರಿಸಿದ ಗದ್ಗದ ಧ್ವನಿಯಿಂದ) ಅಲ್ಕಣೇ... ನನ್ನೀಸ್ಥಿತೀಲಿ... ವೊಪ್ಪೋದೇನು!.... ಹೇಳೇ!... ಹಸಿವೇ!!

ನಾಯಕಿ : ಈಗ್ಕೇಳಿ... ಈ ಅಪಾಯಗ್ಳೊಂದೂ... ನಮ್ಮಿಬ್ರಿಗೂ ಸೋಕ್ದೇನೂ... ಮುಂದಕ್ಕೆ ನಾವೆಲ್ಲ ಕೊರ್ತೆಇಲ್ದೆ ಬೇರೆ ಎಲ್ಲಾದ್ರೂ ಬದಿಕ್ಕೊಳ್ಳೋಕೇನೂ... ಇರೋದು... ವಂದೇ ಪ್ಲಾನು! ನನ್‌ಬುದ್ಧೀಗೆ ತೋಚೋದು... ಆದ್ರೆ ನಾನು... ಹೆಂಗ್ಸು...

ನಾಯಕ : ಹೆಂಗ್ಸೋ!?... ನೀನು!! ಪ್ರಾಣಬಿಡ್ತಿರೋ ಪತೀನ ಹೀಗೆ ಚಿತ್ರಹಿಂಸೆ?!... ಕ್ಷಮ್ಸು... ನನ್ನ... ಕ್ಷುತ್ತಾಪ!... ಕ್ಷಮ್ಸು!! ನನ್ನ ಕನವರ್ಕೆ... ಮುಂದಿನ್ನನ್ನ ಗತೀನ... ಬುಗ್ರೀಹಾಗೆ... "ಭಿರ್ರ್"ನ್ ತಿರಗ್ತಿರೋ ನನ್ನ ಮಂಡೇಗೆ... ನೀನ್ಹೇಳಿದ ಬೀಟ್ನೋರು ಬರೋಷ್ಟ್ರಲ್ಲಿ ಮಂದಟ್ಮಾಡಿ ಕಳ್ಸು!... ಏನದ್ನಿನ್ನ Planಉ?

ನಾಯಕಿ : ಪ್ಲಾನೇನು!... ಬಂದುಡ್ಡೂ... ಇನ್ಮುಂದೆ ಮೂರ್ತಿಂಗ್ಳ ಮೇಲೆ ಬರೋ ದುಡ್ಡೂ... ಎಲ್ಲಾ ನಿಮ್ಮದೇ... ಬಂದಿರೋ ಐವತ್ರೂಪಾಯ್ನಲ್ಲಿ ಅರ್ಧಾನ ನೀವೇ ಈಗ್ತಗೊಂಡು, ಇನ್ಮೂರ್ತಿಂಗ್ಳಲ್ಲಿ ಬರೋ ನಿಮ್ಮ ದುಡ್ಡು... ನಿಮ್ಮ ಕೈಸೇರೋವರ್ಗೆ... ನನಗೆ... ನೀವು ನೀವಾದ್ರೂ... ಮೂರೇ ತಿಂಗ್ಳು... ಈ ಊರ್ನೋರಿಗೆ ಮಾತ್ರ ನೀವ್ ನಿಮ್ಮ ದೆವ್ವಾಗಿರಲೇ ಬೇಕು !

ನಾಯಕ : ಅರ್ಥವಾಯ್ತೆ ಲೇ! ಅರ್ಥವಾಯ್ತು. **'ಹಚಾ'**ನ್ನು... Husbandಗೆ... ಗಡೀಪಾರೂನ್ನು ಗಂಡನ್ಗೆ!! ಗುಂಡ್ಗೆ ಬೇಯ್ತಾ ಬಿದ್ದಿರೋ ನಿನ್ನ ಗಂಡನ್ಗೆ ಗಡೀಪಾರೂನ್ನು!!... ಎಲ್ಲೀಗೆ? ಹ್ಯಾಗೆ?... ಅದ್ನೂ arrange ಮಾಡೀದೀಯಾ?... ಮಾಡೇ ಇರ್ತಿಯಾ ನೀನು!...

ನಾಯಕಿ : ಹೂಂ!... ಮಾಡಿದೇನೆ... ಕೋಪಿಸ್ಕೋಬೇಡಿ!... ಕಾಲ ಹಾಗಿಧೆ!!... ಇಲ್ಲೇ ಇರಿ ಮರ್ತೆ ಹೇಳೋಕೆ. ಮೂರೇ ಸರ್ತಿ ಬರೋದು... ಬೀಟ್ ಪೋಲೀಸು. ಮೂರು ಸರ್ತಿನೂ ಬಂದಾಯ್ತು... ಇನ್ಮುಂದ್ ಬರೋಹಾಗಿಲ್ಲ... ಬೆದರ್ಬೇಡಿ ಇದೊ ಬಂದೆ... ಒಂದೇ ನಿಮ್ಷ! ಅಷ್ಟೆ... [ನಿಟ್ಟುಸಿರು

ಬಿಡುತ್ತಾ ನಿಷ್ಕ್ರಮಿಸುವಳು.]

[ನಿಷಣ್ಣಿಸಿದ್ದ ಪ್ರಹಸನ ನಾಯಕನು, ಅಗ್ನಿಸಾಕ್ಷಿಯಾಗಿ ವರಿಸಿದ ಸಹಧರ್ಮಿಣಿಯು ಸ್ವಗೃಹ ಪ್ರವೇಶವನ್ನು ತಡೆದ ಕೋಪಾಗ್ನಿಯಿಂದ ರೇಕಿತನಾಗಿ ತನುತಾಪವನ್ನು ಮರೆತು, ಕುಳಿತಲ್ಲಿಯೇ ಶಯಿಸಿ, ಕೈಕಾಲುಗಳನ್ನೂ, ಪಿಂಡಹಸ್ತನಾದ ಸ್ವಾಮಿಯನ್ನು ಕಂಡು ಸಂತೋಷಿಸುವ ಶ್ವಾನವು ಅಂಗಾಂಗಗಳನ್ನೂ ಪಸರಿಸಿ ಪಿಂಡದಾತನಿಗೆ ಪ್ರದರ್ಶಿಸಿ ಒದರುವಂತೆ ಒದರುತ್ತಾ ಉನ್ಮತ್ತನಾಗಿ ನಗುವನು.]

ನಾಯಕಿ : ಹ್ಹ!... ಹ್ಹ!!... ಹ್ಹಾ!!! ಭಟ್ಟ, ಕೆರೆ ಕಟ್ಟೇಲಿ ಹೊಗಳ್ತಿದ್ದ ಪ್ರಕೃತೀ ಪ್ರಭಾವ, ಆಗ ಮಂದಟ್ಟಾಗದಿದ್ರೂ ನೂವೆ... **ಈಗರ್ಥವಾಯ್ತು**!... ಹಃ!...ಹಃ!!... ಹಃ!!! ಇದೇನೋ?! ಪ್ರಪಂಚಾಂಬೋದು? ಹ!... ಹ!!... ಹ!!! (ಹಾಸ್ಯವು ಥಟ್ಟನೆ ಬೀಭತ್ಸಕ್ಕೆ ನೆಲೆಗೊಡಲು ಈತನೆದ್ದು ನಿಂತು, ಮುಷ್ಟಿಗಳನ್ನೂ ಬಿಗಿದು ರೌದ್ರಮುದ್ರೆಯನ್ನು ತಾಳಿ) ಗಂಡ್ಸಿಗೆ... ತನ್‌ಹೆಂಡ್ತಿ... ತಾನ್‌ತಾನೇ ತನ್ ಜವಾಬ್ದಾರೀ ಮೇಲೆ ಬಾಡ್ಗೇಗ್ತಗೊಂಡ ಮನೇಬಾಕಲ್ನ, ತನ್ ಹೆಂಡ್ತೀನೇ ಬಿಗಿದ್ಕೊಂಡು ಕಿಟಕಿಯಿಂದ, ಕೈ ಹಿಡ್ಯೋಕೆ ಕಲ್ಯಾಣದಲ್ಲಿ ಕೈಕೊಟ್ಟ ಕಾಂತನ್ನ ಆತ್ಮಹತ್ಯಕ್ಕೆ ಅಟ್ಟಿ ಅವ್ಳಿಗೆ ತಾನು ಕಟ್ಟಿದ ತಾಳೀ ಪ್ರಭಾವದಿಂದ ಅವ್ಳ ಮುತ್ತೈದೇತನ ದಕ್ಕಿ, ಹೊಟ್ಟೇಗೆ ಹಿಟ್ಟಿಲ್ದೆ ಹಸ್ದ ಭರ್ತನೇ ಭಿಕ್ಷ ಬೇಡ್ತಿರೋವಾಗ... “ನಾನ್ಬರೋವರ್ಗೂ ಬಿದ್ದಿರೂಂ!”ತ ಹುಕುಂ ಕೊಟ್ಟ್ಬೋಗೋ ನನ್ನೀ wifeನ ನಾನು (ಪಕ್ಕದ ಜಮೀನಿನ ಮುಂದಿನ ನೋಟೀಸ್ ಬೋರ್ಡನ್ನು ದಕ್ಷಿಣ ಹಸ್ತದಿಂದ ಸೂಚಿಸುತ್ತಾ) ಈ ನನ್ನ ವಿತಂತು orphans ಸ್ಮಾರಕ, ಅಲ್ಲ, ನನ್ನ ಸ್ಮಾರಕ widow ತಬ್ಬಲಿಗ್ಳ ಬೋರ್ಡಿನ ಮುಂದೆ ನಿಂತು... “ವೀರಪತ್ನೀ” ಅಂದ್ನೆಲ್ಲಾ!... ಈ ನನ್ನ wifeನ!?... godಏ ಗತಿ!! ಇವ್ಳು ನಿಜ್ವಾಗಿ “ವೀರಪತ್ನೀ”ನೇ?... (ಭ್ರುಕುಟಿ ವಿರಚಿತನಾಗಿ, ಕ್ಷಣಮಾತ್ರ ಯೋಚಿಸಿ, ರಚನೆಯನ್ನು ಸಡಿಲಿಸಿ) yes!… and… no!! “ವೀರ”!... yes!!... “ಪತ್ನೀ”?... No!!!… Not at all!!... ನನ್ನ!? ಗಂಡನ್ನ!!... ಮನೆಯಿಂದ್ಹೊರಗ್ಹಾಕಿ, ಬಾಕಲ್ಬಿಗ್ದು... ಕಿಟಿಕಿಯಿಂದ ಮಾತಾಡ್ಸೋ ಈ womanಉ! ಪತ್ನಿ?... Not at all...ಈಗ ನಾನೇನೂ, am Iಏ or am I notಏ?... that is the two questions! I amಊಂತ ನನಗ್ಗೊತ್ತು! ನನ್ನ ಹೊಟ್ಟೆ ಹಸಿವು ಜ್ಞಾಪಿಸುತ್ತೆ that I am! wifeಊ ಒಪ್ಪಿದ್ದಾಳೆ! But!! ಅವ್ಳು ಹೇಳಿದ್ದಾಗೆ ಹತ್ ಸಾವಿರ್‍ರೂಪಾಯಿ ಕೈಗೆ ಬರ್ಬೇಕಾದ್ರೋ; ಇನ್‌ಮೂ-

ತಿಂಗ್ಳು—ಊರ್ಗೆಲ್ಲಾ... of course... I... am not!!... I must not be!... ಮೂರು monthsಗೆ ನನಗ್ಮಟ್ಟೆ I am... ಮಿಕ್ಕೋರ್ಗೆ... I am not!... That is the two answers... But... ನನ್ನ ಜುಟ್ಟೆಲ್ಲಾ ಇವ್ಳ ಕೈಲೇ ಇರೋದ್ರಿಂದ, must trust her... stomach's sake! (ನಾಯಕಿಯು ಮಿಷ್ಕ ಮಿಸಿದಾಗ ಕತ್ತಲೆಯಾದ ಕಿಟಕಿಯು ಮತ್ತೆ ಬೆಳಗುತ್ತಲೂ) ಅಕ್ಕೋ!... is coming!... ಬಂದ್ಲು!... ಕೇಳೇಬಿಡೋಣ! ಅವ್ಳ last programmeನ ನಿಜ್ವಾಗಿ, ಸಾಯೋದಕ್ಮುಂಚೆ!...

[ನಾಯಕಿಯು ಹಣತೆಯನ್ನು ಕಿಟಕಿಯ ವಳ ಅಂಚಿನಲ್ಲಿಟ್ಟು, ಬೀದಿ ಬಾಕಿಲನ್ನು ತೆಗೆದು, ತಾನು ದಬ್ಬಿದ ಗಂಟು ಮೆಟ್ಟಲಮೇಲೆ ಉರುಳುತ್ತಿರಲು ಬಾಕಿಲನ್ನು ಪುನಃ ಬಿಗಿದು ಕಿಟಕಿಯಿಂದ ಗಂಡನನ್ನು ಗಮನಿಸುತ್ತಿರುವಳು.]

ನಾಯಕ : ಇದೇನಿದು?... ನನ್ನಾವ್ಗೆ ಇನ್ನೊಂದು ದೆವ್ವಾನೇ?

ನಾಯಕಿ : ದೆವ್ವ ಅಲ್ಲಾಂದ್ರೆ... ಬರೀ ಬಟ್ಟೆ ಗಂಟು... ನಿಮ್ಬಟ್ಟೇ ಗಂಟು... ನಿಮ್ಮುಂದಿನ ಪ್ರೊ—... ಅಲ್ಲ planಉ.

ನಾಯಕ : ಅಲ್ಕಾಣೇ... ನನ್ನ immediate planಉ ಹೊಟ್ಟೇ ಹಸಿವ್ನ ತೀರ್ಸೋ ಬಗೆ!... ಬಟ್ಟೇ ಗಂಟ್ನಲ್ಲೆಲ್ಲೇ ಇಧೇ?

ನಾಯಕಿ : ಹಯ್ಯೋ... ಇದೇಂದ್ರೆ... tiffin setಉ! ಒಳಗೆ... ಭರ್ತಿಯಾಗಿ! ಅನ್ನ, ಹುಳಿ, ತುಪ್ಪ ಅನ್‌ದಲ್ಲೇ ಕಲ್ಸಿದೆ, ಪಲ್ಯ, ಸಂಡಿಗೆ, ಉಪ್ಪಿನ್ಕಾಯಿ, ಮೊಸರು.

ನಾಯಕ : (ಯವ್ವರಾಜ್ಯ ಪಟ್ಟವನ್ನು ತ್ಯಜಿಸಿ ಅರಣ್ಯಾನೀಕಗಳನ್ನು ಅತಿಕ್ರಮಿಸಿ ಆಹಾರ ನಿದ್ರಾಭಯಾದಿ ಚಿತ್ತವೃತ್ತಿಗಳನ್ನು ನಿರೋಧಿಸಿ ತಪಿಸಿ, ಪ್ರತ್ಯಕ್ಷನಾದ ಪರಮಾತ್ಮನನ್ನು ಪ್ರಜ್ಞಾನದಿಂದ ಈಕ್ಷಿಸಿ ಪರಮಾನಂದವನ್ನು ಹೊಂದಿ, ಸ್ವಾಗತವನ್ನು ಸಾರಲು ಬಾಹುಯುಗ್ಮವನ್ನು ಚಾಚಿದ ಧೃವನಂತೆ,

ತಾನೂ ಕಿಟಕಿಯ ಕದಗಳಿಗೆ ಕೈಗಳನ್ನು ಚಾಚುತ್ತಾ) “ಅನ್ನದಾತಾರ್ ಸುಖೀಭವ”!... ‘ಭವತೀಭಿ-ಕ್ಷಾಂ’ ಕೊಟ್ಟೆಲ್ಲ ಅಷ್ಟೆ ಸಾಕು! [ಗಂಟಿನ ಕಡೆ ಹೊರಡುವನು...]

ನಾಯಕಿ : ದಮ್ಮಯ್ಯಾಂದ್ರೆ, ಇಲ್ಲೇ ಗಂಟ್‌ಬಿಚ್ಕೊಂಡು ಬೆಳ್ದಿಂಗ್ಳೂಟಕ್ಕೆ ಕೊತ್ಬಿಟ್ರೆ ನೀವು... ಇನ್ ಮುಂದಿನ ಗತೀ?... ಇಷ್ಟೊತ್ತೂ ತಡ್ದ ಹಸಿವ್ನ ಇನ್‌ಸ್ವಲ್‌ಪೊತ್ತು ತಡ್ಕೊಂಡು ನಾನ್ಹೇಳೋದ್ನ ಕೇಳಿ, ಗಂಟ್ತಗೊಂಡು ಹೋಗಿ, ಊರಿಂದಾಚೆ, ಊಟ ಮಾಡ್ತಾ, ಮುಂದಿನ್ಕ್ರಮಾನ... ನಾನ್ಹೇಳೋ ಮುಂ-ದಿನ್ಕ್ರಮಾನ ಆಲೋಚಿಸೋದು ಉತ್ತಮ್ವೋ... ಇಲ್ಲಾ... ಇಲ್ಲೆ ಊರ್ನೋರ್ರ್ಮುಂದೆ, ‘ನೀವೂಂ’ತ ತಿ-ಳಿದ ಊರ್ನೋರು “ನಿಮ್‌ದೆವ್ವ” ಊಟ ಮಾಡೋದ್ ನೋಡಿ!... ನೀವೇ ಹೇಳಿ...

ನಾಯಕ : (sulkily) ಅರ್ಥ್ವಾಯ್ತೇ!... ವನಭೋಜ್ನ ನನ್ಗೆ!... best spotಊ ಗೊತ್ತು ನನ್ಗೆ... ನನ್ನ ಪ್ರಾಣಪ್ರವಾಸವಾಗಿ ಪ್ರೇತ ಪ್ರವೇಶವಾದ ಪ್ರದೇಶ... ಭಟ್ಟ ಬೆದರ್ಬಿದ್ದ ಕೆರೆಕಟ್ಟೆ! waterಊ ಇದೆ ಪಕ್‌ದಲ್ಲೆ... ಆಮೇಲೆ?

ನಾಯಕಿ : ಆಮೇಲೇನೂಂದ್ರೆ... ಮೂರೇ ತಿಂಗ್ಳು.

ನಾಯಕ : ಎಲ್ಲಿ? ಕೆರೆ ಕಟ್ಟೇಲೇ?

ನಾಯಕಿ : ಅಲ್ಲಾ, ನಮ್ಮ ಚಿಕ್ಕಪ್ಪನ ಮನೇಲಿ... ನಾನೂಂದ್ರೆ ಪ್ರಾಣ ನಮ್ ಚಿಕ್ಕಪ್ಪನ್ಗೆ.

ನಾಯಕ : ಓಹೋ! ನಿನ್ನನನ್ಕುತ್ಗೇಗ್ಕಟ್ಟಿ ಈ ಸ್ಥಿತೀಗ್ತಂದಿಟ್ಟೆರೋ ಕಡ್ಪಾಪಿ ನನ್ ಮಾವನ್ಗೆ ತಮ್ಮ ಒಬ್ನಿ-ಧಾನ್ಯೋ?... ಅವ್ನಿಗೆ ನೀನ್ ಪ್ರಾಣ್ವೋ?... ಇನ್ನವನ್ಮನೇಲಿ ನಾನಿರೋದೋ?... ಎಲ್ಲಿ?

ನಾಯಕಿ : ಕೋಪಿಸ್ಕೋಬೇಡಿ, ನಮ್ ಚಿಕ್ಕಪ್ಪ ಔರಂಗಾಬಾದ್ ಹತ್ರ... ಗಿರಣಿ ಮಾಲೀಕ... ನಮ್ಮ-ಪ್ಪೀಗೂ ಆತನ್ಗೂ ಆಗ್ದು.

ನಾಯಕ : Good! very good! ನಿಮ್ಮಪ್ಪಾಂದ್ರೆ ಆಗ್ದೆ! good ! must be very good man!!

ನಾಯಕಿ : ಹಯ್ಯೋ! ಹೇಳೋದ್ಕೇಳೀಂದ್ರೆ... ಅವ್ರು... ನೀವ್ಹೇಳಿದ್ಹಾಗೆ very good ಆಗಿರೋ-ಹೊತ್ಗೆ ಹೇಳ್ತಿರೋದು.

ನಾಯಕ : ಹೇಳು! ಹೇಳು!!... ಹಾಳ್ moonಉ ಮುಳುಗ್ತಿಧೆ... ಭೇಗ್ಹೇಳು.

ನಾಯಕಿ : ಹೇಳ್ತೇನೆ... ನೀವು... ಕೇ... ಳ್ತೀ... ರೋ ... ಏನೋ...

ನಾಯಕ : (ರಭಸದಿಂದ)ಕೇಳ್ದೇ ಏನೇ... ನಿನ್ನೆದರ್ಸೊ ಸ್ಥಿತೀನೇನೆ ನಂದು? ಇದೇ ಹೋದ್ಮುಕ್ರ-ವಾರ ನಿನ್ನ ಈ ನನ್ಮನೆಯಿಂದ ಹೊರಗ್ಹಾಕೋ ಹಕ್ಕಿದ್ದ ನಾನು ಇದೇ ಮನೆ ಮುಂದೆ ಹೊರಬಿದ್ದಿರೋ-ವಾಗ ನಿನ್ಹೇಳಿದ್ದೇ ವೇದ ಕಣೇ—ನಾಲ್ಕ್ವೇದ, ಹದ್ನೆಂಟ್ ಪುರಾಣ, ತೊಂಭತ್ತಾರ್ ತತ್ವ... ಒಟ್ನಲ್ಲಿ ನಾನು ಸತ್ತ ಸತ್ಯವಾನ... ನನ್ ಪ್ರಾಣ ಯಮನ್ ಕೈಲಲ್ಲ... But...ಆ ಬಟ್ಟೇ ಗಂಟ್ನಲ್ಲಿರೋ tiffin carrierನಲ್ಲಿದೆ... ನಿಮ್ ಚಿಕ್ಕಪ್ಪ!? ಅವನ್ಮನೆ?... ಹ್ಯಾಗೋಗೋದು... ಸೇರೋದು... ನಾನು...? ಅಲ್ದೆ ನೀನು, ಮಕ್ಳು + ೧೦,೦೦೦ ರೂಪಾಯಿ? ಇದೆಲ್ಲ... ಬೇಗ್ಹೇಳು ಒಂದೇ ಮಾತ್ನಲ್ಲಿ... at least ಒಂದೇ speechನಲ್ಲಿ.

ನಾಯಕಿ : ಹೇಳೇಬಿಡ್ತೀನೆ! ಬೆಳಕ್ಹರೀತಾ ಬಂತು! ನಮ್ ಚಿಕ್ಕಪ್ನ ಅಡ್ರಸ್ ಗಂಟ್ನಲ್ಲಿರೋ ನಿಮ್ ಕೋಟ್ ಪಾಕೆಟ್ನಲ್ಲಿದೆ... ಇರೋದು ಔರಂಗಾಬಾದು... ಕಾಗ್ದಾನೂ ಬರ್ದಿದೇನೆ... ಅವ್ರಿಗಿಳ್ಳೋಹಾಗೆ! ಮಿಲ್‌ನಲ್ಲಿ ನಿಮಗ್ಕೆಲ್ಸ ಕೊಟ್ಟು, ನೀವು ಮೂರ್ತಿಂಗ್ಳು ಸರ್‍ಯಾಗಿ—ಕೋಪಿಸ್ಕೋಬೇಡಿ—ಸರ್‍ಯಾಗಿ—ಕೆ-ಲ್ಸ ಮಾಡ್ತಿದೀರಾಂತ ವಾರ್ವ್ಹಾರಕ್ಕೂ ನನ್ಗೆ ಅವ್ರಿಂದ ತಲ್ಪೋ ಹನ್ನೆರ್ಡು ಕಾಗ್ದಗಳನ್ನೂ ನೋಡಿದಾಕ್ಷಣ್ವೇ, ನಾನು ನನ್ಮಕ್ಳು... ದುಡ್ ಸಮೇತ ಬಂದ್ಸೇರ್ತೇವೆ... ಇನ್ನೇನ್ಹೇಳಿ...?

ನಾಯಕ : ಅಲ್‌ಕಣೇ... ನಾನೆಲ್ಲೀ... ಔರಂಗಬಾದೆಲ್ಲೀ?... ಹ್ಯಾಗೋಗೋದೇ?

ನಾಯಕಿ : ಹ್ಯಾಗೇನೂ?... ರೈಲು... ಸ್ಟೇಷನ್ ರಾಮ್ಪುರವಲ್ಲ. ಬೇಗ್ಹೋದ್ರೆ ಕಟ್ಟೇಲೂಟ ಮಾಡ್ಬಿಟ್ಟು ಪಕ್ಕದ ಸ್ಟೇಷನ್... ಗಂಗಾಪುರ... ಐದುವರ್ಗಂಟೆ... ಬೆಂಗ್ಳೂರು ರೈಲು.

ನಾಯಕ : (ಅಡ್ಡಮಾತಾಗಿ) ಛಾರ್ಜು?...

ನಾಯಕಿ : ಅಲ್ಲಿಂದ ಔರಂಗಾಬಾದ್ಗೆ, ಅಲ್ದೆ... ಚಿಕ್ಕಪ್ಪ ಕೊಡೋ ಸಂಬ್ಳಾನೂ ಗಮನಿಸ್ದೆ—ಐದೈದು ರೂಪಾಯಿ ನೋಟುಗ್ಳು ಕೂಡ ಅಡ್ರಸ್ ಜೊತೇಗೆ, ನಿಮ್ಕೋಟ್ ಜೇಬಲ್ಲಿದೆ... ಆ ಗಂಟ್ನಲ್ಲಿ... ನಂಬ್ಕೆ ಇಲ್ಲಿದ್ರೆ... ಚಂದ್ರನೂ ಮುಳುಗ್ದ... ಆದ್ರೆ ಬೆಳಕ್ಹರೀತಿದೆ... ಊರೋರ್ಕಣ್ಣಿದುರ್ಗೆ ಗಂಟ್ನೊ ಬಿಚ್ಚಿ, ನಾನ್ಹೇಳೋದು ಸುಳ್ಳೋ ನಿಜ್ವೋ ಪರೀಕ್ಷಿಸಿ!! ಆದ್ರೊಂದ್ಮಾತು ಖಂಡಿತಾ... ನಮ್ ಚಿಕ್ಕಪ್ಪ, ನೀವು ಅವ್ನ ಮಿಲ್‌ನಲ್ಲಿ ಕೆಲ್ಸ ಮಾಡ್ದೆ... ಕೋಪಿಸ್ಕೋಬೇಡಿ... ಯಾಕೇಂದ್ರೆ... ಆ ಪಕ್ಷ್ದಲ್ಲಿ ನಾನೂ ನನ್ಮಕ್ಳು ನಮ್ಮಪ್ಪೂ ನೀವಿಲ್ಲದ ಕನಿಕರದಿಂದ... ನಮ್ಮಪ್ಪನ್ಮನೆ!! ಸಧ್ಯ ಕೋಪಿಸ್ಕೊಳ್ದೆ ಔರಂಗಾಬಾದ್ಗೆ ಹೋ-ಗ್ಸೇರಿ ಬೇಗ... ಬೆಳಕ್ಹರೀತಿದೆ... ದುಡ್ಡಿದೇ ಗಂಟಿನಲ್ಲಿ... ಮೂರ್ತಿಂಗ್ಳು.... ಚಿಕ್ಕಪ್ಪನ ಮಿಲ್ಲು. ಬಂದೇ ಬಿಡ್ತೇವೆ... ಬೇಗ್ಹೊರ್ಡಿ... ಇಲ್ಲಾ ನನ್‌ಮೇಲ್ನಂಬ್ಕೆ ಇಲ್‌ದಿದ್ರೆ, ನಿಮ್ಮನೆ ಬಾಕ್ಲು ತೆಗ್ದೇಬಿಡ್ತೇನೆ... ನೀವು ಬಾಡ್ಗೆ ಕೊಟ್ಟು ನನ್ನೂ ನಮ್ಮಕ್ಕಳ್ನೂ ಇಟ್ಟಿರೋ ಮನೆಬಾಕಲ್ತೆಗ್ದು.

ನಾಯಕ : ಅರ್ಥ್ವೇ! ಅರ್ಥ್ವೆ!... ಒಟ್‌ನಲ್ಲಿ ಇದು ನಿನ್ನರ್ಥ... ನನ್ ಜುಟ್ಟು ನಿನ್ ಕೈಲ್ಸಿಕ್ಕೊಂಡಿದೆ. ಜಗ್ಸು! ಜಗ್ಸು!... ಇಲ್ಲಿ ಬರೋವಾಗ ಹೋಗಿರಬೇಕಾಗಿದ್ದ ನಿನ್ನ ಕೂದ್ಲಿಗ್ಬದ್ಲಾಗಿ... ನನ್ದು ಹೋಗೋ ಸ್ಥಿತೀಗೆ ಬಂದುಬಿಟ್ಟಿದೆ. ಈಗಿರೋ ಸನ್ನಿವೇಶ ಒಂದೇ sentenceನಲ್ಲಿ sum up ಮಾಡ್ತೇನೆ! ಕೇಳ್ಬಿಡು!! ಮೊಟ್ಮೊದ್ಲು ನರಸಿಂಹಯ್ಯನ ವ್ಯಕ್ತಿತ್ವ minussoo! ಮೈಯಿ... mindoo souloo ಮೂರೂ ಮೈನಸ್ಸೂ... ನಿನ್ನ ಪಾತಿವ್ರತ್ಯದ ಪ್ರಭಾವ! ನಿನ್ನ instructions ಇಷ್ಟು:, ಜುಟ್ಟು ಬಿಟ್ಬಿಟ್ರೆ ಶಿರಸಾ ವಹಿಸ್ತೇನೆ!!....

ಮುಖ್ಯ ಔರಂಗಾಬಾದು... ನನ್ ಕಾಶಿ... ಒಂದೇ ಸಂತೋಷ. Minusಉ... twenty five rail chargeಉ... 9950 ಆಯ್ತು ನಿನ್ಕೈಲಿ... goodoo... ನೀನೂ ನಾನೂ ನಮ್ಮಕ್ಳು ಆಯ್ತು; betteroo... ನಿಮ್ಮಾವನಿಗೆ ವೈರಿಯಾದ ನಾನೂ ನಿಮ್ಮ ಚಿಕ್ಕಪ್ಪನೂ ಆಯ್ತು... bestoo... ಹೊ-ರ್ಟೆ... ಹೇಳ್ಬೇಕಾದ್ದೆಷ್ಟೋ ಇದೆ... But ಇದು timeಊ ಅಲ್ಲ... ಅಲ್ದೆ ಹಸಿವು!... ಮರೀಬೇಡ...

ದುಃಖಪಡಬೇಡ ಹೋಗ್ತೇನೇಂತ... ಮೂರೇ ತಿಂಗ್ಳು... after all... ನಿಮ್ಮ ಚಿಕ್ಕಪ್ಪನ ಮನೆ ನಾನು ಹೋಗೋದು...

[ಗಂಟನ್ನು ಎತ್ತಿಕೊಂಡು ರಭಸವಾಗಿ ಕಾಲು ಹಾಕುತ್ತಿದ್ದರೂ ಆಗಾಗ್ಗೆ ತಲೆಯನ್ನು ತಿರುಗಿಸುತ್ತಾ ಹಣತೆಯ ದೀಪದ ಬೆಳಕಿನಿಂದ ಜ್ವಲಿಸುತ್ತಿರುವ ನಾಯಕಿಯ ಆಸ್ಯವನ್ನು ನೋಡಿ ನಿಟ್ಟುಸಿರುಬಿಡುತ್ತಾ ನಿಷ್ಕ್ರಮಿಸುವನು.]

ನಾಯಕಿ : (ನಿಟ್ಟುಸಿರುಬಿಡುತ್ತಾ) ಪಾಪ!... ಇವರನ್ನ ಪಾಪ ಅಂತೇನಲ್ಲ!... ನಾನಲ್ವೆ ಪಾಪಿ!... ನಮ್ಮಮ್ಮನ್ನು... ಕಳ್ಕೊಂಡು, ನಮ್ಮಪ್ಪನ್ನೂ ಬಿಟ್ಟು... ನನ್ನ ಮುಂದಿನ ಗತಿಗೆ ನಮ್ಮಪ್ಪನೇ ನಿಷ್ಕರ್ಷಿಸಿದ ಇವರ ಕೈಹಿಡ್ದು... ಈಗ ಹೀಗಾಗಿ... ನಾನು ಇಪ್ರಿಗ್ಣೆತ್ತ ಮಗೂನೂ... ಕೂಸ್ನೂ.... ನನ್ನ ಕಂದಗ್ಳ ಮುಂದಿನಗತೀ ಏನೂಂತ ನೋಡೋದೇ?! ಇಲ್ಲ ಏನೋ... ವಂದ್ಮಾತಿನಮೇಲೆ ಕೋಪಿಸ್ಕೊಂಡೋಡಿ.... ವಂದು ವಾರ್ವೆಲ್ಲ ಅನ್ನ ನೀರು ಇಲ್ದೆ... ಒಡಾಡ್ತಿತ್ತು... ಕಂಗೆಟ್ಟು... ಮುಸ್ರೆತಿಕ್ಕೋಳು ಬರೋಕ್ಮುಂಚೆ, “ತಂಗ್ಳು, ಹುಳೀಂ”ತ ಕೇಳಿದಿವರ್ನ, ಕಳಿಸ್ತಿದೇನಲ್ಲಾ!... ಕಳ್ಳೀ ಪಾಪಿ... ಇನ್ನೊಬ್ಬರ್ನ... “ಪಾಪ” ಅಂತೇನಲ್ಲಾ!!! (ಕಿಟಕಿಯ ಹೊಸಲಿನ ಮೇಲೆ ತಲೆಯನ್ನೂ ಚಚ್ಚಿಕೊಳ್ಳುವಳು) ನಾನೇನ್ಮಾಡೇನು?! ಮಕ್ಕಳ್ನೂ ಕಟ್ಕೊಂಡು ಇವ್ರೊಂದ್ಗೆ ಹೋಗಿ...? ಇವರ ತಂದೆ ಬಿಟ್‌ಹೋದ ಮುವತ್ಸಾವ್ರ ರೂಪಾಯಿ, ಮೂರ್ವರ್ಷದಲ್ಲಿ, ಇವರ್ಗೂ, ನನ್ಗೂ, ನಮ್ಮಕ್ಳಿಗೂ... ವಂದ್ಬಿಡಿಗಾಸು ಕೂಡ ಸೇರ್ದೆ, ಮಣ್ಣಾಲುಮಾಡಿದ್ವಾಗ್ಲೆ... ಈವೂರಿನ ಗಂಡನಿಲ್ದೆ ವದ್ದಾಡೋ ಹೆಂಗಸು... ತಂದೆ ಇಲ್ದೆ ಕಂಗೆಡೋ ಕೂಸುಗ್ಳು, ಗೋಳಾಡಕೂಡ್ದು ಅಂತ ಮುವತ್ಸಾವರ್ರೂಪಾಯಿ ಕೊಟ್ಟ ಈ ವೂರಿನ ಮಹಾತ್ಮರು, ನಾನೂ ನನ್ನ ಮಕ್ಳು ಹ್ಯಾಗೇಂತ ಕನಿಕರ್ಸಿಕೊಟ್ಟ ಹತ್ ಸಾವ್ರರೂಪಾಯ್ನ ಇವರ ಕೈಗೆ ಹ್ಯಾಗೆ ಕೊಡೋದು?... ನನಗೊಂದೂ ತೋಚೋದಿಲ್ಲ!... (ಕಿಟಕಿಯ ಹೊಸಲಿಗೆ ಮತ್ತೆ ತಲೆಯನ್ನು ಬಡಿಯುತ್ತಾ) ಈಗಾಗ್ಲೆ... ಮನೇಗೆ ಮುಟ್ಬಾರದ ಐವತ್ ರೂಪಾಯ್ನ ಕದ್ದ ನಾನು?... ಇಲ್ಲ! (ಮುದುರಿದ ಮಹಾಸರ್ಪವು ಥಟ್ಟನೆ ಲಾಂಗೂಲಾಂತವೂ ಎದ್ದು ನಿಂತತಂತೆ ಎದ್ದು ಮುಷ್ಟಿಗಳನ್ನು ಬಿಗಿದು) ಇಲ್ಲಾ!... ಎಂದೂ ಇಲ್ಲಾ! ಮನೆ ಬಿಸ್ನೀರಿನಲ್ಲಿ ಮೈತೊಳ್ಕೋಳ್ಳೋಕೆ ಹಿಂಜರಿಯೋರು ಕೆರೇಲಿ ಬಿದ್ದು ಹೋಗೋದಿಲ್ಲಾಂತ ಗೊತ್ತಿದ್ದಿದ್ದರೂನೂವೆ... ಇವರಿಲ್ಲದ ಆರು ದಿನಾನು ಮನೆಯೆಲ್ಲ ಇವರ ಕಿರ್ಲಾಟವಿಲ್ದೆ ಬಡ್ಡ ಗೋಳು!.... ನನ್ನ ಕಂದಗ್ಳು “ಅಪ್ಪೆಲ್ಲೀ?” ಅಂತ ಕಿವಿಗ್ಳು ಸೀಳೋ ಹಾಗೆ ಕೇಳ್ತಿದ್ದದ್ದೂ... ಈಗ್ಕೂಡ ಬಂದು ಬಾಕಲ್ಮುಂ-

ದೆ ಹೊರಳ್ತಾ ಬಾಯ್ಬಿಟ್ಟು ಹೋಗುತ್ತುನೂವೆ, ಬಿಕೋ ಅನ್‌ಸುತ್ತಲಾ!... ನನ್ಗೆ!? ...ಮುಳುಗ್ತಿರೋ ಚಂದ್ರ ತಿರ್ಗಿ ನಾಳೆ ಹ್ಯಾಗೆ ತೇಲ್ತಾನೋ... ಹಾಗೇ ನಾನೂ ನನ್ಕಂದಗ್ಳೂ... ತಿರ್ಗಿ ಇವರನ್ನು ನೋ-ಡ್ತೇವೇ ಅಂತ ತಿಳಿದಿದ್ದರೂನೂವೆ... ಮನಸ್ಸು ನೊಂದುಕೊಂಡು, ಹೀಗಿವ್ರು ಹೋಗ್ತಾರಲ್ಲಾಂತ... ಇಷ್ಟು ಚಚ್ಚಿಕೊಳ್ತೇನಲ್ಲಾ!... ನಾನು!?... ಇನ್ನು... ತಿರ್ಗಿಬರದೇನೂ, ಗಂಡ ಹೋಗಿ... “ಅಮ್ಮಾ, ಅಪ್ಪಾ ಎಲ್ಲಿ ಹೋಗೀದಾನೇ?... ಯಾವಾಗ ಬರ್ತಾನೆ?” ಅಂತ ಕೇಳೋ ಕಂದಗ್ಳಿಗೆ... “ನಾಳೆ, ನಾ-ಳೇಂತ” ಹೆತ್ತ ಮಕ್ಕಳಿಗೆ ಸುಳ್ಳು ಹೇಳಿರೋ ತಾಯಿಗ್ಳ ಗತಿಯೇನೋ?... ದೇವ್ರೇ ಬಲ್ಲ... ನನಗೇನೂ ತೋಚೋದಿಲ್ಲ... ಇದರಲ್ಲೆಲ್ಲಾ ವಂದ್ಸಂತೋಷ ಇವರ ಹುಚ್ಚುತನದಲ್ಲಿ... ನಾನು ಈ ಆರುದಿನ ಕಂ-ಗೆಟ್ಟ ಹಾಗೆ, ಸಾಯೋವರ್ಗೂ ಕಂಗೆಡೋ ಹೆಂಗಸ್ರಿಗೂ... ನನ್ನ ಕಂದಗ್ಳಿಗೆ ಇರೋ ಅಪ್ಪ... ಇಲ್ಲದ ಅವರ ಕಂದಗ್ಳಿಗೂ, ಹೋದೋರನ್ನ ಹಿಂದೆ ಸೆಳ್ಯೋಕಾಗ್ದಿದ್ರೂ, ಅವರು ಬಿಟ್‌ಹೋದ ಅನಾಥರಿ-ಗೆ ಸಹಾಯಮಾಡಿದ್ದೊಂದು ಸಂತೋಷ... ಇನ್ನೀ ಹಾಳುಪೆಟ್ಟಿಗೇಲಿರೋ, ಹತ್‌ಸಾವರ್ರೂಪಾಯಿ, ಗಂಡನ್ನ ಕಳ್ಕೊಂಡ ಹೆಂಗ್ಸು, ಮತ್ತವನು ಬಿಟ್‌ಹೋದ ಮಕ್ಕಳೂ ಮುಂದೆ ಬದಕ್ಲೀ ಅಂತ ಪುಣ್ಯಾ-ತ್ಮರು ಕೊಟ್ ಹೋದ (ಪೆಟ್ಟಿಗೆಯನ್ನು ಸೂಚಿಸಿ) ಹತ್ ಸಾವಿರ್ರೂಪಾಯಿನ... ನಾನೂ ಕಂದಗ್ಳೂ... ಹೊಟ್ಟೆಗಿಲ್ದೆ ಹೋಗ್ತಿರೋ ಇವ್ರು... ಹ್ಯಾಗೆ ತಿಂದು ಬದ್ಕೋದು?... ಸರಿ!... ಸದ್ಯದ ಖರ್ಚಿಗೆ ಐವತ್ತಿ-ಟ್ಕೊಳ್ಳೋದು... ಬಾಕಿ ೯೯೫೦ನ ಆ ಧರ್ಮಿಷ್ಟ ಧರಣಯ್ಯನ ಕೈಲೇ ಇಟ್ಟು ಇದೇ ಸ್ಮಾರಕಸದನಕ್ಕೆ ಇವರ ಹೆಸರಿಗೇಂದ ಹೇಳ್ಬಿಟ್ಟು ನಮ್ಮ ಚಿಕ್ಕಪ್ಪನ ಮನೇಗೇ... ನಾನೂ ಹೋಗಿ ಸೇರೋದು... ಒಂದೇ ದಾರಿ!

[ಬಾಗಿಲ ಹೊರಗಡೆ, ನಾಯಕನು ಹೋದ ಕಡೆಯೇ ನೋಡುತ್ತ, ಕಣ್ಣೀರುಸುರಿಸುತ್ತ ನಿಂತಿರುವ-ಳು]

[ಪರದೆಯು ನಿಧಾನವಾಗಿ ಬೀಳುವುದು]

ಮಕ್ಕಳಿಗಾಗಿ ಹೊಸ ಪ್ರಕಟನೆಗಳು

(ಕಥೆಗಳು, ಹಾಡುಗಳು, ನಾಟಕಗಳು)

	ರೂ.
ಜಡಭರತ ಮಹರ್ಷಿ	೨೫
ಅಭಿಮನ್ಯು	೨೦
ಕರ್ನಾಟಕದ ವೀರರಮಣಿಯರು	೨೫
ಸಮರ್ಥ ರಾಮದಾಸಸ್ವಾಮಿಗಳು	೨೦
ಚಿತ್ತೂರು ರಾಣಿ ಪದ್ಮನಿ	೨೫
ಚಾವುಣ್ಡರಾಯ	೨೦
ಶ್ರೀ ಕೃಷ್ಣದೇವರಾಯ	೨೫
ನೂರ್ ಜಹಾನ್ ಬೇಗಂ	೨೫
ಆರೋಗ್ಯ ವಿಧಾನ ಪ್ರಕಾಶಿಕೆ	೧೫
ಮಹಾಭಾರತದ ಕತೆಗಳು	೨೫
ಪೇಟೆಮಾತೇನಜ್ಜಿ	೨೫
ಮಾಲಂಗಿಮಡು	೧೦
ಧರ್ಮಾನುಗ್ರಹ	೧೫
ರತ್ನ ಸಿಂಹಾಸನ	೧೫
ಗುರುದಕ್ಷಿಣೆ	೨೦
ಬಾಲ್ಯ ಎಲ್ಲಿದೆ?	೨೦
ಮಹಮೂದ್ ಗವಾನ	೩೦

ಕಾಮನು ಬಿಲ್ಲು ೪೦

ಪರಿಸರ : ಅಂದು-ಇಂದು ೫೦

ಡೊಂಬರ ಚೆನ್ನೆ ೩೦

ನೇಗಿಲ ಮಹಿಮೆ ೩೦

ಹುತ್ತರಿಯ ಹಾಡು ೩೦

ಜೋಗುಳ ೩೦

ರಾಗಿ ಬೀಸುವ ಹಾಡು ೩೦

ಶ್ರೀರಾಮನ ಜನನ, ವಿವಾಹ, ವನವಾಸ ೩೦

ಕುಂಭಕರ್ಣನ ಸಂಹಾರ ೨೫

ಸೀತಾಪಹರಣ ೧೫

ಶ್ರೀರಾಮಪಟ್ಟಾಭಿಷೇಕ ೨೦

ಕೈಲಾಸಂ

ನಾಟಕಗಳು

	ರೂ.
ಟೊಳ್ಳು ಗಟ್ಟಿ	18
ಪೋಲಿ ಕಿಟ್ಟಿ	30
ಬಹಿಷ್ಕಾರ	15
ಹೋಂ ರೂಲು	18
ಅಮ್ಮಾವ್ರ ಗಂಡ	25
ಬಂಡ್ವಾಳ್ವಿಲ್ಲದ ಬಡಾಯಿ	25
ನಮ್‌ಕಂಪ್ನಿ	25
ತಾಳೀ ಕಟ್ಟೋಕ್ಕೂಲೀನೆ	30
(ಪಾತೂ ತೌರ್ಮನೆ, ಸಾತೂ ತೌರ್ಮನೆ, ಯೋಧ್ವವಾಣಿ)	30
ಹುತ್ತದಲ್ಲಿ ಹುತ್ತ	50
ಸೂಳೆ	40
ಮೂರು ನಾಟಕಗಳು (ವೈದ್ಯನ ವ್ಯಾಧಿ, ಸೀಕರ್ಣೆ ಸಾವಿತ್ರಿ, ಗಂಡಸ್ಕತ್ರಿ)	21
ಎರಡು ನಾಟಕಗಳು (ಅನುಕೂಲಕ್ಕೊಬ್ಬಣ್ಣ, ನಮ್ಮಬ್ಬ)	25
ನಮ್‌ಬ್ರಾಹ್ಮಣ್ಕೆ	21
ಸತ್ಯವನ ಸಂತಾಪ	25

ಕಾವ್ಯಾಲಯ : ಪ್ರಕಾಶಕರು
ಜಯನಗರ, ಮೈಸೂರು 570 014